ಮಿಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ


ಮಾರ್ಚ್ 2010

ರೂ. 15

ಮಹಿಳಾ ವಿಶೇಷಾಂಕ

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಶತಮಾನೋತ್ಸವ





Kerala State IT Mission (KSITM), an autonomous nodal IT implementation agency for Information Technology Department under the Government of Kerala, in collaboration with The Centre for Development of Imaging Technology (C-DIT), a premier research and development organization have launched a Centre for Advanced Training in Free and Open Source Software (CATFOSS) in ITeS Habitat Centre, Jawaharlal Nehru International Stadium, Kaloor, Ernakulam. The CATFOSS is the first of its kind in the country conducting Advanced Training in FOSS.

- First revolutionary endeavour in the country to develop highly qualified human resource pool in **FOSS platform** (Free and open source software).
- Collaborative attempt of Kerala State IT Mission and C-DIT.
- 17 Eminent academic council members have been selected from across India.
- Governing council constituted to coordinate the activities.
- Soon to Collaborate with universities and research organizations.
- Personality and soft skill development also dealt with in the training programme.
- Students made to pass through all the phases of FOSS based Software Development Life Cycle (SDLC) during the training programme.

www.cdit.org

catfoss

Eligibility for Admission


B.Tech/ B.E (Computer Science/ IT/ Electronics & Communication/ Electrical and Electronics)/ MCA/ M.Sc. (Computer Science/ IT) from any recognized university/institution in the country. The duration of the course is six months.

KERALA STATE IT MISSION

CATFOSS, ITeS Habitat Centre, Jawaharlal Nehru International Stadium, Kaloor, Kochi, Ph: +91 484 3115743, Mob: 094470 18629

ಮಾರ್ಚ್
8

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ
ಶತಮಾನೋತ್ಸವ ವಿಶೇಷ ಸಂಚಿಕೆ
2010



ಜನಶಕ್ತಿ
ಕನ್ನಡ ವಾರಪತ್ರಿಕೆ

ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮ ನಗರ
ಬೆಂಗಳೂರು 560 027,
ದೂರವಾಣಿ : 080 - 22115479, 22236462
e-mail : js_weekly@yahoo.com
Blog : www.janashakthi.worldpress.com

ಒಳ ಪುಟಗಳಲ್ಲಿ ....

ಪುಟಸಂಖ್ಯೆ

ಬೆಲೆ : ರೂ.15 /-

JANASHAKTHI Kannada Vaara Patrike :
Printed and Published by G.N.Nagaraja
Editor : S.Y.Gurushanth
On behalf of / Woned by
Communist Party of India (Marxist)
and Printed by : Kriya Prakashana
No.12, 18th Cross, S.R.Nagar, Bangalore - 560 027
Ph: 080-22236462
Email : js_weekly@yahoo.com
Blog : janashakthi.worldress.com

ಕೃತಜ್ಞತೆಗಳು

- ಲೇಖಕರಿಗೆ, ಅನುವಾದಕರಿಗೆ
- ಜಾಹಿರಾತುಗಾರರಿಗೆ
- ಅಂದವಾಗಿ ಮುದ್ರಿಸಿದ ಕ್ರಿಯಾ ಪ್ರಕಾಶನದ ಚಂದ್ರು, ಮುಖಪುಟ ವಿನ್ಯಾಸಗೊಳಿಸಿದ ಎಂ.ರಾಮು, ಅಕ್ಷರ ಜೋಡಿಸಿ ಪುಟ ವಿನ್ಯಾಸಗೊಳಿಸಿದ ರೇಖಾ ನಾಯಕ್, ರವಿ, ಭಾವಚಿತ್ರ, ರೇಖಾಚಿತ್ರ ಸಂಗ್ರಹಿಸಿದ ವೀರಣ್ಣ ಕಮ್ಮನಿ, ನಾಗರಾಜ್, ಹಾಗೂ ಮುದ್ರಣ ಘಟಕದ ಕೆಲಸಗಾರರು ಇವರಿಗೆ ಹಾಗೂ ತಪ್ಪುತಿದ್ದಿ ಸಹಾಯ ಮಾಡಿದ ಹಾಗೂ ಸಹಕರಿಸಿದ ಎಲ್ಲರಿಗೂ.
- ವಿಶೇಷ ಧನ್ಯವಾದಗಳು : ಈ ಸಂಚಿಕೆಯನ್ನು ರೂಪಿಸುವಲ್ಲಿ ಕೈ ಕಲೆಸಿದ ಕೆ.ನೀಲಾ, ಎಸ್.ವರಲಕ್ಷ್ಮಿ, ಕೆ.ಎಸ್.ವಿಮಲಾ, ಕೆ.ಎಸ್.ಲಕ್ಷ್ಮಿ, ಗೌರಮ್ಮ, ಕುಮಾರಿ.ಸಿ ಇವರಿಗೆ.

ವಿಮೋಚನೆಯ ಹಾದಿಯಲ್ಲಿ......

ಮಾರ್ಚ್ 8, 2010 ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಶತಮಾನೋತ್ಸವವನ್ನು ಜಗತ್ತಿನಾದ್ಯಂತ ಆಚರಿಸಲಾಗಿದೆ. ಮುಂದೆ ಒಂದು ವರುಷದ ಕಾಲವು ಈ ಆಚರಣೆಗಳು ಮುಂದುವರಿಯಲಿವೆ.


ಯುಗ ಯುಗಗಳಿಂದಲೂ ಮಹಿಳೆ ಅನ್ಯಾಯಕ್ಕೆ, ಅಸಮಾನತೆಗೆ, ಶೋಷಣೆಗೆ, ಅಪಮಾನಕ್ಕೆ ಗುರಿಯಾಗುತ್ತಲೇ ಬರುತ್ತಿದ್ದಾಳೆ. ಜಗತ್ತಿನ ಬಹುಪಾಲು ದೇಶಗಳಲ್ಲಿ ಮಹಿಳೆ ಇಪ್ಪತ್ತೊಂದನೆ ಶತಮಾನದಲ್ಲೂ ಈಗಲೂ ಎರಡನೇ ದರ್ಜೆಯ ನಾಗರೀಕಳೇ. ಇಂದಿನ ಮಹಿಳಾ ಚಳುವಳಿ ಹಾಗೂ ಮಹಿಳಾ ಸಮುದಾಯದ ಮುಂದಿರುವ ಸವಾಲುಗಳು ಬೃಹತ್ತಾದವು. ಮನೆಮನೆಗಳಲ್ಲಿ, ಹೊಲ ಗದ್ದೆ ತೋಟ, ಕೊಟ್ಟಿಗೆ, ಕಾರ್ಖಾನೆ, ಕಛೇರಿ, ಗಣಿ, ಕ್ವಾರಿ ಇತ್ಯಾದಿಗಳಲ್ಲಿ ಬಿಡುವಿಲ್ಲದೆ ದಣಿವರಿಯದೇ ದುಡಿಯುವ ಮಹಿಳೆಯ ಶ್ರಮವನ್ನು ಎಷ್ಟೋ ಸಾರಿ ಈ ಪುರುಷಪ್ರಧಾನ ಮೌಲ್ಯಗಳ ಕನ್ನಡಕದಿಂದ ನೋಡುವ ಸಮಾಜ ದುಡಿಮೆ ಎಂದೇ ಗುರುತಿಸುವುದಿಲ್ಲ. ಸಮಾನ ಕೂಲಿ, ಸಮಾನ ವೇತನವಿಲ್ಲ. ಆಸ್ತಿಯ ಮೇಲೆ, ಸಂಪನ್ಮೂಲಗಳ ಮೇಲೆ ಒಡೆತನ ನಗಣ್ಯವೆಂಬಷ್ಟು ಕಡಿಮೆ.

ಮಹಿಳೆಯ ಸಾಮಾಜಿಕ ಸ್ಥಾನಮಾನಗಳು ಪರಿಸ್ಥಿತಿಗಳು ಭಾರತದಂತಹ ದೇಶದಲ್ಲಿ ಇಂದಿಗೂ ಅತ್ಯಂತ ವಿಷಾದನೀಯವಾಗಿಯೇ ಇದೆ. ತಾನು ಎರಡನೇ ದರ್ಜೆ ಪ್ರಜೆ ಎನ್ನುವಂತಹ ಪರಿಸ್ಥಿತಿಯನ್ನು ಸ್ವತ: ಮಹಿಳೆಯೇ ಒಪ್ಪಿಕೊಳ್ಳುವಂತೆ ಮಾಡುವ ಪ್ರತಿಗಾಮಿ ವಿಚಾರಗಳನ್ನು ದುಸ್ಥಿತಿಯೆನ್ನು ನಮ್ಮ ಸಂಸ್ಕೃತಿ, ಪರಂಪರೆ ಎಂದು ಹೇಳಲಾಗುವುದರಲ್ಲಿ ಧಾರಾಳವಾಗಿ ಸೇರ್ಪಡೆಗೊಳಿಸಲಾಗಿದೆ. ಮೂಢನಂಬಿಕೆ, ಅಂಧಶ್ರದ್ಧೆಯ ಕೂಪದಲ್ಲಿರುವ ಮಹಿಳಾ ಸಮುದಾಯದಲ್ಲಿ ಜಾಗೃತಿ ಮೂಡಿಸುವಂತಹ ಕರ್ತವ್ಯಕ್ಕೆ ಬದಲಾಗಿ ಮಹಿಳೆಯನ್ನು ಇನ್ನಷ್ಟು ಆಳಕ್ಕೆ ತುಳಿಯುವ ಕೆಲಸವನ್ನು ನಮ್ಮ ಆಧುನಿಕ ಮಾಧ್ಯಮಗಳು ಅತ್ಯಂತ ಆಕ್ರಮಣಕಾರಿಯಾಗಿ ಕೈಗೊಂಡಿವೆ.

ಮತ್ತೊಂದೆಡೆ ಮಹಿಳೆ ಎಂದರೆ ಪ್ರದರ್ಶನದ ಬೊಂಬೆ, ಭೋಗದ ವಸ್ತು ಎಂಬ ಮನೋಭಾವವನ್ನು ಸಮಾಜದಲ್ಲೂ ಮಹಿಳೆಯರ ಮನದಲ್ಲೂ ವ್ಯಾಪಕವಾಗಿ ಬಿತ್ತಲಾಗುತ್ತಿದೆ. ಮಹಿಳೆಯರ ಮೇಲೆ ದೌರ್ಜನ್ಯ ದಬ್ಬಾಳಿಕೆಗಳು ಎಗ್ಗಿಲ್ಲದೇ ಸಾಗಿವೆ. ಭ್ರೂಣ ಹತ್ಯೆಯಂತಹ ಪ್ರವೃತ್ತಿಗಳು ಮಹಿಳಾ ಸಂಕುಲದ ಅಸ್ತಿತ್ವಕ್ಕೆ ಸಂಚಕಾರ ತರುತ್ತಿವೆ.

ಇಂತಹ ಹೊತ್ತಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಶತಮಾನೋತ್ಸವ ಬಂದಿದೆ. ಮಹಿಳೆಯರನ್ನು ನಿರ್ಬಂಧಿಸುವ, ಶೋಷಿಸುವ, ದೌರ್ಜನ್ಯವನ್ನು ಹೇರುವ ಅಸಮಾನ ವ್ಯವಸ್ಥೆಯನ್ನು ಪುಡಿಗುಟ್ಟಿ, ಪ್ರತಿಗಾಮಿ ಮೌಲ್ಯಗಳನ್ನು ಬೇರುಸಹಿತ ಕಿತ್ತೆಸೆಯುವಂತಹ ಮಹಿಳಾ ವಿಮೋಚನೆ ಸಾಧಿಸುವ ದಾರಿ ಯಾವುದು ಎಂಬುದು ಈ ಸಂದರ್ಭದಲ್ಲಿ ಗಂಭೀರವಾಗಿ ಚಿಂತನೆಗೆ ಒಳಗಾಗಬೇಕಾದ ವಿಚಾರವಾಗಿದೆ.

'ಜನಶಕ್ತಿ ಕನ್ನಡ ವಾರಪತ್ರಿಕೆ'ಯು ಈ ನಿಟ್ಟಿನಲ್ಲಿ ಒಂದು ಮಹತ್ವದ ಪ್ರಯತ್ನಕ್ಕೆ ಕೈಹಾಕಿದೆ. ಮಹಿಳಾ ವಿಮೋಚನೆಯ ಪ್ರಶ್ನೆಯೊಂದಿಗೆ ಥಳಕು ಹಾಕಿಕೊಂಡಿರುವ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಮತ್ತಿತರ ನಾನಾ ಆಯಾಮಗಳನ್ನು ಕುರಿತು ಆಳ ವಿಶ್ಲೇಷಣೆಯುಳ್ಳ ಉತ್ತಮ ಲೇಖನಗಳುಳ್ಳ ವಿಶೇಷ ಸಂಚಿಕೆಯನ್ನು 'ಜನಶಕ್ತಿ' ಹೊರತರುತ್ತಿದೆ. ಇದು ಮಹಿಳಾ ಚಳುವಳಿಗೆ ಹಾಗೂ ಒಟ್ಟು ಸಮಾಜದ ಪ್ರಗತಿಗೆ ಪೂರಕವಾದ ದೃಷ್ಟಿಕೋನವನ್ನು ಓದುಗರ ಮುಂದಿಡಲಿದೆ ಎಂಬ ವಿಶ್ವಾಸ ನಮ್ಮದು.



ಈ ಸಂಚಿಕೆಯಲ್ಲೂ ಹಲವು ಕೊರತೆ, ಲೋಪದೋಷಗಳಿರಬಹುದು, ಚರ್ಚಾರ್ಹವಾದ ವಿಚಾರಗಳಿರಬಹುದು, ಓದುಗರು, ಒಂದು ಮಾನವೀಯ ಸಮಾಜದ ನಿರ್ಮಾಣದಲ್ಲಿ ಆಸಕ್ತಿಯುಳ್ಳವರು, ಅಸಮಾನ ವ್ಯವಸ್ಥೆಯ ಬದಲಾವಣೆಯ ಕನಸುಳ್ಳವರು ಪ್ರತಿಕ್ರಿಯಿಸಿದರೆ, ಓದಿ, ವಿಚಾರಗಳು ಸಮಾಜದಲ್ಲಿ ಒಂದಷ್ಟು ಜಾಗೃತಿಗೆ ಕಾರಣವಾದರೆ 'ಜನಶಕ್ತಿ' ಯ ಶ್ರಮ ಸಾರ್ಥಕ ಎಂದು ಭಾವಿಸುತ್ತೇವೆ.

ಎಸ್.ವೈ.ಗುರುಶಾಂತ್
ಸಂಪಾದಕರು



ಮಾರ್ಚ್ 8 : ನೂರು ವರ್ಷಗಳ ನೆನಪು

ಮಸುಕಾಗಬಾರದ ಸಮಾಜವಾದಿ ಹೋರಾಟದ ಸ್ಫೂರ್ತಿ

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ವ್ಯಾಪಕಗೊಳ್ಳುತ್ತಾ ನಡೆದಿದ್ದರೂ ಸಹ ಅದರ ಐತಿಹಾಸಿಕ ಹಿನ್ನೆಲೆಯನ್ನು ಮಸುಕು ಮಾಡುವ ಪ್ರವೃತ್ತಿಗಳು ಬೆಳೆಯುತ್ತಿವೆ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಎಂದರೆ ಬಂಡವಾಳಶಾಹಿ ಶೋಷಣೆಯ ವಿರುದ್ಧ ಮಹಿಳಾ ವಿಮೋಚನೆಗಾಗಿ ನಡೆದ ಸಮಾಜವಾದಿ ಹೋರಾಟದ ಪರಂಪರೆ ಎನ್ನುವುದನ್ನು ಮರೆಯುವಂತಿಲ್ಲ.

- ಬೃಂದಾ ಕಾರಟ್

ನೂರು ವರ್ಷಗಳ ಹಿಂದೆ 1910ರ ಆಗಸ್ಟ್ 27ರಂದು ಕ್ರಾಂತಿಕಾರಿ ನಾಯಕರಾದ ಕ್ಲಾರಾ ಜೆಟ್‌ಕಿನ್ ಅವರ ಸಂಗಾತಿಗಳಾದ ಅಲೆಕ್ಸಾಂಡ್ರಿಯಾ ಕೊಲಾಂಥೈ ಮತ್ತು ಇತರರೊಂದಿಗೆ ಕೊಪನ್‌ಹೇಗನ್‌ನಲ್ಲಿ ಸಂಘಟಿಸಿದ್ದ ಅಂತಾರಾಷ್ಟ್ರೀಯ ಸಮಾಜವಾದಿ ಮಹಿಳಾ ಸಮ್ಮೇಳನದಲ್ಲಿ 'ಅಂತಾರಾಷ್ಟ್ರೀಯ ಮಹಿಳಾ ದಿನ' ಆಚರಿಸುವ ಕುರಿತ ನಿರ್ಣಯ ಮಂಡಿಸಿದರು.

ಐತಿಹಾಸಿಕ ನಿರ್ಣಯ: "ಆಯಾ ದೇಶಗಳ ಶ್ರಮಿಕ ವರ್ಗದ ವರ್ಗಪ್ರಜ್ಞೆ, ರಾಜಕೀಯ ಮತ್ತು ಕಾರ್ಮಿಕ ಸಂಘಟನೆಗಳ ಸಹಮತದೊಂದಿಗೆ ಎಲ್ಲ ದೇಶಗಳ ಸಮಾಜವಾದಿ ಮಹಿಳೆಯರು ಪ್ರತಿ ವರ್ಷ ಒಂದು ನಿಗದಿತ ದಿನ ಮಹಿಳಾ ದಿನಾಚರಣೆಯನ್ನು ಆಚರಿಸುತ್ತಾರೆ. ಇದರ ಒಂದು ಪ್ರಮುಖ ಗುರಿ ಮಹಿಳೆಯರಿಗೆ ಮತದಾನದ ಹಕ್ಕು ಪಡೆಯಲು ಸಹಾಯ ಮಾಡುವುದು. ಈ ಬೇಡಿಕೆಯನ್ನು ಮಹಿಳೆಯರ ಸಮಗ್ರ ಪ್ರಶ್ನೆಗಳೊಂದಿಗೆ ಸಮಾಜವಾದಿ ನೋಟದಲ್ಲಿ ಒತ್ತಾಯ ಮಾಡುವುದು. ಈ ಮಹಿಳಾ ದಿನಾಚರಣೆ ಎಂಬುದು ಅಂತಾರಾಷ್ಟ್ರೀಯ ಗುಣಸ್ವರೂಪ ಹೊಂದಿರಬೇಕು ಮತ್ತು ಇದನ್ನು ಬಹಳ ಎಚ್ಚರಿಕೆಯಿಂದ ರೂಪಿಸಬೇಕು". ಮಹಿಳೆಯರಿಗೆ ಮತದಾನದ ಹಕ್ಕು ಎಂಬ ಬೇಡಿಕೆಯು ಸಮಾಜವಾದಿ ಚಳವಳಿಗೆ ಇನ್ನಷ್ಟು ಬಲವನ್ನು ಒಗ್ಗೂಡಿಸಲಿದೆ, ಬಲಿಷ್ಠಗೊಳಿಸಲಿದೆ ಎಂಬುದು ಅವರ ಘೋಷಣೆಯಾಗಿತ್ತು. ಆದರೆ ಆ ಸಂದರ್ಭದಲ್ಲಿ ವರ್ಷದಲ್ಲಿ ಯಾವ ದಿನವನ್ನು ಮಹಿಳಾ ದಿನವನ್ನಾಗಿ ಆಚರಿಸಬೇಕೆಂಬುದರ ಕುರಿತು ನಿರ್ದಿಷ್ಟವಾಗಿ ನಿರ್ಧರಿಸಲಿಲ್ಲ.

ಮೊದಲ ಆಚರಣೆ : ಫಿನ್‌ಲೆಂಡ್ ಸಂಸತ್ತಿಗೆ ಆಯ್ಕೆಯಾಗಿದ್ದ ಮೂವರು ಮಹಿಳೆಯರು ಸೇರಿದಂತೆ 17 ದೇಶಗಳ ಕಾರ್ಮಿಕ ಸಂಘಟನೆಗಳು, ಸಮಾಜವಾದಿ ಪಕ್ಷಗಳು, ದುಡಿಯುವ ಮಹಿಳೆಯರು ಸಂಘ ಸಂಸ್ಥೆಗಳು ಮತ್ತು ನೂರು ಪ್ರತಿನಿಧಿಗಳು ಅವಿರೋಧವಾಗಿ ಈ ನಿರ್ಣಯಕ್ಕೆ ಅಂಗೀಕಾರ ನೀಡಿದರು. ನಂತರದ ವರ್ಷ ಅಂದರೆ 1911ರಲ್ಲಿ ಕೊಪನ್‌ಹೇಗನ್‌ನಲ್ಲಿ ಕೈಗೊಂಡ ನಿರ್ಣಯದ ಅಂಗವಾಗಿ 10 ಲಕ್ಷದಷ್ಟು ಪುರುಷರು ಮತ್ತು ಮಹಿಳೆಯರು ಜರ್ಮನಿ, ಆಸ್ಟ್ರಿಯಾ, ಡೆನ್ಮಾರ್ಕ್, ಸ್ವಿಜರ್‌ಲ್ಯಾಂಡ್ ಮತ್ತು ಯೂರೋಪ್‌ನ ಇತರ ಕೆಲವು ದೇಶಗಳಲ್ಲಿ ರ್‍ಯಾಲಿಗಳನ್ನು ನಡೆಸಿದರು. ಪ್ರಷ್ಯದ ರಾಜನ ವಿರುದ್ದದ 1848ರ ಸಶಸ್ತ್ರ ಹೋರಾಟದ ನೆನಪಿನಲ್ಲಿ ಮಾರ್ಚ್ 19 ದಿನವನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು. ಬೊಲ್ಶೆವಿಕ್ ಪಕ್ಷದ ಕೇಂದ್ರ ಸಮಿತಿಗೆ ಆಯ್ಕೆಯಾದ ಮೊದಲ ಮಹಿಳೆಯಾದ ಅಲೆಕ್ಸಾಂಡ್ರಿಯಾ ಕೊಲಾಂಥೈ "ಮತ ಪ್ರದರ್ಶನಗಳು ನಿರೀಕ್ಷೆಯನ್ನು ಮೀರಿ ಬೃಹತ್ ಆಗಿದ್ದವು.... ಜರ್ಮನಿ ಮತ್ತು ಆಸ್ಟ್ರಿಯಾಗಳಲ್ಲಿ ಮಹಿಳೆಯರು ಸಾಗರೋಪಾದಿಯಲ್ಲಿ ಆಗಮಿಸಿದ್ದರು. ಸಣ್ಣ ಪಟ್ಟಣಗಳು ಮತ್ತು ಹಳ್ಳಿಗಳು ಸೇರಿದಂತೆ ಎಲ್ಲ ಕಡೆಗಳಲ್ಲೂ ಸಭೆಗಳನ್ನು ನಡೆಸಲಾಯಿತು. ಎಲ್ಲ ಸಭಾಂಗಣಗಳೂ ತುಂಬಿ ತುಳುಕಿದ್ದವು. ಮಹಿಳೆಯರಿಗೆ ಸ್ಥಳ ಬಿಟ್ಟುಕೊಡುವಂತೆ ಪುರುಷ ಕಾರ್ಮಿಕರನ್ನು ಕೇಳಬೇಕಾಗಿ ಬಂತು. ಇಂತಹ ಅತಿ ದೊಡ್ಡ ಪ್ರದರ್ಶನವೊಂದರಲ್ಲಿ 30 ಸಾವಿರಕ್ಕೂ ಹೆಚ್ಚು ಮಹಿಳೆಯರು ಪಾಲ್ಗೊಂಡಿದ್ದರು. ಮಹಿಳಾ ಪ್ರತಿಭಟನಾಕಾರರ ಬ್ಯಾನರ್‌ಗಳನ್ನು ಕಿತ್ತು ಹಾಕಲು ಪೊಲೀಸರು ನಿರ್ಧರಿಸಿದರು. ಆದರೆ ಮಹಿಳೆಯರು ಗಟ್ಟಿಯಾಗಿ ನಿಂತರು. ನಂತರ ಭಾರಿ ಕಾದಾಟ ನಡೆಯಿತು. ಸಮಾಜವಾದಿ ಪಕ್ಷಗಳ



ಮುಖಂಡರ ನೆರವಿನಿಂದ ಆಗಬಹುದಾಗಿದ್ದ ರಕ್ತಪಾತವನ್ನು ತಡೆಯಲು ಸಾಧ್ಯವಾಯಿತು" ಎಂದು ಬರೆದಿದ್ದಾರೆ. ತ್ಸಾರ್ ಆಡಳಿತ ಇದ್ದ ರಷ್ಯಾದಲ್ಲಿ ಫೆಬ್ರವರಿ ಕೊನೆ ಭಾನುವಾರದಂದು ಮಹಿಳಾ ದಿನವನ್ನು ಆಚರಿಸಲಾಯಿತು (ರಷ್ಯಾದಲ್ಲಿ ಆಚರಿಸಿದ ದಿನ ಜ್ಯೂಲಿಯನ್ ಕ್ಯಾಲೆಂಡರ್ ಭಾನುವಾರವಾಗಿದ್ದರೆ, ಜಗತ್ತಿನ ಇತರೆಲ್ಲ ಕಡೆ ಬಳಕೆ ಮಾಡುವ ಜಾರ್ಜಿಯನ್ ಕ್ಯಾಲೆಂಡರ್ ಪ್ರಕಾರ ಆ ದಿನ ಮಾರ್ಚ್ 8 ಆಗಿದೆ). ಅಮೆರಿಕದಲ್ಲಿ ಸಮಾಜವಾದಿ ಮಹಿಳೆಯರು ಅದಾಗಲೆ 1908ರಲ್ಲಿ ರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಿದ್ದು ಈ ನಿಟ್ಟಿನಲ್ಲಿ ಇದು ಮೊದಲನೆಯದಾಗಿದೆ. ಅಲ್ಲಿ ನಡೆಸಿದ ರ‍್ಯಾಲಿಯಲ್ಲಿ ಮಹಿಳೆಯರು ತಮಗೆ ಮತದಾನದ ಹಕ್ಕು ನೀಡಬೇಕೆಂದು ಒತ್ತಾಯಿಸಿದರು. ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿನ ಮಹಿಳಾ ಕಾರ್ಮಿಕರು ತೀವ್ರ ಹೋರಾಟಗಳನ್ನು ನಡೆಸಿದರು. ಪೊಲೀಸ್ ದೌರ್ಜನ್ಯಕ್ಕೆ ಒಳಗಾದರು. ಮಹಿಳಾ ದಿನದ ಆಚರಣೆಯ ಭಾಗವಾಗೇ ಅವರ ಸಮಸ್ಯೆಗಳನ್ನು ಪ್ರತಿಬಿಂಬಿಸಲಾಯಿತು. ಯುದ್ಧ ನಡೆಸಲು ಸಾಮ್ರಾಜ್ಯಶಾಹಿಗಳು ನಡೆಸಿದ ತಯಾರಿಗಳು ಅಂತಾರಾಷ್ಟ್ರೀಯ ದಿನಾಚರಣೆಗೆ ಹೊಸ ಆಯಾಮ ನೀಡಿದ್ದು ರಾಷ್ಟ್ರಗಳ ಗಡಿಗಳನ್ನೇ ಅಳಿಸಿ ಹಾಕಿತು. ಜಗತ್ತಿನಾದ್ಯಂತ ಎಲ್ಲ ದೇಶಗಳ ಮಹಿಳೆಯರು ಯುದ್ಧಕ್ಕೆ ವಿರುದ್ಧವಾಗಿ ಶಾಂತಿಗಾಗಿ ಒತ್ತಾಯಿಸಿದರು. ಮುಂದುವರೆದಂತೆ 1913ರಿಂದ ಮಾರ್ಚ್ 8 ಅಂತಾರಾಷ್ಟ್ರೀಯ ದಿನಾಚರಣೆ ಆಚರಿಸುವ ದಿನವಾಗಿ ಆಚರಣೆಗೆ ಬಂತು. ಆದರೆ ನಂತರದ ವರ್ಷವೇ ವಿಶ್ವ ಯುದ್ಧ ಆರಂಭವಾಯಿತು. ಆದರೂ 1915 ಮತ್ತು 1916ರಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲು ಪ್ರಯತ್ನಗಳನ್ನು ನಡೆಸಲಾಯಿತು. ಆದರೆ ಶಾಂತಿಗೆ ಕರೆ ನೀಡಲು ಮುಂದೆ ಬಂದವರನ್ನು ಯುದ್ಧೋನ್ಮತ್ತರು ಬೇಟೆಯಾಡಲು ಆರಂಭಿಸಿದರು. ಶಾಂತಿಗಾಗಿ ನಡೆಸುವ ಪ್ರತಿಭಟನೆಗಳು, ಸಭೆಗಳನ್ನು ನಿಷೇಧಿಸಲಾಯಿತು. ಆ ಸಂದರ್ಭದಲ್ಲಿ ನಾರ್ವೆಯಲ್ಲಿ ಮಾತ್ರ ಸಾರ್ವಜನಿಕವಾಗಿ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಕೆಲವು ಮಹಿಳಾ ಪ್ರತಿನಿಧಿಗಳು ಒಂದೆಡೆ ಸೇರಿ ಶಾಂತಿಗಾಗಿ ದಿಟ್ಟತನದಿಂದ ನಿರ್ಣಯವನ್ನು ಕೈಗೊಂಡರು" ಎಂದು ಕೊಲಾಂಥೈ ವಿವರಿಸಿದ್ದಾರೆ.

1917ರಲ್ಲಿ ಮಹಿಳಾ ದಿನಾಚರಣೆ: ಆಗ 1917 ಬಂತು. ರಷ್ಯಾದಲ್ಲಿ ತ್ಸಾರ್ ಆಡಳಿತದ ವಿರುದ್ಧ ಪೆಟ್ರೋಗ್ರಾರ್ಡ್‌ನಲ್ಲಿ ಕಾರ್ಮಿಕರ ಭಾರಿ ಪ್ರತಿಭಟನೆಗಳು ಎದ್ದುಬಂದವು. ಕಾರ್ಮಿಕರು ಮಾರ್ಚ್ 8ರ ಆಚರಣೆ



ಸಂಘಟಿಸುವ ಕಾರ್ಯಕ್ಕೆ ಮಹಿಳಾ ಕಾರ್ಮಿಕರು ಮುಂದಾದರು. ಮಹಿಳಾ ಕಾರ್ಮಿಕರು, ಸೈನಿಕರ ಪತ್ನಿಯರು, ಕಾರ್ಮಿಕರ ಮನೆಗಳಲ್ಲಿನ ಮಹಿಳೆಯರು, ಹಸಿವಿನಿಂದ ಬಳಲುತ್ತಿದ್ದ ಮಹಿಳೆಯರು ಮತ್ತು ಯುದ್ಧ ವಿಚಾರಣಾಧೀನರು ಪೆಟ್ರೋಗಾರ್ಡ್‌ನ ರಸ್ತೆಗಳಿಗೆ ಧುಮ್ಮಿಕ್ಕಿ ಹರಿದು ಬಂದರು. ಅವರು ಯುದ್ಧವನ್ನು ಬಹಿರಂಗವಾಗಿ ಖಂಡಿಸಿದರು. ಶೋಷಣೆಯನ್ನು ಕೊನೆಗೊಳಿಸಲು ಆಗ್ರಹಿಸಿದರು. ಶಾಂತಿ ಮತ್ತು ಆಹಾರಕ್ಕಾಗಿ ಒತ್ತಾಯಿಸಿದರು. ಅವರ ಹೋರಾಟಕ್ಕೆ ಇನ್ನಷ್ಟು ಶಕ್ತಿ ತುಂಬುವಂತೆ ಕಾರ್ಮಿಕರು ಮತ್ತು ಸೈನಿಕರು ಜೊತೆಗೂಡಿದರು. ಮಹಿಳೆಯರ ಈ ಹೋರಾಟ ಚಾರಿತ್ರಿಕವಾದ ಜನತೆಯ ಬೃಹತ್ ಕ್ರಾಂತಿಕಾರಿ ಚಳವಳಿಗೆ ನಾಂದಿಯಾಯಿತು. ಇದರ ಪರಿಣಾಮವಾಗಿ ಜಗತ್ತಿನಲ್ಲಿ ಸಮಾಜವಾದಿ ದೇಶವೊಂದು ಉಗಮವಾಯಿತು. ಪೆಟ್ರೋಗ್ರಾಡ್‌ನಲ್ಲಿ ಮಹಿಳೆಯರು ನಡೆಸಿದ ಈ ಹೋರಾಟ, ತ್ಸಾರ್ ಆಡಳಿತದ ರಷ್ಯಾದ ಎಲ್ಲ ಭಾಗಗಳಲ್ಲಿ ನಡೆದ ಸಂಘರ್ಷಗಳು 1868ರ ಡಿಸೆಂಬರ್ 2ರಂದು ಲೂದ್ವಿಗ್ ಕುಡೆಲ್‌ಮನ್ ಅವರಿಗೆ ಬರೆದಿದ್ದ ಪತ್ರದಲ್ಲಿ ಕಾರ್ಲ್‌ಮಾರ್ಕ್ಸ್ ಅವರು ಹೇಳಿದ್ದನ್ನು ನಿಜವಾಗಿಸಿತು. 'ಮಹಿಳೆಯರ ಹೋರಾಟಗಳಿಲ್ಲದೆ ಮಹಾ ಸಾಮಾಜಿಕ ಕ್ರಾಂತಿಗಳು ಅಸಾಧ್ಯ ಎಂಬುದು ಚರಿತ್ರೆ ಕುರಿತು ಸ್ವಲ್ಪ ಮಟ್ಟಿಗೆ ತಿಳಿದ ಎಲ್ಲರಿಗೂ ಗೊತ್ತಿರುತ್ತದೆ' ಎಂದು ಮಾರ್ಕ್ಸ್ ಪತ್ರದಲ್ಲಿ ಬರೆದಿದ್ದರು.

ಪೂರಕ ಬೆಳವಣಿಗೆಗಳು.../ ಭಾರತದಲ್ಲಿ ಆಚರಣೆ

1922ರಲ್ಲಿ ರಷ್ಯಾದ ಕಾರ್ಮಿಕ ವರ್ಗದ ನೇತೃತ್ವದ ಸರ್ಕಾರ ಮೊದಲಿಗೆ ಮಾರ್ಚ್ 8ರಂದು ಮಹಿಳಾ ದಿನಾಚರಣೆ ಆಚರಿಸಲು ಸಾರ್ವತ್ರಿಕ ರಜೆ ಘೋಷಿಸಿತು. ಚೀನಾದಲ್ಲಿ ಮೊದಲ ಬಾರಿಗೆ ಇದೇ ವರ್ಷದಲ್ಲಿ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಈ ಆಚರಣೆ ವರ್ಷದಿಂದ ವರ್ಷಕ್ಕೆ ಜಗತ್ತಿನಾದ್ಯಂತ ವಿಸ್ತರಿಸುತ್ತಾ ಸಾಗಿತು. ಭಾರತದಲ್ಲಿ ಮೊದಲ ಬಾರಿಗೆ 1931ರಲ್ಲಿ ಲಾಹೋರ್‌ನಲ್ಲಿ ಸಂಘಟಿಸಿದ್ದ 'ಸಮಾನತೆಗಾಗಿ ಏಷ್ಯಾದ ಮಹಿಳಾ' ಸಮಾವೇಶದಲ್ಲಿ ಈ ದಿನಾಚರಣೆ ಆಚರಿಸಲಾಯಿತು. ಮಹಿಳೆಯರಿಗೆ ಸಮಾನತೆ ನೀಡಬೇಕೆಂಬುದರ ಜೊತೆಗೆ ಮಹಿಳೆಯರ ಸಮಾನತೆಯನ್ನು ದೇಶಗಳ ಸ್ವಾತಂತ್ರ್ಯಗಳೊಂದಿಗೂ ಜೊತೆಗೂಡಿಸಲಾಯಿತು.

ಎಡಪಂಥೀಯ ಮಹಿಳಾ ಸಂಘಟನೆಗಳು ಮತ್ತು ಸಮಾಜವಾದಿ ದೇಶಗಳು ಈ ಆಚರಣೆಯನ್ನು ಮುಂದುವರೆಸಿದವು. 60ರ ದಶಕದಲ್ಲಿ ಮಹಿಳಾ ಚಳವಳಿಯ ಅಲೆ ಅಮೆರಿಕವನ್ನು ತಟ್ಟಿತು ಮತ್ತು ಬಹುತೇಕ ಯೂರೋಪ್ ದೇಶಗಳಲ್ಲಿ ವ್ಯಾಪಿಸಿತು. ಈ ಎಲ್ಲದರ ಪರಿಣಾಮವಾಗಿ ವುಮೆನ್ಸ್ ಇಂಟರ್‌ನ್ಯಾಷನಲ್ ಡೆಮಾಕ್ರಟಿಕ್ ಫೆಡರೇಷನ್ (ಡಬ್ಲ್ಯುಐಡಿಎಫ್) ಅಧ್ಯಕ್ಷರ ಸಲಹೆ ಮೇಲೆ ವಿಶ್ವಸಂಸ್ಥೆ 1975ರಲ್ಲಿ ಮಾರ್ಚ್ 8ನ್ನು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನಾಗಿ ಘೋಷಿಸಿತು.

ಸಮಾಜವಾದಿ ಸ್ಫೂರ್ತಿ : ಮರೆಯಲಾಗದ್ದು

ಇಂದು ಜಗತ್ತಿನಾದ್ಯಂತ ಎಲ್ಲ ದೇಶಗಳು ಮಾರ್ಚ್ 8ನ್ನು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನಾಗಿ ಆಚರಿಸುತ್ತಿವೆ. ಇದು ಸ್ವಾಗತಾರ್ಹ ಬೆಳವಣಿಗೆ. ಆದರೆ ಇದು ಮಾರ್ಚ್ 8ರ ಆಚರಣೆಯ ಹಿಂದಿರುವ ಶೋಷಕ ಬಂಡವಾಳಶಾಹಿ ವ್ಯವಸ್ಥೆಗೆ ಸವಾಲೆಸೆಯುವ ಮತ್ತು ಸಮಾನತೆಗಾಗಿ ಹುಟ್ಟಿ ಬಂದ ಮಹಿಳೆಯರ, ಅದರಲ್ಲೂ ದುಡಿಯುವ ಮಹಿಳೆಯರ ಸಮಾಜವಾದಿ ಚಳವಳಿಯ ಸಿದ್ಧಾಂತಗಳ ಸ್ಫೂರ್ತಿಯನ್ನು

ದುರ್ಬಲಗೊಳಿಸಲು ಹಾದಿ ಮಾಡಿಕೊಟ್ಟಿತು. ಮಾರ್ಚ್ 8ರ ಹಿಂದಿರುವ ಸಮಾಜವಾದಿ ಸಂಘರ್ಷಗಳನ್ನು ಸ್ಮರಿಸುವುದು ತುಂಬಾ ಮುಖ್ಯವಾಗಿರುವುದರೊಂದಿಗೆ ಮಾರುಕಟ್ಟೆ ತಂತ್ರಗಳನ್ನು ಹೊಂದಿರುವ ಕ್ಷುಲ್ಲಕ ಆಚರಣೆಗಳನ್ನು ತಡೆಯಬೇಕಾಗಿದೆ.

ಎರಡು ಆಯಾಮಗಳು: ಮಾರ್ಚ್ 8ರ ಆಚರಣೆಯ ಹಿಂದೆ ಎರಡು ಇತಿಹಾಸ ಇದ್ದು ಇವರೆಡೂ ನಮಗೆ ತುಂಬಾ ಪ್ರಸ್ತುತವಾಗಿವೆ. ಮೊದಲನೆಯದು ಮತ್ತು ಅತಿ ಮುಖ್ಯವಾದ ಅಂಶವೆಂದರೆ ಮುಖ್ಯವಾಗಿ ಮಹಿಳೆಯರನ್ನು ಸಂಘಟಿಸುವುದು ಮತ್ತು ಅದರಲ್ಲೂ ದುಡಿಯುತ್ತಿರುವ ಮಹಿಳೆಯರನ್ನು ಸಂಘಟಿಸಿ ಬಂಡವಾಳಶಾಹಿ ಶೋಷಣೆಯಿಂದ ವಿಮೋಚನೆಗಾಗಿ, ಸಮಾಜವಾದಿ ಪರ್ಯಾಯಕ್ಕಾಗಿ ಅಣಿ ನೆರೆಸುವ ಅಗತ್ಯ. ಯೂರೋಪ್, ರಷ್ಯಾ ಮತ್ತು ಅಮೆರಿಕಗಳಲ್ಲಿ ಮಹಿಳೆಯರ ವಿಮೋಚನೆಗಾಗಿ ಶ್ರಮಿಕ ಮಹಿಳಾ ಸಮುದಾಯ ಕೈಗೊಂಡ ಕ್ರಾಂತಿಕಾರಿ ಚಳವಳಿಗಳ ಮೂಲಕ ನಿರ್ವಹಿಸಿದ ಅತಿ ಮುಖ್ಯವಾದ ಪಾತ್ರದ ಪರಿಗಣಿಸುವಿಕೆಗೆ ಆಧಾರ. ಉದ್ಯಮಿಗಳು ಭಾರಿ ಲಾಭಗಳನ್ನು ಗಳಿಸಲು ಮಹಿಳೆಯರು ಮತ್ತು ಬಾಲಕಾರ್ಮಿಕರನ್ನು ಅಪಾರ ಪ್ರಮಾಣದಲ್ಲಿ ಕೈಗಾರಿಕಾರಂಗದಲ್ಲಿ ಅತ್ಯಂತ ಕೆಟ್ಟ ಪರಿಸ್ಥಿತಿಗೆ ತಳ್ಳಿ ಅವರ ಶ್ರಮವನ್ನು ಬಳಕೆ ಮಾಡಿಕೊಳ್ಳುತ್ತಾ ಬಂದಿದ್ದಾರೆ. ಇದರಿಂದಾಗಿಯೇ ಮಾರ್ಕ್ಸ್ ಅವರು ಕ್ಯಾಪಿಟಲ್ ಪುಸ್ತಕದ ಮೊದಲ ಆವೃತ್ತಿಯಲ್ಲಿ 'ಯಂತ್ರಗಳನ್ನು ಬಳಕೆ ಮಾಡುವ ಬಂಡವಾಳಶಾಹಿಗಳು ಮೊದಲು ಶೋಷಣೆ ಮಾಡಲು ಬಳಕೆ ಮಾಡಿಕೊಳ್ಳುವುದು ಮಹಿಳೆಯರು ಮತ್ತು ಮಕ್ಕಳ ಶ್ರಮವನ್ನು . ಪ್ರತಿಯೊಬ್ಬ ಕಾರ್ಮಿಕನ ಕುಟುಂಬದ ಸದಸ್ಯರನ್ನು -ಮಹಿಳೆ ಅಥವಾ ಮಕ್ಕಳೆನ್ನದೆ- ಬಂಡವಾಳವನ್ನು ರೂಪಾಂತರಿಸುವ ಕಾರ್ಯತಂತ್ರದಡಿಯಲ್ಲಿ ನೇರವಾಗಿ ನೇಮಕ ಮಾಡಿಕೊಳ್ಳುತ್ತಾ ಶ್ರಮ ಮತ್ತು ಶ್ರಮಿಕರನ್ನು ಕೂಲಿಯಾಳು (ವೇಜ್ ಲೇಬರರ್)ಗಳನ್ನಾಗಿ ಪರಿವರ್ತಿಸಲಾಯಿತು ಎಂದು ಬರೆದಿದ್ದಾರೆ. ಈ ಶೋಷಣೆಯ ವಿರುದ್ಧ ಸಮಾಜವಾದಿ ಮಹಿಳಾ ಕಾರ್ಯಕರ್ತರು ದುಡಿಯುವ ಮಹಿಳೆಯರನ್ನು ನಿರಂತರವಾಗಿ ಸಂಘಟಿಸುವ ಪ್ರಯತ್ನಗಳನ್ನು ನಡೆಸಿದರು.

ಮೊದಲ ಕಮ್ಯೂನಿಸ್ಟ್ ಇಂಟರ್‌ನ್ಯಾಷನಲ್‌ನಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸ್ ಅವರುಗಳು ಮಹಿಳೆಯರು ಸೇರಿದಂತೆ ಎಲ್ಲ ಕಾರ್ಮಿಕರನ್ನು ಸಂಘಟಿಸಲು ಕಾರ್ಮಿಕ ಸಂಘಟನೆಗಳಿಗೆ ನಿರ್ದಿಷ್ಟವಾದ ನಿರ್ದೇಶನಗಳನ್ನು ನೀಡಿದರು. ಅವರ ಬೇಡಿಕೆಗಳ ಪಟ್ಟಿಯನ್ನು ರೂಪಿಸಲು ಅಗತ್ಯ ಮಾಹಿತಿಯನ್ನು ಸಂಗ್ರಹಿಸಲು ಪ್ರಶ್ನಾವಳಿಯನ್ನು ಸಿದ್ಧಪಡಿಸಿದರು. ಮಕ್ಕಳು ಮತ್ತು ಮಹಿಳೆಯರು ಜೀತದಾಳುಗಳಂತೆ ದುಡಿಯುತ್ತಿದ್ದು ಪ್ರತಿದಿನ ಎಂಟು ಗಂಟೆ ಕೆಲಸದ ಕಾನೂನನ್ನು ಅನುಷ್ಠಾನ ಮಾಡುವುದೂ ಇದರಲ್ಲಿ ಸೇರಿತ್ತು. ಪೂರ್ವ ಲಂಡನ್‌ನಲ್ಲಿನ ಕಾರ್ಖಾನೆಗಳಲ್ಲಿ ಮಹಿಳೆಯರನ್ನು ಸಂಘಟಿಸುವಲ್ಲಿ ಮಾರ್ಕ್ಸ್ ಅವರ ಪುತ್ರಿ ಎಲೆನಾರ್ ಪ್ರಮುಖ ಪಾತ್ರ ನಿರ್ವಹಿಸಿದರು. 1888ರಲ್ಲಿ ಲಂಡನ್‌ನಲ್ಲಿನ ಬೆಂಕಿ ಪೆಟ್ಟಿಗೆ ಕಾರ್ಖಾನೆಯಲ್ಲಿ ಕೆಲಸ ಮಾಡುವ ಇಡೀ ಮಹಿಳಾ ಕಾರ್ಮಿಕರು ತರುಣಿಯರಿಂದ ಹಿಡಿದು ಮುದುಕಿಯರವರೆಗೆ ಕೆಲಸ ಸ್ಥಗಿತಗೊಳಿಸಿದರು. ಕಾರ್ಮಿಕ ಸಂಘಟನೆಗಳು ಅವರಿಗೆ ಬೆಂಬಲ ವ್ಯಕ್ತಪಡಿಸಿದವು ಮತ್ತು ಅವರು ಹಲವಾರು ಬೇಡಿಕೆಗಳನ್ನು ಈಡೇರಿಸಿಕೊಂಡರು. ಇದು ಮಹಿಳಾ ಕಾರ್ಮಿಕ ಚಳವಳಿಗೆ ಭಾರಿ ಉತ್ತೇಜನ ನೀಡಿತು. ಅಮೆರಿಕದಲ್ಲಿನ ಜವಳಿ ಕಾರ್ಮಿಕರು ಸಹ ಸಮಾಜವಾದಿ ಮಹಿಳಾ ಸಂಘಟನೆಗಳ ಬೆಂಬಲದೊಂದಿಗೆ ಇದೇ ರೀತಿ ಸಂಘಟಿತರಾಗಿ ಹಲವಾರು ಬೇಡಿಕೆಗಳನ್ನು ಈಡೇರಿಸಿಕೊಂಡರು. 21ನೇ ಶತಮಾನದ ಆರಂಭದಲ್ಲಿ ಈ ಹೋರಾಟಗಳು ತೀವ್ರ ಸ್ವರೂಪ ಪಡೆದುಕೊಂಡು ಮಾರ್ಚ್ 8ರ ಆಚರಣೆಗೆ ಅರ್ಥಪೂರ್ಣ ಹಿನ್ನೆಲೆ ಒದಗಿಸಿತು. ಮಾರ್ಚ್ 8ನ್ನು ಆಚರಿಸುವುದರ ಹಿಂದಿನ ಪ್ರಮುಖ ತಿರುಳೆಂದರೆ ಬಂಡವಾಳಶಾಹಿ ವಿರುದ್ಧ ಹೋರಾಟ ನಡೆಸುವುದು ಮತ್ತು ಆ ಹೋರಾಟದಲ್ಲಿ ದುಡಿಯುವ ಮಹಿಳೆಯರ ಪ್ರಮುಖ ಪಾತ್ರವನ್ನು ನಿರ್ವಹಿಸುವುದಾಗಿದೆ.

ಮಾರ್ಚ್ 8ನ್ನು ಆಚರಿಸುವುದರ ಹಿಂದಿನ ಪ್ರಮುಖ ತಿರುಳೆಂದರೆ ಬಂಡವಾಳಶಾಹಿ ವಿರುದ್ಧ ಹೋರಾಟ ನಡೆಸುವುದು ಮತ್ತು ಆ ಹೋರಾಟದಲ್ಲಿ ದುಡಿಯುವ ಮಹಿಳೆಯರ ಪ್ರಮುಖ ಪಾತ್ರವನ್ನು ನಿರ್ವಹಿಸುವುದಾಗಿದೆ.

ಒಗ್ಗಟ್ಟು ಒಡೆಯುವುದೇ?

ಹಲವು ಬಾರಿ ಕಾರ್ಮಿಕ ವರ್ಗದ ಐಕ್ಯತೆಯನ್ನು ಒಡೆಯುತ್ತದೆ ಎಂದು ಭಾವಿಸಲಾಗುತ್ತಿದ್ದ ಮಹಿಳಾ ದಿನಾಚರಣೆಗಳು ಮತ್ತು ಅವರ ಬೇಡಿಕೆಗಳನ್ನು ಪ್ರತ್ಯೇಕವಾಗಿ ನೋಡಬೇಕೆಂದು ಪುರುಷ ಸಂಗಾತಿಗಳಿಗೆ ಮನವರಿಕೆ ಮಾಡಿಕೊಡಲು ಆ ಸಂದರ್ಭದಲ್ಲಿ ಮಹಿಳಾ ಸಮಾಜವಾದಿ ಮಹಿಳಾ ಲೇಖಕರು ಮಾಡಿದ ಪ್ರಯತ್ನಗಳು ಭಾರಿ ಪರಿಶ್ರಮದಾಯಕವಾಗಿದ್ದವು ಮತ್ತು ಅದರಲ್ಲಿ ಅವರು ಯಶಸ್ವಿಯಾದರು. ಸಮಾಜವಾದಿ ಚಳವಳಿಗಳಲ್ಲಿ ದುಡಿಯುವ ವರ್ಗದ ನಡುವೆ ಮಹಿಳೆಯನ್ನು ಮಹಿಳೆಯಾಗಿ ಕಾಣಬೇಕೆಂಬುದರ ಮಹತ್ವದ ಕುರಿತು ಲೆನಿನ್ ಅವರು 1920ರಲ್ಲಿ ಜೆಟ್‌ಕಿನ್ ಅವರೊಂದಿಗೆ ನಡೆಸಿದ ಸಂಭಾಷಣೆಯಲ್ಲಿ ಕಾರ್ಮಿಕ ಚಳುವಳಿಯೊಳಗೆ ಮಹಿಳೆಯನ್ನು ಮಹಿಳೆಯಾಗಿ ಪರಿಗಣಿಸದ ಸಮಾಜವಾದಿ ಸಂಘಟನೆಯೊಳಗಿನ ಹಾಗೂ ಕಾರ್ಮಿಕ ಚಳುವಳಿಯ ಸಂಗಾತಿಗಳನ್ನು ಕಟುವಾಗಿ ಟೀಕಿಸಿದರು. ಅವರ ಆಗಿನ ಪ್ರತಿಪಾದನೆಗಳು ಈಗಲೂ ಅಷ್ಟೇ ಮುಖ್ಯವಾಗಿವೆ.

ಈಗಿನ ಹೊಸ ಉದಾರೀಕರಣ ಯುಗದಲ್ಲಿ ದುಡಿಯುವ ವರ್ಗದ ಮಹಿಳೆ ಮತ್ತು ಬಡ ಮಹಿಳೆಯರು -ಗ್ರಾಮೀಣ ಪ್ರದೇಶ ಸೇರಿದಂತೆ- ಅತಿ ಹೆಚ್ಚಿನ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಬಂಡವಾಳಶಾಹಿ ಸಿದ್ಧಾಂತವನ್ನು ಹೊಂದಿರುವ ಸರ್ಕಾರಗಳು ಮತ್ತು ಮಾರುಕಟ್ಟೆ ಆಧಾರಿತ ಆರ್ಥಿಕತೆ ಮೇಲೆ ಅವಲಂಬಿತವಾಗಿರುವುದು ಅತಿ ಹೆಚ್ಚಿನ ಹಣದುಬ್ಬರ, ನಿರುದ್ಯೋಗ, ಕೆಲಸದಿಂದ ತೆಗೆದುಹಾಕುವುದು ಮತ್ತು ಕಡಿಮೆ ವೇತನಕ್ಕೆ ದುಡಿಸಿಕೊಳ್ಳುವುದನ್ನು ಹೆಚ್ಚಿಸಿವೆ. ಇವೆಲ್ಲವು ಮಹಿಳೆಯರನ್ನು ಭಾರಿ ಸಂಕಷ್ಟಕ್ಕೆ ಈಡು ಮಾಡಿದೆ. ಮಹಿಳೆಯರು ಮತ್ತು ಹೆಣ್ಣು ಮಕ್ಕಳಲ್ಲಿ ಪೌಷ್ಠಿಕಾಂಶದ ಕೊರತೆಯಲ್ಲಿ ಇದು ಎದ್ದು ಕಾಣುತ್ತಿದೆ. ಮಹಿಳೆಯರು ಸಂಘಟಿತರಾದ ಕಡೆಗಳಲ್ಲಿ ಪ್ರತಿರೋಧ ಬೆಳೆಯುತ್ತಿದೆ. ಹೆಚ್ಚಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಬಡಜನ ಅವರ ಹಕ್ಕುಗಳಿಗಾಗಿ ಸಂಘಟಿತರಾಗುತ್ತಿದ್ದಾರೆ, ವಿವಿಧ ರೀತಿಯ ಪ್ರತಿಭಟನೆಗಳೂ ಎದುರಾಗುತ್ತಿವೆ. ಇತ್ತ ವಿಶೇಷ ಗಮನ ಹರಿಸಬೇಕು ಮತ್ತು ಈ ನಿಟ್ಟಿನಲ್ಲಿ ಅಗತ್ಯ ಪ್ರಯತ್ನಗಳನ್ನು ಮಾಡಬೇಕು.

ಅದೇ ಸಂದರ್ಭದಲ್ಲಿ ಮತ್ತೊಂದು ಪ್ರಮುಖ ಬೆಳವಣಿಗೆಯೊಂದು ಕಾಣಿಸಿಕೊಂಡಿತು. ಉದಾರವಾದಿ ಬೂರ್ಷ್ವಾ (ಬಂಡವಾಳಶಾಹಿ) ಮಹಿಳಾ ಸಂಘಟನೆಗಳು ಮತ್ತು ಮಹಿಳೆಯರಿಗೆ ರಾಜಕೀಯ ಮತದಾನದ



ಹಕ್ಕಿನ ತೀವ್ರಗಾಮಿ ಮಹಿಳಾ ಚಳವಳಿಗಳು ಬ್ರಿಟನ್, ಅಮೆರಿಕ ಮತ್ತು ಯೂರೋಪ್‌ನ ಕೆಲವು ದೇಶಗಳಲ್ಲಿ ಭಾರಿ ವೇಗವಾಗಿ ನಡೆದವು. ಸಫ್ರಾಜೆಟ್, ಅಂದರೆ ಮಹಿಳೆಗೆ ಮತ ಚಲಾಯಿಸುವ ಅಧಿಕಾರ ಪ್ರತಿಪಾದಿಸುವ ಈ ಚಳವಳಿಯಲ್ಲಿ ಬೂರ್ಷ್ವಾ ಹಿನ್ನೆಲೆಯ ಸುಶಿಕ್ಷಿತ ಮಹಿಳೆಯರು ಮತದ ಹಕ್ಕಿಗಾಗಿ ಬೀದಿಗಿಳಿದರು. ಈ ಚಳವಳಿಗೆ ಸಂಬಂಧಿಸಿದಂತೆ ಸಮಾಜವಾದಿ ಮಹಿಳೆಯರ ಪ್ರತಿಕ್ರಿಯೆ ಏನಾಗಿರಬೇಕಿತ್ತು? ನೂರು ವರ್ಷಗಳ ನಂತರ ಈ ಉತ್ತರ ತುಂಬಾ ಸ್ಪಷ್ಟವಾಗಿದೆ. ಆದರೆ ಅಂದಿನ ಸಂದರ್ಭದಲ್ಲಿ ಸಮಾಜವಾದಿ ಚಳವಳಿಗಳ ನಡುವೆಯೂ ಪುರುಷರಿಗೆ ಸಮಾನವಾಗಿ ಮಹಿಳೆಯರಿಗೂ ಓಟಿನ ಹಕ್ಕು ನೀಡಬೇಕೆಂಬ ನಿರ್ಣಯಕ್ಕೆ ಸಂಬಂಧಿಸಿದಂತೆ ಬೆಂಬಲ ಪಡೆಯಲು ಕ್ಲಾರಾ ಜೆಟ್‌ಕಿನ್ ಭಾರಿ ಹೋರಾಟಗಳನ್ನೇ ನಡೆಸಬೇಕಾಯಿತು. ಎರಡನೇ ಕಮ್ಯೂನಿಸ್ಟ್ ಇಂಟರ್‌ನ್ಯಾಷನಲ್‌ನಲ್ಲೂ ಸಹ ಇದಕ್ಕೆ ಭಾರಿ ವಿರೋಧಗಳು ವ್ಯಕ್ತವಾದವು. ಈ ಬೇಡಿಕೆಗೆ ಚರ್ಚ್‌ಗಳ ವಿರೋಧ ವ್ಯಕ್ತವಾಗಬಹುದು ಮತ್ತು ಈಗಾಗಲೇ ಮತದಾನದ ಹಕ್ಕಿಗಾಗಿ ನಡೆಸುತ್ತಿರುವ ಹೋರಾಟಗಳಿಂದ ಹಲವು ದೇಶಗಳಲ್ಲಿ ಶ್ರೀಮಂತ ವರ್ಗದ ಮಹಿಳೆಯರಿಗೆ ಈಗಾಗಲೇ ನೀಡಿರುವ ಮತದಾನದ ಹಕ್ಕಿಗೆ ಅನಗತ್ಯವಾಗಿ ಧಕ್ಕೆಯುಂಟು ಮಾಡಬಹುದು ಎಂಬುದು ಅವರ ವಿರೋಧಕ್ಕೆ ಕಾರಣವಾಗಿತ್ತು. ಇನ್ನು ಕೆಲವರ ವಿರೋಧಕ್ಕೆ ಬೇರೆಯೇ ಕಾರಣವಿತ್ತು. ಈ ಬೇಡಿಕೆಯ ನ್ಯಾಯಬದ್ಧತೆಯನ್ನು ಅರ್ಥ ಮಾಡಿಕೊಳ್ಳಲು ಸಾಕಷ್ಟು ಸಮಯ ತೆಗೆದುಕೊಳ್ಳುವುದರಿಂದ ಈಗಿನ ಸಂದರ್ಭದಲ್ಲಿ ಈ ಬೇಡಿಕೆ ಮುಂದಿಡುವುದು ಕಾರ್ಮಿಕ ವರ್ಗದ ನಡುವೆಯೇ ವಿಭಜನೆ ಉಂಟು ಮಾಡಲಿದೆ ಎಂಬ ನೆಪವನ್ನು ಮುಂದಿಟ್ಟಿದ್ದರು. ಈ ಬೇಡಿಕೆ ಇತರ ಹೋರಾಟಗಳನ್ನು ದಿಕ್ಕು ತಪ್ಪಿಸಲಿದ್ದು, ವರ್ಗ ಹೋರಾಟದಿಂದ ಚಳವಳಿಗಳನ್ನು ಬೇರೆಡೆಗೆ ತಿರುಗಿಸಲು ಪ್ರಯತ್ನಿಸುತ್ತಿರುವ ಆಳುವ ವರ್ಗಗಳಿಗೆ ಅಸ್ತ್ರವಾಗಲಿದೆ ಎಂದು ಈಗಲೂ ಕೆಲವರು ಭಾವಿಸಿದ್ದಾರೆ. ಈ ಎಲ್ಲ ಭಿನ್ನ ಅಭಿಪ್ರಾಯಗಳನ್ನು 1907ರಲ್ಲಿ ಮೊದಲ ಬಾರಿಗೆ ಸ್ಟಟ್‌ಗರ್ಟ್ ಸಮಾವೇಶದಲ್ಲಿ ಮತ್ತು 1910ರ ಮಾರ್ಚ್ 8ರಂದು ಕೋಪನ್‌ಹೇಗನ್‌ನಲ್ಲಿ ಸಮಾವೇಶದಲ್ಲಿ ಮುಕ್ತವಾಗಿ ಚರ್ಚೆಗೆ ಬಂದವು. 1910ರ ಮಾರ್ಚ್ 8 ರಂದೇ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ನಿರ್ಣಯವನ್ನು ಅಂಗೀಕರಿಸಲಾಯಿತು. 1907ರ ಸ್ಟಟ್‌ಗರ್ಟ್ ಸಭೆಯಲ್ಲಿ 58 ಮಹಿಳೆಯರು ಪಾಲ್ಗೊಂಡಿದ್ದರು. ಸ್ಟಟ್‌ಗರ್ಟ್‌ನಲ್ಲೇ ನಿರ್ಣಯ ಅಂಗೀಕರಿಸಲು ಮುಂದಾಗಲಾಯಿತು. ಆದರೆ ನಂತರದಲ್ಲೇ ನಡೆಯಲಿದ್ದ 900ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದ ಎರಡನೇ ಕಮ್ಯೂನಿಸ್ಟ್ ಇಂಟರ್‌ನ್ಯಾಷನಲ್‌ನಲ್ಲಿ ವಿಸ್ತೃತ ಚರ್ಚೆಗೆ ಮುಂದಿಡಲು ನಿರ್ಧರಿಸಲಾಯಿತು. ಕ್ಲಾರಾ ಜೆಟ್‌ಕಿನ್‌ನಂತಹ ಮಹಿಳಾ ನಾಯಕಿಯರು ವರ್ಗ ಹೋರಾಟದ ನಡುವಿನ ಸಂಬಂಧಗಳು, ಮತದಾನದ ಹಕ್ಕಿನ ಹೋರಾಟವನ್ನು ಮುಂದಕ್ಕೊಯ್ಯುವುದು ಮತ್ತು ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಮಹಿಳೆಯರು ನೇರವಾಗಿ ತೊಡಗಿಸಿಕೊಳ್ಳಬೇಕಾದ ಮಹತ್ವದ ಕುರಿತು ಸ್ಪಷ್ಟವಾಗಿ ತಮ್ಮ ವಾದ ಮಂಡಿಸಿದರು.

ಮೇಲ್ವರ್ಗದ ಕುಲೀನ ಮಹಿಳೆಯರು ಮತದಾನದ ಹಕ್ಕಿನ ಬೇಡಿಕೆಯನ್ನು ಎತ್ತಿದ ಅಷ್ಟೇ ಕಾರಣಕ್ಕೆ ದುಡಿಯುವ ವರ್ಗಕ್ಕೆ ಈ ಬೇಡಿಕೆ ಅಪ್ರಸ್ತುತವಾಗುವುದಿಲ್ಲ. ಇದಕ್ಕೆ ವಿರುದ್ಧವಾಗಿ ಸಾಮಾಜವಾದಿ ನೋಟವನ್ನು ಹೊಂದಿರುವ ಮಹಿಳೆಯರು ಚಳವಳಿಗಳಲ್ಲಿ ನೇರವಾಗಿ ಮಧ್ಯ ಪ್ರವೇಶ ಮಾಡಬೇಕು. ಮತದಾನವನ್ನು ಪ್ರಜಾಸತ್ತಾತ್ಮಕ ಹಕ್ಕಾಗಿ ಮಾಡುವ ಬೇಡಿಕೆಯನ್ನು ಆಳುವ ವರ್ಗಗಳ ವಿರುದ್ಧದ ಅಸ್ತ್ರವನ್ನಾಗಿ ಬಳಕೆ ಮಾಡಬೇಕೆಂದು ಆಗ್ರಹಿಸಿದರು. ಈ ವಾದಕ್ಕೆ ಬಹುಮತದ ಬೆಂಬಲ ದೊರೆಯಿತು. ಮತ ಚಲಾವಣೆಯನ್ನು ಸಾರ್ವತ್ರಿಕ ಹಕ್ಕನ್ನಾಗಿ ಮಾಡುವ ನಿರ್ಣಯಕ್ಕೆ ಸಮಾಜವಾದಿ ಚಳವಳಿಗಳು ಬೆಂಬಲ ಸೂಚಿಸಬೇಕೆಂಬ ನಿರ್ಣಯವನ್ನು -ಪರವಾಗಿ 47 ಮತ್ತು ವಿರುದ್ಧವಾಗಿ 11 ಮತಗಳೊಂದಿಗೆ ಅಂಗೀಕರಿಸಲಾಯಿತು. ಮುಖ್ಯ ಸಮ್ಮೇಳನವೂ ಈ ನಿರ್ಣಯವನ್ನು ಅಂಗೀಕರಿಸಿತು. ಅಂದಿನಿಂದಲೂ ಎಲ್ಲ ಸಮಾಜವಾದಿ ಚಳವಳಿಗಳೂ ಮಹಿಳೆಯರ ಮತದಾನದ ಹಕ್ಕಿನ ಬೇಡಿಕೆಗೆ ಸಂಪೂರ್ಣ ಬೆಂಬಲ ಸೂಚಿಸುತ್ತಾ ಬಂದವು. ಈ ಹಿನ್ನಲೆಯಲ್ಲಿ ನಾವು 1910 ಮಾರ್ಚ್ 8ರ ಅಂತಾರಾಷ್ಟ್ರೀಯ ದಿನಾಚರಣೆ ನಿರ್ಣಯದ ಮಹತ್ವವನ್ನು ಅರಿತುಕೊಳ್ಳಬೇಕು. ಮಹಿಳೆಯರಿಗೆ ಮತದಾನದ ಹಕ್ಕು ಎಂಬ ಘೋಷಣೆ ಸಮಾಜವಾದಿ ವಿಶ್ವ ನಿರ್ಮಾಣದ ಹೋರಾಟದಲ್ಲಿನ ಮಹಿಳೆಯರ ಒಗ್ಗಟ್ಟನ್ನು ಇನ್ನಷ್ಟು ಬಲಿಷ್ಠಗೊಳಿಸುತ್ತದೆ.

ಮೊದಲ ಮತದಾನದ ಹಕ್ಕು ಜಾರಿ

ಕೇವಲ ಹತ್ತು ವರ್ಷಗಳ ನಂತರ ರಷ್ಯಾದಲ್ಲಿ ಜಾರ್ ದೊರೆಯ ಆಡಳಿತವನ್ನು ಕೆಳಕ್ಕಿಳಿಸಿ ಅಧಿಕಾರ ವಹಿಸಿಕೊಂಡ ಕಮ್ಯೂನಿಸ್ಟ್ ಪಕ್ಷವು ಮಹಿಳೆಯರಿಗೆ ಬೇಷರತ್ತಾಗಿ ಮತದಾನದ ಹಕ್ಕನ್ನು ನೀಡುವ ಮೂಲಕ ಇಡೀ ಜಗತ್ತಿನಲ್ಲೇ ಮೊದಲ ರಾಷ್ಟ್ರವಾಯಿತು. ಪ್ರಸಕ್ತ ಸಂದರ್ಭದಲ್ಲಿ ವಿಧಾನಸಭೆ ಮತ್ತು ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಕಲ್ಪಿಸುವ ಮಹಿಳಾ ಮಸೂದೆ ಕುರಿತಂತೆ ಭಾರಿ ಚರ್ಚೆಗಳು ನಡೆಯುತ್ತಿವೆ. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿಯನ್ನು ಶೇಕಡ 33 ರಿಂದ 50ಕ್ಕೆ ಹೆಚ್ಚಿಸುವ ಕುರಿತು ಮಾತುಕತೆಗಳು ಮುಂದುವರೆದಿವೆ. ಇಂತಹ ಸಂದರ್ಭವನ್ನು ಯಶಸ್ವಿಯಾಗಿ ಬಳಕೆ ಮಾಡಿಕೊಂಡು ಬಂಡವಾಳಶಾಹಿ ವ್ಯವಸ್ಥೆಯ ದಿವಾಳಿಕೋರ ನೀತಿಗಳನ್ನು ಬಯಲುಗೊಳಿಸುವ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಾಗಿದೆ.

ಈ ಎರಡೂ ದೃಷ್ಟಿಕೋನಗಳ ಹಿನ್ನೆಲೆಯಲ್ಲಿ ಮಾರ್ಚ್ 8ರ ಆಚರಣೆ ತುಂಬಾ ಮುಖ್ಯವಾಗಿದೆ. ಆರ್ಥಿಕ ಮತ್ತು ರಾಜಕೀಯ ಅಂಶಗಳನ್ನು ಒಂದರೊಳಗೊಂದು ಅಂತರ್ಗತಗೊಳಿಸಿ ಮಹಿಳೆಯರ ಹೋರಾಟಕ್ಕೆ ಬಲಿಷ್ಠ ವೇದಿಕೆಯನ್ನು ರೂಪಿಸಬೇಕಾಗಿದೆ. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಬೇಕೆಂಬ ಕರೆ ನೂರು ವರ್ಷಗಳ ನಂತರವೂ ಇಡೀ ಜಗತ್ತಿನಲ್ಲಿ ಪ್ರತಿಧ್ವನಿಸಲಿದೆ ಎಂದು ಕೋಪನ್‌ಹೇಗನ್‌ನಲ್ಲಿ

ಭಾಗವಹಿಸಿದ್ದ 100 ಮಹಿಳೆಯರು ಊಹಿಸಿರಲಾರರು. ಈ ಕರೆಯು ಅಂದು ಎಷ್ಟು ಪ್ರಮುಖವಾಗಿತ್ತೊ ಇಂದೂ ಅಷ್ಟೇ ಪ್ರಮುಖವಾಗಿದೆ.

ಪ್ರಸ್ತುತ ಸಂದರ್ಭದಲ್ಲಿನ ಅಗತ್ಯತೆ:

ಬಂಡವಾಳಶಾಹಿಯ ವಿರುದ್ಧದ ಹೋರಾಟ ಮತ್ತು ಹೊಸ ಉದಾರೀಕರಣ ನೀತಿಗಳ ಅಡಿಯಲ್ಲಿ ಭಾರಿ ಪ್ರಮಾಣದಲ್ಲಿ ಲಾಭ ಮಾಡುತ್ತಿರುವುದರ ವಿರುದ್ಧ ಹೋರಾಟ ನಡೆಸುವುದು ಹಿಂದೆಂದಿಗಿಂತಲೂ ಹೆಚ್ಚು ತುರ್ತಾಗಿದೆ. ಮಿಲಿಟರೀಕರಣ ಮಾಡುತ್ತಿರುವುದು, ಯುದ್ಧದ ಹಿಂಸಾಕೃತ್ಯಗಳು ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳ ಆಕ್ರಮಣಗಳು ಮೊದಲ ಮಹಾ ಯುದ್ಧದ ಸಂದರ್ಭದಲ್ಲಿ ಮಹಿಳೆಯರು ಗಡಿಗಳನ್ನು ಮೀರಿ ಸಮರಧೀರ ಐಕ್ಯತೆ ತೋರಿಸಿದ್ದನ್ನು ನೆನಪಿಸುತ್ತದೆ. ದುರದೃಷ್ಟ ಮತ್ತು ವಿಷಾದಕರ ವಿಷಯ ಎಂದರೆ ಕೆಲವು ದೇಶಗಳಲ್ಲಿನ ಕೆಲವು ಮಹಿಳಾ 'ಫೆಮಿನಿಸ್ಟ್' (-ಸ್ತ್ರೀವಾದಿ) ಗುಂಪುಗಳು ಮುನ್ನಡೆಸುವ ಸಮಕಾಲೀನ ಮಹಿಳಾ ಚಳವಳಿಗಳು ಬಂಡವಾಳಶಾಹಿ ನೀತಿ ಮತ್ತು ಸಂಸ್ಕೃತಿಗಳನ್ನು ಮುಂಚೂಣಿಗೆ ತರುತ್ತಿದ್ದು ಸಂಘಟಿತ ಮಹಿಳಾ ಪ್ರತಿರೋಧಗಳನ್ನು ದಾರಿ ತಪ್ಪಿಸುತ್ತಿವೆ. ಮಹಿಳೆಯರ ಸಂಘಟಿತ ಹೋರಾಟಗಳು ಅಪ್ರಸ್ತುತ ಮತ್ತು ಅನಗತ್ಯ ಎಂದು ತೋರಿಸುತ್ತಿವೆ.



ಆರಂಭದಲ್ಲಿ ಕೆನಡಾದ ಕೆಲವು ಮಹಿಳೆಯರು ಪ್ರಯತ್ನಗಳನ್ನು ನಡೆಸಿ ಹಲವಾರು ದೇಶಗಳಲ್ಲಿ 100ಕ್ಕೂ ಹೆಚ್ಚು ಮಹಿಳಾ ಸಂಘಟನೆಗಳನ್ನು ಒಗ್ಗೂಡಿಸಿ ಸಾಮ್ರಾಜ್ಯಶಾಹಿ ಮತ್ತು ಹೊಸ ಜಾಗತೀಕರಣ ನೀತಿಗಳಿಂದ ಮಹಿಳೆಯರ ಬದುಕಿನ ಮೇಲೆ ಆಗುವ ಪರಿಣಾಮಗಳನ್ನು ಕೇಂದ್ರೀಕರಿಸಿ 'ವರ್ಲ್ಡ್ ಮಾರ್ಚ್'ಗೆ ಕರೆ ನೀಡಿದರು. ಆದರೆ ಈ ಚಳವಳಿ ಮಹಿಳಾ ಲೈಂಗಿಕತೆ ಅದರಲ್ಲೂ ಮುಖ್ಯವಾಗಿ ಸಲಿಂಗಕಾಮದಂತಹ ವಿಷಯಗಳತ್ತ ಗಮನ ವರ್ಗಾಯಿಸಿದ್ದರಿಂದ ದುರ್ಬಲವಾಯಿತು. ಮಹಿಳೆಗೆ ತನ್ನ ದೇಹದ ಮೇಲಿನ ಹಕ್ಕು ಮತ್ತು ಆಕೆಯ ಲೈಂಗಿಕ ಆದ್ಯತೆಯನ್ನು ಅಭಿವ್ಯಕ್ತಿಗೊಳಿಸುವುದು ಪ್ರಮುಖ ವಿಷಯವಾಗಿ ಪರಿಣಮಿಸಿ ಭಾರತ ಸೇರಿದಂತೆ ಗಣನೀಯ ಪ್ರಮಾಣದ ಮಹಿಳಾ ವಿಭಾಗಗಳು ತಪ್ಪಾಗಿ ವ್ಯಾಖ್ಯಾನಗೊಳಿಸಿದವು. ಇದು ಸಾಮಾಜಿಕ ಸಮಸ್ಯೆಯ ಭಾಗವಾಗಿದೆ ಎಂಬ ವಿಶಾಲ ದೃಷ್ಟಿಕೋನದಿಂದ ಕಾಣಲೇ ಇಲ್ಲ. ಮಹಿಳೆಯರ ಎಲ್ಲ ಸಮಸ್ಯೆಗಳನ್ನು ಅವರ ಲೈಂಗಿಕ ವಿಷಯದೊಂದಿಗೆ ಸಂಬಂಧ ಕಲ್ಪಿಸಲಾಗುತ್ತಿತ್ತು. ವರ್ಗ ಶಕ್ತಿಗಳು ಮಹಿಳೆಯರನ್ನು ಹೊಸ ರೀತಿಯಲ್ಲಿ ಅಧೀನಗೊಳಿಸುತ್ತಿವೆ ಎಂಬುದನ್ನು ಒಪ್ಪಲು ಅವರು ನಿರಾಕರಿಸಿದರು. ನವ ಸಾಮ್ರಾಜ್ಯಶಾಹಿ ಜಾಗತೀಕರಣದ ಅಡಿಯಲ್ಲಿ ಮಹಿಳೆಯರನ್ನು ಹೊಸ ರೀತಿಯಲ್ಲಿ ಅಧೀನರನ್ನಾಗಿಸುವುದು ಮತ್ತು ಲೈಂಗಿಕ ಕಿರುಕುಳಕ್ಕೆ ಗುರಿಪಡಿಸುವುದನ್ನು ನಾವು ಕಾಣುತ್ತಿದ್ದೇವೆ. ಮಹಿಳೆಯರ ಅಕ್ರಮ ಸಾಗಾಣಿಕೆ ಹೆಚ್ಚುತ್ತಿರುವುದು, ಹೆಣ್ಣು ಮಕ್ಕಳ ಮಾರಾಟ, ಯುದ್ಧದಿಂದಾಗಿ ಹೆಚ್ಚಿನ ಸಂಖ್ಯೆಯ ಮಹಿಳೆಯರು ವೇಶ್ಯಾವಾಟಿಗೆ ದೂಡಲ್ಪಡುವಂತಹ ಒತ್ತಡಗಳು ಹೆಚ್ಚಾಗುತ್ತಿರುವುದು, ಸ್ಥಳಾಂತರ ಮತ್ತು ಬಡತನದ ಸಮಸ್ಯೆಗಳು ಹೆಚ್ಚುತ್ತಿವೆ. ಇದಕ್ಕೆ ಸಾಮ್ರಾಜ್ಯಶಾಹಿಗಳ ವಿರುದ್ಧ ನಿರಂತರವಾದ ಮತ್ತು ಸಂಘಟಿತ ಹೋರಾಟದ ಅಗತ್ಯವಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜಕಾರಣದ ಆಶ್ರಯದಲ್ಲಿ ನಡೆಯುವ ಮಾದಕ ವಸ್ತುಗಳ ದಂಧೆ ವಿರುದ್ಧ ಹೋರಾಟಗಳನ್ನು ಕೈಗೊಳ್ಳಬೇಕಾಗಿದೆ.

ಭಾರತದಲ್ಲಿ ಮಧ್ಯಯುಗದಲ್ಲಿ ನಡೆಯುತ್ತಿದ್ದ 'ಗೌರವ ಕೊಲೆ'ಗಳು ಜಾತಿ ವ್ಯವಸ್ಥೆ ಮುಂದುವರೆದಿರುವುದರಿಂದ ಈಗಲೂ ನಡೆಯುತ್ತಿವೆ. ಭಾರತದ ಮಹಿಳಾ ಚಳವಳಿಗಳು ಮಹಿಳೆಯರ ಉನ್ನತೀಕರಣಕ್ಕಾಗಿ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟ ನಡೆಸಬೇಕಾಗಿದೆ. ಮತ್ತೊಂದು ರೀತಿಯಲ್ಲಿ ಎಂದರೆ ವೈಯಕ್ತಿಕ ಸಂಬಂಧಗಳ ಕುರಿತಂತೆ ಜಾತಿ ವ್ಯವಸ್ಥೆ ವಿರುದ್ಧ ದಿಟ್ಟತನ ತೋರಿದ ಮಹಿಳೆಯರ ವಿರುದ್ಧ ಆಯಾ ಜಾತಿಗಳ ಒಳಗೆ ನಡೆಯುವ ಜಾತಿ ಪಂಚಾಯತಿಗಳಲ್ಲಿ ಫತ್ವಾಗಳನ್ನು ಹೊರಡಿಸುವುದನ್ನು ಜಾತಿ ವ್ಯವಸ್ಥೆಯಲ್ಲಿ ಅಡಗಿರುವ ಸಾಮಾಜಿಕ-ಆರ್ಥಿಕ ಹಿನ್ನೆಲೆಯಲ್ಲೇ ಕಾಣಬೇಕು. ದುರದೃಷ್ಟ ಎಂದರೆ ಮಹಿಳಾ ಸ್ವಾಯತ್ತತೆ ಬಗ್ಗೆ ಗಟ್ಟಿಯಾಗಿ ಮಾತನಾಡುವವರು ಈ ಸಾಮಾಜಿಕ-ಆರ್ಥಿಕ ಸಂಬಂಧಗಳ ನಡುವೆ ಬೆಸೆದುಕೊಂಡಿರುವ ಸಂಬಂಧಗಳನ್ನು ನೋಡುವುದಿಲ್ಲ. ಎಡಪಂಥೀಯ ಸಂಘಟನೆಗಳ ಅಡಿಯಲ್ಲಿ ಮಹಿಳೆಯರು ಒಗ್ಗೂಡುವುದಕ್ಕೂ ಅವರು ಪ್ರತಿರೋಧ ವ್ಯಕ್ತಪಡಿಸುತ್ತಾರೆ.

ಕೊನೆಯದಾಗಿ: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಬಂಡವಾಳಶಾಹಿ, ಪುರುಷ ಪ್ರಧಾನ ಸಮಾಜದ ಸಂಕೋಲೆಗಳ ವಿರುದ್ಧ ಮತ್ತು ಮಹಿಳಾ ಉನ್ನತೀಕರಣದ ಸಂಕೇತವಾಗಿದೆ. ಭಾರತದಲ್ಲಿ ಪ್ರಜಾಸತ್ತಾತ್ಮಕ ಬೇಡಿಕೆಗಳು ಮತ್ತು ಹೋರಾಟಗಳ ಪ್ರಸ್ತುತ ಸನ್ನಿವೇಶದಲ್ಲಿ ಅಪಾರ ಸಂಖ್ಯೆಯ ಮಹಿಳೆಯರನ್ನು ಸಮಾನತೆಯ ವೇದಿಕೆ ಅಡಿಯಲ್ಲಿ ಒಗ್ಗೂಡಿಸುವ ಅಗತ್ಯವಿದೆ. ಇದನ್ನು ಯಶಸ್ವಿಗೊಳಿಸಬೇಕಾದರೆ ದುಡಿಯುವ ಮಹಿಳೆ, ದಲಿತ ಮಹಿಳೆ, ಬುಡಕಟ್ಟಿನ ಮಹಿಳೆಯರು, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಮಹಿಳೆಯರ ಸಮಸ್ಯೆಗಳನ್ನು ಮುಖ್ಯ ವಿಷಯವನ್ನಾಗಿ ತೆಗೆದುಕೊಳ್ಳಬೇಕು. ಅಸಮಾನತೆಯಿಂದ ಕೂಡಿರುವ ಪ್ರಸಕ್ತ ಬಂಡವಾಳಶಾಹಿ ವ್ಯವಸ್ಥೆಯನ್ನು ಬದಲಾಯಿಸಬೇಕಾದರೆ ಅವರೆಲ್ಲರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಮಾರ್ಚ್ 8ರ ಶತಮಾನೋತ್ಸವವನ್ನು ಆಚರಿಸುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಈ ಹೋರಾಟವನ್ನು ಮುನ್ನಡೆಸುವ ಪ್ರತಿಜ್ಞೆ ಮಾಡಬೇಕು.

ಕನ್ನಡಕ್ಕೆ: ಮುರಳಿಕೃಷ್ಣ

ಮಹಿಳಾ ದಿನಾಚರಣೆ : ಹೋರಾಟದ ಸಂಕಲ್ಪ ಗಟ್ಟಿಗೊಳಿಸಬೇಕಾದ ದಿನ


ನೂರು ವರ್ಷ ತುಂಬಿದರೂ ಮುಂದುವರಿದ ಹೋರಾಟ



'ಪ್ರಕಾಶಿಸುತ್ತಿರುವ ಭಾರತ' ದಲ್ಲಿ ರಾಜಕೀಯಹಾಗೂ ಆರ್ಥಿಕ ಕ್ಷೇತ್ರದಲ್ಲಿ ಸಿಕ್ಕಿರುವ ಒಂದಷ್ಟು ಮಹಿಳಾ ಪ್ರಾತಿನಿಧ್ಯವನ್ನು ನೋಡಿ ಮಹಿಳಾ ಸಮಾನತೆ ಸಿಕ್ಕೇಬಿಟ್ಟಿದೆ ಎಂದು ಭಾವಿಸಬಹುದೇ?

ಮಮತಾ.ಜಿ

ಪ್ರತಿದಿನ ಮಹಿಳೆಯರು ಭೀಕರ ಸನ್ನಿವೇಶಗಳನ್ನು ಎದುರಿಸಿದ ವಿಚಾರಗಳನ್ನು ಕೇಳಿದಾಗೆಲ್ಲ ನಾವು ಛೇ ಹೀಗಾಗಬಾರದಿತ್ತು ಎಂದು ನೊಂದು ನುಡಿಯುತ್ತೇವೆ. ಇಮೇಲ್ ಮಾಡುತ್ತೇವೆ. ಮೊಂಬತ್ತಿಗಳನ್ನು ಹಚ್ಚುತ್ತೇವೆ. ಸೌಹಾರ್ದ ಸಂದೇಶಗಳನ್ನು ಎದುರಿಸುತ್ತೇವೆ. ಈ ರೀತಿಯ ಪ್ರತಿಕ್ರಿಯೆ ಬರುವುದು ಕೆಲವೇ ಜನರಿಂದ ಮಾತ್ರವೇ ಎಂಬುದು ನಮಗೆ ಗೊತ್ತು. ಮಹಿಳೆಯರು ಬಹಳ ಒಳ್ಳೆಯ ಸ್ಥಿತಿಯಲ್ಲಿದ್ದಾರೆ ಎಂಬ ಭ್ರಮೆಯಲ್ಲಿ ಬಹುತೇಕ ಜನರು ಇದ್ದಾರೆ. ರಾಷ್ಟ್ರಪತಿ ಪ್ರತಿಭಾ ಪಾಟೀಲ್, ಲೋಕಸಭೆ ಸ್ಪೀಕರ್ ಮೀರಾಕುಮಾರ್, ಯುಪಿಎ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಲೋಕ ಸಭೆಯಲ್ಲಿ ಪ್ರತಿಪಕ್ಷ ನಾಯಕಿ ಸುಷ್ಮಾ ಸ್ವರಾಜ್ ಇವರನ್ನು ಕಂಡು ಒಹ್ ನಾವು ಅದೆಷ್ಟು ಮುಂದೆ ಸಾಗಿಬಂದಿದ್ದೇವೆ ನೋಡಿ ಎಂದು ಹೆಮ್ಮೆಯಿಂದ ಬೀಗುತ್ತೇವೆ.



ಮಹಿಳೆಯರು ಪ್ರಕಾಶಿಸುತ್ತಿದ್ದಾರೆ?!

ರಾಜಕೀಯ ಮಾತ್ರವಲ್ಲ, ಆರ್ಥಿಕ ಕ್ಷೇತ್ರವನ್ನೂ ಗಮನಿಸಿ. ಕಾರ್ಪೊರೇಟ್ ವಲಯದಲ್ಲಿ ಅತ್ಯುನ್ನತ ಸ್ಥಾನ ಪಡೆಯಲು ಹಲವು ದಶಕಗಳಿಂದ ಹೋರಾಟ ನಡೆಸುತ್ತಿದ್ದರೂ ನ್ಯೂಯಾರ್ಕ್ ಮತ್ತು ಲಂಡನ್‌ನಲ್ಲಿ ಮಹಿಳಾ ಬ್ಯಾಂಕರ್‌ಗಳು ತೀರಾ ಕಡಿಮೆ. ಆದರೆ ಭಾರತದಲ್ಲಿ ಹಾಗಿಲ್ಲ. ಅಮೇರಿಕ, ಬ್ರಿಟನ್‌ಗೆ ಹೋಲಿಸಿದರೆ ಇನ್ನೂ ತಾರುಣ್ಯದಲ್ಲಿರುವ ಭಾರತದ ಆರ್ಥಿಕ ಉದ್ಯಮದಲ್ಲಿ ಅನೇಕ ಮಹಿಳೆಯರು ಉನ್ನತ ನೀತಿ ನಿರೂಪಣೆ ಮಾಡುವ ಸ್ಥಾನದಲ್ಲಿರುವುದು ಮಾತ್ರವೇ ಅಲ್ಲ, ಅನೇಕ ಮಹಿಳೆಯರು ಪ್ರಮುಖ ಸ್ಥಾನಗಳನ್ನು ನಿರ್ವಹಿಸುತ್ತಿದ್ದಾರೆ.

ಭಾರತದಲ್ಲಿ ಎಚ್.ಎಸ್.ಬಿ.ಸಿ. ಜೆಪಿ ಮಾರ್ಗನ್‌ಚೇಸ್, ರಾಯಲ್ ಬ್ಯಾಂಕ್ ಆಫ್ ಸ್ಕಾಟ್‌ಲ್ಯಾಂಡ್, ಯುಬಿಎಸ್ ಮತ್ತು ಫಿಡೆಲಿಟಿ ಇಂಟರ್‌ನ್ಯಾಷನಲ್ ಆರ್ಥಿಕ ಸಂಸ್ಥೆಗಳನ್ನು ಮಹಿಳೆಯರೇ ನಡೆಸುತ್ತಿದ್ದಾರೆ. ಅದೇ ರೀತಿ, ದೇಶದ ಅತಿದೊಡ್ಡ ಎರಡನೇ ಬ್ಯಾಂಕ್ ಐಸಿಐಸಿಐ, ಅತಿದೊಡ್ಡ ಮೂರನೇ ಬ್ಯಾಂಕ್ ಆಕ್ಸಿಸ್ ಬ್ಯಾಂಕ್‌ಗಳನ್ನು ಕೂಡ ಮಹಿಳೆಯರೇ ಮುನ್ನಡೆಸುತ್ತಿದ್ದಾರೆ. ಕೊಟಕ್ ಮಹೀಂದ್ರ ಮತ್ತು ಜೆಪಿ ಮಾರ್ಗನ್ ಚೇಸನ್ ಬಂಡವಾಳ ಹೂಡಿಕೆ ಕಾರ್ಯಾಚರಣೆಗಳನ್ನು ಹಾಗೂ ಐಸಿಐಸಿಐನ ಇಕ್ವಿಟಿ ವಿಭಾಗಗಳಿಗೆ ಮಹಿಳೆಯರದ್ದೇ ಸಾರಥ್ಯ. ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಅರ್ಧದಷ್ಟು ಗವರ್ನರ್‌ಗಳು ಮಹಿಳೆಯರೇ. ಅಂದರೆ ಭಾರತೀಯ ಮಹಿಳೆಯರು 'ಪ್ರಕಾಶಿಸುತ್ತಿದ್ದಾರೆ' ಆದರೆ ಅದು ವಾಸ್ತವತೆಯೋ? ಅಥವಾ ಮಾಧ್ಯಮಗಳು ಮತ್ತು ಸಮಾಜದ ಆಳುವ ವರ್ಗಗಳು ಮಹಿಳಾ ಸಮಾನತೆಯಿದೆ ಎಂದು ನಂಬುವಂತೆ ಹುಟ್ಟಿಸಿದ ಭ್ರಮೆಗೆ ನಾವು ಒಳಗಾಗಿದ್ದೇವೆಯೇ? 'ಮಹಿಳಾ ಶಕ್ತಿ' ಹಾಗೂ ಸಮಾನತೆ ಎಂಬ ಬಿಸಿಲು ಕುದುರೆಯನ್ನು ನಮ್ಮ ಮುಂದೆ ಸೃಷ್ಟಿಸಲಾಗಿದೆಯೇ?

ಈ ರೀತಿಯ ಪ್ರಶ್ನೆಗಳನ್ನು ಮುಂದಿಡಲು ಕಾರಣಗಳಿವೆ. ಯಾಕೆಂದರೆ, ಹಲವಾರು ವರ್ಷಗಳಿಂದ ಮಹಿಳೆಯರು ನಿಸ್ಸಂಶಯವಾಗಿಯೂ ಅನೇಕ ಸಾಧನೆಗಳನ್ನು ಮಾಡಿರುವವರಾದರೂ ಮಹಿಳೆ ಈಗಲೂ ಅನ್ಯಾಯ, ದೌರ್ಜನ್ಯಗಳಿಗೆ ಒಳಗಾಗುತ್ತಿದ್ದಾರೆ. ಅವರ ಮೇಲೆ ಅತ್ಯಾಚಾರವಾಗುತ್ತಿದೆ. ಅವರನ್ನು ಮಾರಾಟ ಮಾಡಲಾಗುತ್ತಿದೆ. ಅವರ ಹಕ್ಕುಗಳನ್ನು ಉಲ್ಲಂಘಿಸಲಾಗುತ್ತಿದೆ. ಲಿಂಗತಾರತಮ್ಯಗಳ ವಿರುದ್ಧ ಮಹಿಳಾ ಆಂದೋಲನ ಮುಂದುವರೆಯುತ್ತಿದ್ದರೂ ಕೆಲವು ಹೋರಾಟಗಳನ್ನು ಹೊರತುಪಡಿಸಿದರೆ ಉಳಿದಂತೆ ಮಹಿಳಾ ಚಳುವಳಿಯ ಗುರಿ ಸಾಧನೆಯಾಗಿದೆ ಎಂದು ಬಹಳಷ್ಟು ಜನರು ಭಾವಿಸಿದ್ದಾರೆ. ನಮ್ಮನ್ನು ನಾವು ಮೂರ್ಖರನ್ನಾಗಿಸಿಕೊಳ್ಳುವುದನ್ನು ನಿಲ್ಲಿಸಲು ಇದು ಸಕಾಲವಾಗಿದೆ. ಸಾಧಿಸಿದ್ದು ಅಲ್ಪ, ಸವೆಸಬೇಕಾದ ಹಾದಿ ಬಲುದೂರದ್ದು ಎಂಬುದನ್ನು ಅರಿತು ಕಾರ್ಯೋನ್ಮುಖವಾಗಬೇಕಿದೆ.

ಮಹಿಳೆಯರ ಸ್ಥಿತಿಗತಿ : ಕೆಲವು ಅಂಕಿ ಅಂಶಗಳು

2008ರ ಲಿಂಗ ಅಸಮಾನತೆ (ಇಂಡೆಕ್ಸ್) (gender gap index) ವಿಚಾರದಲ್ಲಿ 130 ದೇಶಗಳ ಪೈಕಿ ಭಾರತ 113ನೇ ಸ್ಥಾನದಲ್ಲಿದೆ. ಅನೇಕ ದೇಶಗಳಲ್ಲಿ ದುಡಿಯುವ ಜನರ ಪೈಕಿ ಮಹಿಳೆಯರು ಅರ್ಧದಷ್ಟು ಅಥವಾ ಅದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಇದ್ದರೂ ಯುರೋಪಿಯನ್ ಒಕ್ಕೂಟದಲ್ಲಿ 2008 ರಲ್ಲಿ 300 ಅತಿ ದೊಡ್ಡ ಕಂಪನಿಗಳ ಆಡಳಿತ ಮಂಡಳಿಗಳಲ್ಲಿ ಇದ್ದ ಮಹಿಳೆಯರ ಪಾಲು ಕೇವಲ ಶೇ.9.7 ಅಮೇರಿಕದಲ್ಲಿ ಇಂಥ 500 ಕಂಪನಿಗಳ ಆಡಳಿತಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಸುಮಾರು ಶೇ.15 ಅಷ್ಟೆ. ಏಷ್ಯಾ ದೇಶಗಳ ವಿಚಾರದಲ್ಲಂತೂ ಇದು ಇನ್ನೂ ದಯನೀಯ. ಭಾರತದಲ್ಲಿ ಆಡಳಿತ ಮಂಡಳಿಗಳಲ್ಲಿ ಮಹಿಳೆಯರ ಪಾಲುಗಾರಿಕೆ ಕೇವಲ ಶೇಕಡ ಐದರಷ್ಟು ಆಗಿದೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ಸಂಸ್ಥೆ (ಎನ್‌ಸಿಆರ್‌ಬಿ) ಯಿಂದ ಲಭ್ಯವಾದ ತೀರಾ ಇತ್ತೀಚಿನ, ಅಂದರೆ 2007 ರ ಅಂಕಿ ಸಂಖ್ಯೆಗಳ ಪ್ರಕಾರ ದೇಶದಲ್ಲಿ ಕ್ಷಿಪ್ರಗತಿಯಲ್ಲಿ ಹೆಚ್ಚುತ್ತಿರುವ 10 ಅಪರಾಧಗಳ ಪೈಕಿ ಏಳು ಮಹಿಳೆಯರ ವಿರುದ್ಧ ಅಪರಾಧಗಳಾಗಿವೆ. ಭಾರತೀಯ ದಂಡಸಂಹಿತೆ (ಐಪಿಸಿ) ಯನ್ವಯ ಶಿಕ್ಷಾರ್ಹವಾದ ಎಲ್ಲಾ ಅಪರಾಧಗಳಲ್ಲಿ ಹಿಂದಿನ ವರ್ಷಕ್ಕಿಂತ ಶೇಕಡ 5 ರಷ್ಟು ಏರಿಕೆಯಾಗಿದೆ. ವರದಕ್ಷಿಣೆ ಸಾವುಗಳ ಪ್ರಮಾಣ ಶೇಕಡ 15ರಷ್ಟು ಹೆಚ್ಚಿದೆ. ಗಂಡಂದಿರು ಮತ್ತು ಸಂಬಂಧಿಕರ ಹಿಂಸೆಯಲ್ಲಿ ಶೇ.14 ಹೆಚ್ಚಳವಾಗಿದೆ. ಮಹಿಳೆಯರ ಅಪಹರಣದಲ್ಲಿ ಶೇ.13 ಏರಿಕೆಯಾಗಿದೆ. ಲೈಂಗಿಕ ಕಿರುಕುಳದಲ್ಲಿ ಶೇ.11 ಏರಿಕೆಯಾಗಿದೆ. ಅತ್ಯಾಚಾರ ಮತ್ತು ಲೈಂಗಿಕ ಪೀಡನೆಯ ಪ್ರಕರಣಗಳಲ್ಲಿ ಶೇ.6 ರಿಂದ 7 ರಷ್ಟು ಏರಿಕೆಯಾಗಿದೆ. ಲೈಂಗಿಕಾರ್ಥ ಬರುವಂತೆ ಹುಡುಗಿಯರ ಜೊತೆ ವರ್ತಿಸುವ ಪ್ರಮಾಣದಲ್ಲಿ ಶೇ.12 ಏರಿಕೆಯಾಗಿದೆ.

ಅತ್ಯಾಚಾರ ಒಂದು ಸಾಮಾಜಿಕ ಕಳಂಕವಾಗಿರುವುದರಿಂದ ವರದಿಯಾಗುವ ಪ್ರಕರಣಗಳು ಕಡಿಮೆ. ಹೀಗಾಗಿ ಶೇಕಡಾವಾರು ಹೆಚ್ಚಳದಲ್ಲಿ ಅತಿಯಾದ ಏರಿಕೆ ದಾಖಲಾಗಿಲ್ಲ. ಆದರೂ ಇದು (ಶೇ.6 ರಿಂದ 7) ಸರಾಸರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಇದೆ ಎನ್ನುವುದು ಆತಂಕದ ಸಂಗತಿಯಾಗಿದೆ.

ಮಹಿಳೆಯರ ವಿರುದ್ಧದ ಅಪರಾಧ ಕೃತ್ಯಗಳು ಹೆಚ್ಚುತ್ತಿದ್ದರೂ ತನಿಖಾ ಸಂಸ್ಥೆಗಳ ಆದ್ಯತಾ ಪಟ್ಟಿಯಲ್ಲಿ ಅವು ಇದ್ದಂತೆ ಕಾಣುವುದಿಲ್ಲ ಎಸ್‌ಸಿಆರ್‌ಬಿಯಿಂದ ಲಭ್ಯ ಮಾಹಿತಿ ಹೇಳುವಂತೆ, ಲೈಂಗಿಕ ಕಿರುಕುಳದ 10 ಪ್ರಕರಣಗಳಲ್ಲಿ ಒಂದನ್ನು ಮಾತ್ರವೇ ಘಟನೆ ನಡೆದ ವರ್ಷವೇ ತನಿಖೆಗೆ ಕೈಗೆತ್ತಿಕೊಳ್ಳಲಾಗುತ್ತದೆ. ಲೈಂಗಿಕ ಪೀಡನೆ ಅಥವಾ ಗಂಡ, ಸಂಬಂಧಿಕರ ಹಿಂಸೆಯ 10 ಪ್ರಕರಣಗಳಲ್ಲಿ ಎರಡನ್ನು ಮಾತ್ರವೇ ಆಯಾ ವರ್ಷ ವಿಚಾರಿಸಲಾಗುತ್ತದೆ. ಅದೇ ರೀತಿ ಅತ್ಯಾಚಾರ ಮತ್ತು ವರದಕ್ಷಿಣೆ ಸಾವಿನ 10 ಪ್ರಕರಣಗಳಲ್ಲಿ ಮೂರನ್ನು ಮಾತ್ರವೇ ಆಯಾ ವರ್ಷ ತನಿಖೆಗೆ ಕೈಗೆತ್ತಿಕೊಳ್ಳಲಾಗುತ್ತದೆ. ವಿಚಾರಣೆಗೊಳಪಡಿಸಿದ ಪ್ರತಿ ಇಬ್ಬರಲ್ಲಿ ಒಬ್ಬರನ್ನು ಶಿಕ್ಷಿಸಿದರೂ, ಲೈಂಗಿಕ ಕಿರುಕುಳ ಪ್ರಕರಣದಲ್ಲಿ ಅತಿ ಹೆಚ್ಚು ಜನರಿಗೆ ಶಿಕ್ಷೆ ವಿಧಿಸಬೇಕಾಗುತ್ತದೆ. ಆದರೆ ವಾಸ್ತವ ಸ್ಥಿತಿ ಹಾಗಿಲ್ಲ. ಆದರೆ ಮಹಿಳೆಯರ ವಿರುದ್ಧದ ಎಲ್ಲಾ ಅಪರಾಧಗಳ ಪೈಕಿ ಲೈಂಗಿಕ ಕಿರುಕುಳ ಅತಿ ಸಾಧಾರಣ ಅಪರಾಧವಾಗಿದ್ದು ಗರಿಷ್ಠ ಶಿಕ್ಷೆ ಒಂದು ವರ್ಷದ ಜೈಲು ವಾಸ ಅಥವಾ ದಂಡ ಅಥವಾ ಅವರೆಡೂ ಆಗಿರುತ್ತದೆ. ಮಹಿಳೆಯರ ವಿರುದ್ಧದ ಇತರ ಅಪರಾಧ ಪ್ರಕರಣಗಳಲ್ಲಿ ಕೂಡ ಶಿಕ್ಷೆ ನೀಡಿದ ಪ್ರಮಾಣ ಐ.ಪಿ.ಸಿ.ಯನ್ವಯ ಶಿಕ್ಷಾರ್ಹ ಅಪರಾಧಗಳಲ್ಲಿ ಶಿಕ್ಷೆ ನೀಡಿದ್ದರಲ್ಲಿ ಶೇಕಡ 35.8 ಕ್ಕಿಂತಲೂ ಕಡಿಮೆಯಾಗಿದೆ.

ಪ್ರತಿ ಕ್ಷೇತ್ರದಲ್ಲಿ ಇಂದಿಗೂ ಮಹಿಳೆಯರ ವೇತನ ಕಡಿಮೆ, ಪಾರ್ಟ್ ಟೈಂ ಕೆಲಸ ಮಾಡಬೇಕಾಗುತ್ತದೆ ಮತ್ತು ಆಕೆಗೆ ಉನ್ನತ ಹುದ್ದೆಗಳು ಸಿಗುವುದು ಕಡಿಮೆ.

ಮಕ್ಕಳು, ಅಡಿಗೆ ಮನೆ, ಧರ್ಮ ಬಹಳಷ್ಟು ಮಹಿಳೆಯರಿಗೆ ಅಡಗೂಲಜ್ಜಿಯ ಈ ಸೂತ್ರಗಳೇ ಇಂದಿಗೂ ಕೌಟುಂಬಿಕ ಸೂತ್ರವಾಗಿದೆ. ಇಂದು ನಾವು ದೇಶದ ಉನ್ನತ ಸ್ಥಾನಗಳಲ್ಲಿ ಕಾಣುತ್ತಿರುವ ಬಹುತೇಕ ಮಹಿಳೆಯರು ಶ್ರೀಮಂತ ಕುಟುಂಬಗಳಿಂದ ಬಂದವರು. ಅವರು ಭಾರತ ಮತ್ತು ವಿದೇಶಗಳ ಅತ್ಯುತ್ತಮ ಶಿಕ್ಷಣ ಸಂಸ್ಥೆಗಳಲ್ಲಿ ಕಲಿತವರು. ಇವರು ದೇಶದ ಅತ್ಯಂತ ಸಣ್ಣ ಸಣ್ಣ ವಿಭಾಗದವರು ಎನ್ನುವುದನ್ನು ಗಮನಿಸಬೇಕು. ಇವರಿಗೆ ಮಾತ್ರ ಜೀವನ ಅತಿ ಸುಂದರವಾದುದು.

ಆದರೆ ಬಹುಸಂಖ್ಯಾತ ಮಹಿಳೆಯರಿಗೆ ಜೀವನ ನರಕಸದೃಶವಾದುದು. ತಾರತಮ್ಯ, ದಬ್ಬಾಳಿಕೆ, ದೌರ್ಜನ್ಯ, ಹಿಂಸೆ ಅನುಭವಿಸುವುದು ಅವರ ನಿತ್ಯದ ಅನುಭವವಾಗಿದೆ.

2001 ರ ಜನಗಣತಿ ಪ್ರಕಾರ ದೇಶದಲ್ಲಿ ಕೆಲಸಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಪ್ರಮಾಣ ಶೇಕಡ 25.7. ಕೇಂದ್ರ ಸರಕಾರಿ ನೌಕರರಲ್ಲಿ ಮಹಿಳೆಯರ ಪ್ರಮಾಣ ಕೇವಲ ಶೇಕಡ 7.53. ಹಳ್ಳಿಗಾಡಿನಲ್ಲಿ ಮಹಿಳಾ ಕಾರ್ಮಿಕರು ಗಳಿಸುವ ವೇತನ ಪುರುಷಕಾರ್ಮಿಕರ ಕೂಲಿಗಿಂತ 20.38 ರೂಪಾಯಿ ಕಡಿಮೆಯಿರುತ್ತದೆ. ನಗರ ಪ್ರದೇಶಗಳಲ್ಲಿ ಈ ವ್ಯತ್ಯಾಸ ರೂ.31.23 (2004 ರಿಂದ 2005). ವಾಸ್ತವವಾಗಿ ಇದು 1999, 2000 ರಲ್ಲಿ ಆರಂಭದಲ್ಲಿ ಮಾಡಿದ ಲೆಕ್ಕಾಚಾರಕ್ಕಿಂತ ಇದು ಹೆಚ್ಚಾಗಿದೆ.

ಸಂಸತ್ತಿನಲ್ಲಿ ಮಹಿಳೆಯರ ಪ್ರಾತಿನಿಧ್ಯದ ವಿಚಾರದಲ್ಲಿ ಭಾರತ 140 ದೇಶಗಳಲ್ಲಿ 99ನೇ ಸ್ಥಾನದಲ್ಲಿದೆ. ಲೋಕಸಭೆಯಲ್ಲಿ ಕೇವಲ ಶೇ.10.8





ರಾಜ್ಯಸಭೆಯಲ್ಲಿ ಶೇ.9. ಇದು ದೇಶದಲ್ಲಿ ಮಹಿಳೆಯರ ನಿಜ 'ಅಸ್ತಿತ್ವ'ವಾಗಿದೆ. ಈ ಅತಿಸಣ್ಣ ವಿಭಾಗವನ್ನು ಕೂಡ ಅವರ ಲಿಂಗದ ಆಧಾರ'ದ'ಲ್ಲಿ ಗುರುತಿಸಲಾಗುತ್ತದೆಯೇ ಹೊರತು ಅವರ ಸಾಮರ್ಥ್ಯದ ಆಧಾರದ ಮೇಲಲ್ಲ. ಭಾರತೀಯ ಇತಿಹಾಸದ 'ಬಲಿಷ್ಠ ಮಹಿಳೆ' ಪದೇ ಪದೇ "ನಾನು ಮಹಿಳಾ ಪ್ರಧಾನಿಯಲ್ಲ, ಪ್ರಧಾನಮಂತ್ರಿ ಅಷ್ಟೆ" ಎಂದು ಹೇಳಬೇಕಾದ ಸನ್ನಿವೇಶ ನಿರ್ಮಾಣವಾಗಿತ್ತು. ಏಷ್ಯಾ ಖಂಡದಲ್ಲಿ ಮುಸ್ಲಿಂ ಪ್ರಧಾನ ದೇಶಗಳಾದ ಬಾಂಗ್ಲಾದೇಶ, ಪಾಕಿಸ್ತಾನ, ಇಂಡೋನೇಷ್ಯಾ ಮತ್ತು ಮಲೇಶ್ಯಾದಲ್ಲಿ ಕೂಡ ಮಹಿಳೆಯರ ಸರಕಾರದ ಮುಖ್ಯಸ್ಥರಾಗಿದ್ದರೂ ಮಹಿಳೆಯರ ಸ್ಥಾನಮಾನಗಳಲ್ಲಿ ಹೆಚ್ಚಿನ ಬದಲಾವಣೆ ಆಗಿಲ್ಲ ಎನ್ನುವುದನ್ನು ಗಮನಿಸಬೇಕು.

ಮಹಿಳೆಯರ ಪ್ರಗತಿಯಾಗಿದೆ ಎಂದು ಹೇಳುವುದು ಬರೀ ಘೋಷಣೆಯಾಗುತ್ತದೆ ಎನ್ನುವುದು ಇದರಿಂದ ತಿಳಿಯುತ್ತದೆ. ವಾಸ್ತವವಾಗಿ ಇದು ಲಿಂಗತಾರತಮ್ಯದ ಪಿಡುಗಾಗಿದೆ. ದಬ್ಬಾಳಿಕೆ ಎಲ್ಲಿದೆ ಎಂದು ಕೇಳಲಾಗುತ್ತದೆ. ದೂರುಗಳನ್ನು ಹೇಳಿಕೊಳ್ಳಲು ಮಹಿಳೆಯರಿಗೆ ಉತ್ತಮ ಅವಕಾಶಗಳಿವೆ ಎಂದು ಹೇಳಲಾಗುತ್ತದೆ. ಕೆಲವರುಇದನ್ನೇ "ಜಾಗೃತ ಲಿಂಗ ಸಮಾನತೆ" (enlightened sexism) ಎಂದೂ ಬಣ್ಣಿಸುತ್ತಾರೆ. ರಾಜಕೀಯ ಮತ್ತು ಪಾಪ್ ಸಂಸ್ಕೃತಿಯ ನಡುವೆ ಎಲ್ಲವೂ ಚೆನ್ನಾಗಿದೆ ಎಂದೂ ಮಹಿಳೆಯರಿಗೆ ಹೇಳಲಾಗುತ್ತದೆ. ನಮ್ಮಲ್ಲಿ ಬಹಳಷ್ಟು ಮಂದಿ ಅದನ್ನೇ ನಂಬುತ್ತೇವೆ ಕೂಡ. ಮಹಿಳೆಯರ ವಿರುದ್ಧದ ದ್ವೇಷ, ಅಪರಾಧಗಳು ಒಂದು ಭ್ರಮೆಯಷ್ಟೆ, ನಿರ್ದಾಕ್ಷಿಣ್ಯವಾಗಿ ಎದುರಿಸುವ ಮೂಲಕ ಅದನ್ನು ನಿಭಾಯಿಸಬಹುದು ಎಂಬ ರೀತಿಯಲ್ಲಿ ನಾವು ವರ್ತಿಸುತ್ತಿದ್ದೇವೆ. ಇದು ಹೇಗಿದೆಯೆಂದರೆ ಮಹಿಳಾ ದ್ವೇಷ ಎನ್ನುವುದು ಒಂದು ವ್ಯವಸ್ಥಿತ ದಬ್ಬಾಳಿಕೆ ಎನ್ನುವುದಕ್ಕಿಂತ ತಂಟೆಕೋರ ಮಕ್ಕಳಿದ್ದಂತೆ ಎಂದು ಪರಿಭಾವಿಸಲಾಗುತ್ತಿದೆ.

ಡಜನ್‌ಗಟ್ಟಲೆ ಕಾನೂನುಗಳು

ಹೌದು. ಇಂದಿನ ಮಹಿಳೆಯರ ಸ್ಥಿತಿ ನಮ್ಮ ಮುತ್ತಜ್ಜಿಯರ ಸ್ಥಿತಿಗಿಂತ ಉತ್ತಮವಾಗಿದೆ. ಆದರೆ ಮಹಿಳೆಯರ ಮುನ್ನಡೆಯಲ್ಲಿ ಮೈಲಿಗಲ್ಲುಗಳು ಎಂದು ಆಗಿಂದಾಗ್ಗೆ ಪ್ರಸ್ತಾವಿಸಲಾಗುವ ಮತದಾನದ ಹಕ್ಕು, ಮನೆಯಾಚೆ ಹೋಗಿ ಕೆಲಸ ಮಾಡುವುದು, ಕೌಟುಂಬಿಕ ದೌರ್ಜನ್ಯವನ್ನು ಕಾನೂನು ಬಾಹಿರಗೊಳಿಸಿರುವುದು, ಲಿಂಗ ಸಮಾನತೆ ಸಾರುವ ಕಾನೂನುಗಳ ರಚನೆಯಾಗಿರುವುದು ಮೊದಲಾದವುಗಳಷ್ಟರಿಂದಲೇ ಮಹಿಳೆಯರ ಜೀವನದ ವಾಸ್ತವತೆಯನ್ನು ಬದಲಾಯಿಸುವುದಿಲ್ಲ.

ಮಹಿಳೆಯರ ಆಸ್ತಿ ಹಕ್ಕು ರಕ್ಷಣೆಗೆ ಸಂಬಂಧಿಸಿ ನಾಲ್ಕು ಕಾನೂನುಗಳಿವೆ. ದುಡಿಯುವ ಮಹಿಳೆಯರ ರಕ್ಷಣೆಗಾಗಿ 15 ಕಾನೂನುಗಳಿವೆ. ಮದುವೆಯಲ್ಲಿನ ಅನ್ಯಾಯ ತಡೆಯಲು ಹಾಗೂ ವರದಕ್ಷಿಣೆ ಸಂಬಂಧಿತ ಹಿಂಸೆ, ಕಿರುಕುಳ ತಡೆಯಲು ಎಂಟು ಕಾನೂನುಗಳಿವೆ. ಮಹಿಳೆಯರ ವಿರುದ್ಧದ ಅಪರಾಧಗಳು ಹಾಗೂ ಅವರ ಮೇಲಿನ ದಾಳಿಗಳನ್ನು ತಡೆಯಲು ಸಂಬಂಧಿಸಿ 14 ಕಾನೂನುಗಳಿವೆ. ಅಬ್ಬಬ್ಬಾ! ಎಷ್ಟೊಂದು ಕಾನೂನುಗಳು. ಇವೆಲ್ಲವನ್ನು ನೋಡಿದರೆ, ಸಂವಿಧಾನದ ಮುನ್ನುಡಿಯಲ್ಲಿ ಹೇಳಿರುವಂತೆ ಭಾರತ ಎಂದಿಗೋ 'ಸಮಾಜವಾದಿ' ದೇಶ ಆಗಿರಬೇಕಿತ್ತು. ಈ ಕಾನೂನು ಕಟ್ಟಳೆಗಳು ಮಹಿಳೆಯರ ಮೇಲಿನ ಅತ್ಯಾಚಾರ, ದೌರ್ಜನ್ಯ ದಬ್ಬಾಳಿಕೆಗಳನ್ನು ನಿಲ್ಲಿಸಲಾರವು.

ಮಹಿಳೆಯರು ಹೆಚ್ಚೆಚ್ಚು ವಿಶ್ವಾಸಾರ್ಹರು-ಲಂಚಕೋರರಲ್ಲಿ ಪುರುಷರೇ ಅಧಿಕ

ರಾಜಕೀಯ ಮತ್ತು ಸಾರ್ವಜನಿಕ ಜೀವನದಲ್ಲಿ ಮಹಿಳೆಯರು ಹೆಚ್ಚಾಗಿ ಪಾಲ್ಗೊಳ್ಳುವುದರಿಂದ ಸಮಾಜಕ್ಕೇ ಲಾಭ ಎನ್ನುವುದನ್ನು ಹಲವು ಅಧ್ಯಯನಗಳು ತೋರಿಸಿಕೊಟ್ಟಿವೆ. ಆದರೂ ಆ ರೀತಿ ಮಾಡಲು ಬಿಡುತ್ತಿಲ್ಲ. ಜಾಗತಿಕ ಭ್ರಷ್ಟಾಚಾರದ ಬಗ್ಗೆ ನಿಗಾಯಿಟ್ಟಿರುವ ಬರ್ಲಿನ್ ಮೂಲದ ಟ್ರಾನ್ಸ್‌ಫರೆನ್ಸಿ ಇಂಟರ್ ನ್ಯಾಷನಲ್ ಎಂಬ ಸರಕಾರೇತರ ಸಂಸ್ಥೆ ರೂಪಿಸಿರುವ ಜಾಗತಿಕ ಭ್ರಷ್ಟಾಚಾರ ಮಾಪಕ ಹೇಳುವ ಪ್ರಕಾರ ಮಹಿಳೆಯರಿಗಿಂತ ಪುರುಷರೇ ಹೆಚ್ಚಾಗಿ ಲಂಚ ತೆಗೆದುಕೊಳ್ಳುತ್ತಾರೆ. ವಿಶ್ವಬ್ಯಾಂಕ್‌ನ 1999ರ ಅಧ್ಯಯನ ವರದಿಯೊಂದರ ಪ್ರಕಾರ ಮಹಿಳೆಯರು ಹೆಚ್ಚಾಗಿ ವಿಶ್ವಾಸಾರ್ಹರು ಹಾಗೂ ಸಾರ್ವಜನಿಕ ಹಿತದ ರಕ್ಷಣೆಯಲ್ಲಿ ಪುರುಷರಿಗಿಂತ ಹೆಚ್ಚು ಕಾಳಜಿ ಹೊಂದಿದವರಾಗಿರುತ್ತಾರೆ. ಯುರೋಪ್, ಆಫ್ರಿಕಾ ಮತ್ತು ಏಷ್ಯಾಗಳ 150 ದೇಶಗಳ ಸಂಸತ್ತಿನಲ್ಲಿ ಹೆಚ್ಚಿನ ಮಹಿಳಾ ಪ್ರಾತಿನಿಧ್ಯ ಇರುವಲ್ಲೆಲ್ಲ ಭ್ರಷ್ಟಾಚಾರದ ಪ್ರಮಾಣ ಕಡಿಮೆಯಾಗಿದೆ ಎಂದೂ ಈ ಅಧ್ಯಯನ ತಿಳಿಸಿದೆ. ಅದೇ ರೀತಿ ಕೆಲಸಗಳಲ್ಲಿ ಹಾಗೂ ನೀತಿ ನಿರ್ಧಾರಕ ಸಮಿತಿಗಳಲ್ಲಿ ಹೆಚ್ಚು ಹೆಚ್ಚಾಗಿ ಮಹಿಳೆಯರನ್ನು ತೊಡಗಿಸುವುದು ಯಾರಿಗೂ ಇಷ್ಟವಿಲ್ಲ. ಓಹ್ ಮಹಿಳೆಯರನ್ನು ನಾವು ಕೆಲಸದಲ್ಲಿ ತೊಡಗಿಸುತ್ತೇವೆ. ಯಾಕೆಂದರೆ ಅವರಿಗೆ ಕಡಿಮೆ ಕೂಲಿ ಕೊಡಲು ಹಾಗೂ ಅವರನ್ನು ಹೆಚ್ಚಾಗಿ ಸುಲಿಗೆ ಮಾಡಲು ಎಂಬುದನ್ನೇ ಮರೆತಿದ್ದೆ. ಮಾಡಬೇಕಾದ ಕೆಲಸ ಬಹಳಷ್ಟಿದೆ. ಲಿಂಗ ನ್ಯಾಯದತ್ತ ಕಾಣಲು ನಮ್ಮ ಬಹುತೇಕ ಮಹಿಳೆಯರಿಗೆ ಅವಕಾಶವಿಲ್ಲ. ಅದಲ್ಲದೆ ಪ್ರತಿದಿನ ಬದುಕು ಸಾಗಿಸುವುದು ಅವರಿಗೆ ಅನಿವಾರ್ಯವಾಗಿದೆ. ಲಿಂಗ ತಾರತಮ್ಯ, ಜನಾಂಗವಾದ, ಬಡತನ ಮತ್ತು ಸಲಿಂಗಕಾಮಿಗಳ ದ್ವೇಷ ಮುಂತಾದ ಪಿಡುಗುಗಳ ಬಗ್ಗೆ ಚಿಂತಿಸಬೇಕಿಲ್ಲದ, ಒಳ್ಳೆಯ ಜೀವನ ಸಾಗಿಸುವ ಅವಕಾಶ ಉಳ್ಳಂತಹ ನಮ್ಮಂಥವರು ನಮ್ಮೆದುರಲ್ಲೇ ಸ್ತ್ರೀದ್ವೇಷದ ಕೃತ್ಯಗಳು ನಡೆಯುತ್ತಿರುವ ಬಗ್ಗೆ ಕಣ್ತೆರೆಯುವ ಹೊಣೆಗಾರಿಕೆ ಹೊಂದಿದ್ದೇವೆ. ಅದಾದ ಮೇಲೆ ಅದನ್ನು ತಡೆಯುವುದೂ ನಮ್ಮ ಕರ್ತವ್ಯ.

ಮಹಿಳಾ ದಿನಾಚರಣೆ ಕ್ಯಾಲೆಂಡರ್ ಮೇಲಿನ ಒಂದು ದಿನದಲ್ಲಿ ಅಥವಾ ಶುಭಾಶಯಗಳನ್ನು ಮತ್ತು ಉಡುಗೊರೆಗಳನ್ನು ವಿನಿಮಯ ಮಾಡಿಕೊಳ್ಳುವ ವಿಶೇಷ ದಿನವಲ್ಲ. ನಮ್ಮ ಸಂಕಲ್ಪವನ್ನು ಇನ್ನಷ್ಟು ಗಟ್ಟಿಗೊಳಿಸಬೇಕಾದ ದಿನವದು. ಸಮಾನತೆಗಾಗಿ ಹೋರಾಟ ನಡೆಸುವುದೇ ಆ ಸಂಕಲ್ಪ. ನೂರು ವರ್ಷಗಳು ಕಳೆದುಹೋಗಿವೆ. ಆದರೆ ಹೋರಾಟ ಮುಂದುವರಿಯುತ್ತದೆ. ನಾವು ವಿರಮಿಸಬಾರದು.

ಕನ್ನಡಕ್ಕೆ : ಏಶ್ವ

ಇದು ಕಥೆಯಲ್ಲ

ದುಡಿಯುವ ಮಹಿಳೆಯ ಸಂಕಷ್ಟಮಯ ಜೀವನ

ಮಹಿಳೆಯ ದುಡಿಮೆಯನ್ನು ಬಹಳ ಸಾರಿ ಗುರಿತಿಸುವುದೇ ಇಲ್ಲ. ಅರೆ ಬರೆ ಗುರುತಿಸಿದರೂ ನಿಕೃಷ್ಟ ವೇತನ, ತಾರತಮ್ಯ, ಮಹಿಳೆ ಎಂಬ ತಾತ್ಸಾರ. ದುಡಿಮೆಯ ವಿವಿಧ ಕ್ಷೇತ್ರಗಳ ಪರಿಸ್ಥಿತಿ, ಸಮಸ್ಯೆಗಳ ಕುರಿತು ಓದಿ.

• ವರಲಕ್ಷ್ಮಿ .ಎಸ್



"ಆಪರೇಷನ್ ಥಿಯೇಟರ್‌ಗೆ ಗರ್ಭಿಣಿ ಸ್ತ್ರೀಯನ್ನು ಶಸ್ತ್ರ ಚಿಕಿತ್ಸೆ ಮಾಡಿ ಮಗುವನ್ನು ತೆಗೆಯಲು ಕರೆದುಕೊಂಡು ಹೋದರು. ರೂ.2000 ಹಣ ಡಾಕ್ಟರ್‌ಗೆ ಪಾವತಿಯಾಗಿಲ್ಲವೆಂದು ಗರ್ಭಿಣಿ ಸ್ತ್ರೀಯನ್ನು ಆಸ್ಪತ್ರೆಯಿಂದ ಹೊರಗೆ ಕಳಿಸಿ ಬಿಟ್ಟರು. ಆಶಾ ಕಾರ್ಯಕರ್ತೆಯಾದ ನಾನು ಆಗ ಡಾಕ್ಟರ್ ಹತ್ತಿರ ಕೇಳಿದೆ ಈ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಎಲ್ಲವೂ ಆಗುತ್ತದೆ ಎಂದು ತರಬೇತಿ ನೀಡುವ ಸಂದರ್ಭದಲ್ಲಿ ಹೇಳಿದ್ದರು, ಆದರೆ ನೀವು ಈಗ ಹಣ .... ಬೇಡಿದರೆ ಹೇಗೆ? ಎಂದು. ಅದಕ್ಕವರು 'ಪ್ರಶ್ನೆ ಮಾಡುವುದು ನಿನ್ನ ಕೆಲಸವಲ್ಲ!' ಎಂದು ಬಾಯಿ ಬಡಿಯಲು ಯತ್ನಿಸಿದರು.

ಹೆರಿಗೆಯಾದರೆ ಕೆಲಸವಿಲ್ಲ

- ಮಂಡ್ಯ ತಾಲೂಕಿನ ಮಲ್ಲಿಗೆರೆ ಗ್ರಾಮದಲ್ಲಿ 2ನೇ ಸಹಾಯಕಿಯ ಕೆಲಸ ಮಾಡುತ್ತಿದ್ದವಳು ಹೆರಿಗೆಗೆ ಎಂದು ರಜೆ ಕೇಳಿದಾಗ ನಿನ್ನದು "ಕೆಲಸ ಖಾಯಂ ನೌಕರಿ ಅಲ್ಲ, ಹೆರಿಗೆ ರಜೆ ಇಲ್ಲ, ನೀನು ಕೆಲಸಕ್ಕೆ ರಾಜೀನಾಮೆ ಕೊಡಬೇಕು. ಇಲ್ಲದಿದ್ದರೆ ಕೆಲಸದಿಂದ ತೆಗೆಯುತ್ತೇವೆ" ಎಂದರು. ಆಕೆ ರಾಜೀನಾಮೆ ಕೊಟ್ಟಳು. ಹೆರಿಗೆ ನಂತರ ಕೆಲಸ ಇಲ್ಲ, ಇದುವರೆಗೂ ಆಕೆಯನ್ನು ಕೆಲಸಕ್ಕೆ ತೆಗೆದುಕೊಂಡಿಲ್ಲ.

*

ನಿವೃತ್ತಿ ಇಲ್ಲವೇ?

ಸಮಗ್ರ ಶಿಶು ಅಭಿವೃದ್ಧಿ ಯೋಜನೆಗಾಗಿ 1975ರಿಂದ ದುಡಿಯುತ್ತಿರುವ ಸಹಾಯಕಿ ಕೇಳುವುದು 'ಮೇಡಂ ನನಗೆ ದೇಹದಲ್ಲಿ ನಿಶ್ಯಕ್ತಿ ಹೆಚ್ಚಾಗುತ್ತಿದೆ, ದುಡಿಯಲು ಆಗುತ್ತಿಲ್ಲ, ಅಂಗನವಾಡಿ ಕೆಲಸ ಎಂದರೆ ನಿವೃತ್ತಿಯೇ ಇಲ್ಲವೇ?'

*


ಆಪರೇಷನ್ ಆಗಿದೆ ನಾನೇನು ಮಾಡಲಿ?

'ನನಗೆ 2-3 ಆಪರೇಷನ್ ಆಗಿದೆ, ನಿಂತು, ಮಾಡುವ, ಭಾರ ಎತ್ತುವ ಕೆಲಸಗಳನ್ನು ಮಾಡಲಾಗುವುದಿಲ್ಲ, ದಯವಿಟ್ಟು ಯೂನಿಯನ್ ಮುಖಾಂತರ ಸ್ವಲ್ಪ ಹೇಳಿಸಿ ಕುಳಿತು ಕೆಲಸ ಮಾಡುವ ಅವಕಾಶ ಮಾಡಿ 'ಎಂದು ಕೇಳುವುದು ಗಾರ್ಮೆಂಟ್ಸ್ ಮಹಿಳೆಯರು.

ನಸುಕಲೇ ಎದ್ದು - ನಡುಗುತ

ಬೆಳಿಗ್ಗೆ 6.00 ಗಂಟೆಗೆ ಬೆಂಗಳೂರಿನ ಕುಂಬಳಗೋಡಿನ ಬಿಸ್ಕತ್ ಫ್ಯಾಕ್ಟರಿಗೆ ಮಹಿಳೆಯರು ಸೀರೆಯ ಸೆರಗನ್ನು ಮೈ ತುಂಬಾ ಹೊದ್ದು ಕೊಂಡು ಚಳಿಯಲ್ಲಿ ನಡುಗುತ್ತಾ ಕೆಲಸಕ್ಕೆ ಹೋಗುತ್ತಾರೆ. ಅವರಿಗೆ ಅಡ್ಡ ಬರುವವರು ವಿಸ್ಮಯರಾಗುತ್ತಾರೆ. ಬೇರೆ ಬೇರೆ ಊರುಗಳಿಂದ ಹೇಗೆ ಈ ಹೆಣ್ಣು ಮಕ್ಕಳು ಬೆಳಿಗ್ಗೆ ಎದ್ದು ಅಡುಗೆ ಮಾಡಿ, ಮನೆ ಕೆಲಸ, ಮಕ್ಕಳ ಕೆಲಸ ಮಾಡಿ ಮುಗಿಸಿ ಇಷ್ಟುಬೇಗ ಬರುತ್ತಾರೆಂದು? ಜಗತ್ತಿನ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಒಂದು ಪ್ರಮುಖ ಬಿಂದು, ಗಾರ್ಡನ್ ಸಿಟಿ, ರಫ್ತು ವಲಯಕ್ಕೆ ಪ್ರಖ್ಯಾತವಾಗಿರುವ ಬೆಂಗಳೂರಿಗೆ ಶ್ರೀರಂಗಪಟ್ಟಣ, ಪಾಂಡವಪುರ, ಮಂಡ್ಯ, ಮದ್ದೂರಿನ ಮಹಿಳೆಯರು ಬರುತ್ತಾರೆ. ಮೈಸೂರಿನಿಂದ ಬೆಂಗಳೂರಿಗೆ ಬರುವ ರೈಲಿನಲ್ಲಿ ಅವರನ್ನು ನೋಡಬೇಕು. ಅವರ ಗಂಡನ ಬಗ್ಗೆ, ಮಕ್ಕಳ ಬಗ್ಗೆ, ಕೆಲಸದ ಬಗ್ಗೆಯೇ ಚರ್ಚೆ. ಏಕೆಂದರೆ ಅವರಿಗೆ ಹೊರ ಜಗತ್ತಿನ ಪರಿವೆಯೇ ಇಲ್ಲ. ರೈಲಿನಲ್ಲಿಯೇ ತಿಂಡಿ, ತಲೆ ಬಾಚುವುದು, ತಲೆಗೆ ಎಣ್ಣೆ ಇಟ್ಟುಕೊಳ್ಳುವುದು, ಒಬ್ಬಳು ಇನ್ನೊಬ್ಬಳಿಗೆ ಡ್ರೆಸ್ ಮಾಡಿಕೊಳ್ಳಲು ಸಹಾಯ ಮಾಡುವುದು, ಕಷ್ಟವನ್ನು ಹೇಳಿಕೊಂಡು ಕಣ್ಣೀರಿಟ್ಟರೆ, ಅವಳಿಗೆ ಸಮಾಧಾನ ಮಾಡುವುದು ಹೀಗೆ........ ಮುಂದುವರಿಯುತ್ತದೆ.

ಕೆಲಸ ಮುಗಿಸಿಯೇ ಮನೆಗೆ




ಕುಂಬಳಗೋಡಿನಿಂದ ಬೆಂಗಳೂರು ನಗರಕ್ಕೆ ಬರುವಾಗ 10-15 ಗಾರ್ಮೆಂಟ್ಸ್ ಕಾರ್ಖಾನೆಗಳು ಕಾಣುತ್ತವೆ. ಅಲ್ಲಿ ಕೆಲಸಕ್ಕೆ ಬರುವ ಹೆಣ್ಣು ಮಕ್ಕಳು ಟಾರ್ ರಸ್ತೆ ಪಕ್ಕದ ಮಣ್ಣಿನ ರಸ್ತೆಯಲ್ಲಿ ಎಲ್ಲರೂ ಗುಂಪಾಗಿ ಕುಳಿತು ತಿಂಡಿ ತಿನ್ನುತ್ತಾ ಇರುತ್ತಾರೆ. ಬೆಳಿಗ್ಗೆ 8.30ರ ನಂತರ ನೋಡಿದರೆ ಕನಿಷ್ಟ ಒಂದೊಂದು ಕಾರ್ಖಾನೆ ಬಾಗಿಲ ಬಳಿ ಮಹಿಳಾ ಕಾರ್ಮಿಕರ ಹಿಂಡು ಏನನ್ನೋ ಕಾಯುತ್ತಾ ನಿಂತಿರುತ್ತದೆ. 15-20 ನಿಮಿಷ ತಡವಾಗಿ ಬಂದರೆ ಫ್ಯಾಕ್ಟರಿ ಒಳಗೆ ಬಿಡದೇ ಅಂದು ಗೈರು ಹಾಜರಿ ಹಾಕಿ ಮನೆಗೆ ಕಳಿಸುತ್ತಾರೆ. ಕೆಲವೊಮ್ಮೆ ಬೇರೆ ಬೇರೆ ಊರುಗಳಿಂದ ಪ್ರಯಾಣ ಮಾಡಿ ಬರುವಾಗ ಬ್ಯಾಂಕ್ ಮಹಿಳೆಯರು ಬಸ್ಸಿನಲ್ಲಿ ಸಿಗುತ್ತಾರೆ. ಏಕೆ ಮೇಡಂ ನೀವು ಇಷ್ಟೋತ್ತಾದರೂ ' ಮನೆಗೆ ಯಾವಾಗ ತಲುಪುತ್ತೀರಿ' ಎಂದರೆ '....ಏನು ಮಾಡೋದು ವರ್ಗಾವಣೆ ಆಗಿದೆ, ಬದುಕಲಿಕ್ಕೆ ಕೆಲಸ ಬೇಕಲ್ಲ, ಈಗ ಬ್ಯಾಂಕ್ ಉದ್ಯೋಗಿಗಳ ಸಂಖ್ಯೆ ಕಡಿಮೆ ಆಗಿದೆ. ಅಂದಿನ ಕೆಲಸ ಎಷ್ಟೇ ಇದ್ದರೂ, ಅದನ್ನು ಮುಗಿಸಿಯೇ ಮನೆಗೆ ಬರಬೇಕು" ಎಂಬ ಉತ್ತರ ಸಿಗುತ್ತದೆ.



ಎಲ್‌ಐಸಿಯಲ್ಲಿ ಕೂಡಾ ವರ್ಷಾಂತ್ಯ ಬಂದರೆ ಎಷ್ಟೇ ಕೆಲಸ ಇದ್ದರೂ ರಾತ್ರಿ-ಹಗಲು ಕೆಲಸ ಮಾಡಿ ಅದನ್ನು ಮುಗಿಸಲೇ ಬೇಕು. ಇಲ್ಲಿಯೂ ಕೂಡಾ ಹೆಣ್ಣುಮಕ್ಕಳು ಎಂಬ ಯಾವುದೇ ರಿಯಾಯಿತಿ ಇಲ್ಲ. ಮಂಡ್ಯದಲ್ಲಿ ನಾನಿದನ್ನು ಕಣ್ಣಾರೆ ಕಂಡೆ.

ಗರ್ಭಿಣಿ, ಬಾಣಂತಿಯರು ಅರ್ಜಿ ಹಾಕಬೇಡಿ !!

ಎಸ್‌ಬಿಐನಲ್ಲಿ ನೇಮಕಾತಿ ಬಗ್ಗೆ ಒಂದು ಪ್ರಕಟಣೆ ಬಂತು. ಅದರಲ್ಲಿ ಆಗ ತಾನೇ ಮದುವೆಯಾದ ಮಹಿಳೆ, ಗರ್ಭಿಣಿಯಾಗಿರುವ ಹಾಗೂ ಬಾಣಂತಿ ಮಹಿಳೆಯರು ಕೆಲಸಕ್ಕೆ ಅರ್ಜಿ ಹಾಕಬಾರದು ಎಂದಿತ್ತು. ಪ್ರಕೃತಿದತ್ತ ಹೆರಿಗೆ ಇತ್ಯಾದಿ ಕೂಡಾ ಕೆಲಸದ ನೇಮಕಾತಿಗೆ ಅಡಚಣೆಯೇ?



ಇಲ್ಲಿ ಕೊಟ್ಟಿರುವ ಉದಾಹರಣೆಗಳು ಕಲ್ಪಿತ ಕತೆಗಳಲ್ಲ. ಇಂದಿಗೂ ಜೀವಂತವಾಗಿರುವ ವಾಸ್ತವಿಕ ಸಮಸ್ಯೆಗಳು.

ನಾವಿಂದು 100ನೇ ಅಂತರರಾಷ್ಟ್ರೀಯ ದುಡಿಯುವ ಮಹಿಳಾ ದಿನಾಚರಣೆಯನ್ನು ಆಚರಿಸುತ್ತಿದ್ದೇವೆ. ದುಡಿಯುವ ಮಹಿಳೆಯರ ಮೇಲಿನ ಶೋಷಣೆ ವಿರುದ್ಧ ಸಂಘಟಿತ ಚಳುವಳಿಗೆ ಇಷ್ಟು ದೀರ್ಘಕಾಲಿನ ಇತಿಹಾಸವಿದೆ. ಕೈಗಾರಿಕಾ ಕ್ರಾಂತಿ ಸಂಭವಿಸಿದ ನಂತರ 1857ರಲ್ಲಿ ಸಾವಿರಾರು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು ಬೀದಿಗೆ ಇಳಿದು ಪ್ರತಿಭಟಿಸಿ ಹಕ್ಕುಗಳಿಗಾಗಿ ಹೋರಾಡಿದ ದಿನ. ಆಸ್ಟ್ರಿಯಾ, ಡೆನ್ಮಾರ್ಕ್, ಜರ್ಮನಿ ಮತ್ತು ಸ್ವಿಟ್ಜರ್ಲೆಂಡ್‌ನಲ್ಲಿ ಮಾರ್ಚ್ 8, 1911ರಂದು ಹತ್ತು ಲಕ್ಷಕ್ಕೂ ಹೆಚ್ಚು ಮಹಿಳೆಯರು ಬೀದಿಗಿಳಿದ ದಿನ. ಅಂದಿನಿಂದ ಇಂದಿನವರೆಗೂ ಸಾಗರೋಪಾದಿಯಲ್ಲಿ ದುಡಿಯುವ ಮಹಿಳೆಯರು ಅವರ ಹಕ್ಕುಗಳಿಗಾಗಿ ತೀವ್ರತರವಾದ ಹೋರಾಟವನ್ನು ನಡೆಸುತ್ತಾ ಬಂದಿದ್ದಾರೆ.

ಅಂದಿನ ದಿನಗಳಲ್ಲಿ ಹಕ್ಕುಗಳಿಗಾಗಿ ನಡೆಸಲಾದ ಹೋರಾಟಗಳ ಫಲವಾಗಿ ಎಷ್ಟೋ ಕಾರ್ಮಿಕ ಪರ ಕಾನೂನುಗಳನ್ನು ರಚಿಸಲಾಗಿತ್ತು.


ಆದರೆ ಇಂದು ಉದಾರೀಕರಣ, ಜಾಗತೀಕರಣ, ಖಾಸಗೀಕರಣ ಎಲ್‌ಪಿಜಿ ನೀತಿಗಳ ಪರಿಣಾಮದಿಂದ ಇರುವ ಕಾನೂನುಗಳನ್ನು, ಹಕ್ಕುಗಳನ್ನೇ ತಿರುಚಲಾಗುತ್ತಿದೆ. ಅಷ್ಟೇ ಅಲ್ಲದೆ ದುಡಿಯುವ ಜನತೆಯ ದುಡಿಮೆಯನ್ನು ವಿಕೇಂದ್ರೀಕರಿಸಿ 'ಕೆಲಸ ಕಳೆದುಕೊಳ್ಳುವ ಸ್ಥಿತಿ'ಯಿಂದ 'ಕೆಲಸವಿಲ್ಲದ ಸ್ಥಿತಿ'ಗೆ ತಲುಪಿದ್ದೇವೆ.

ಇದರ ಆಧಾರದಲ್ಲಿ ದುಡಿಯುವ ಮಹಿಳೆಯರ ಪರಿಸ್ಥಿತಿಯನ್ನು ಅವಲೋಕಿಸಬೇಕಿದೆ.

ಶ್ರೀಮಂತ-ಬಡವರ ನಡುವಿನ ಅಂತರ ಅಗಾಧವಾಗಿದೆ. ಇಡೀ ಏಷ್ಯಾದಲ್ಲಿ ಭಾರತದಲ್ಲೇ 9 ಜನ ಡಾಲರ್ ಬಿಲಿಯಾಧಿಪತಿಗಳಿದ್ದವರು (ಡಾಲರ್ ಬಿಲಿಯಾಧಿಪತಿ ಎಂದರೆ 5,000 ಕೋಟಿ ರೂ. ಸಂಪತ್ತು ಹೊಂದಿದವರು ಎಂದರ್ಥ) 4 ವರ್ಷಗಳಲ್ಲಿ ಇವರ ಸಂಖ್ಯೆ 53 ಬಿಲಿಯಾಧಿಪತಿಗಳು ಆಗಿದ್ದಾರೆ. ನಮ್ಮ ದೇಶದಲ್ಲಿ ಖಾಸಗಿ ಕಂಪನಿ ಉನ್ನತ ಹುದ್ದೆಯಲ್ಲಿರುವ ವ್ಯಕ್ತಿಯೊಬ್ಬರು ದಿನವೊಂದಕ್ಕೆ 8,64,000 ರೂ.ಗಳ ವೇತನ ಗಳಿಸುವ ಹಾಗೆಯೇ ಶೇ.79 ಅಸಂಘಟಿತ ಕ್ಷೇತ್ರದ ಕಾರ್ಮಿಕರು ರೂ.20 ರೂ. ಮಾತ್ರ ದಿನಕ್ಕೆ ಆದಾಯ ಗಳಿಸುತ್ತಿದ್ದಾರೆ.

ಜಗತ್ತಿನಲ್ಲಿ ಪ್ರತಿ 6 ಜನರಲ್ಲಿ ಒಬ್ಬರು ಹಸಿವಿನಿಂದ ಬಳಲುತ್ತಿದ್ದಾರೆ. ಇದನ್ನು ಗಮನಿಸಿಯೇ ವಿಶ್ವ ಸಂಸ್ಥೆಯ ಮಹಾ ಕಾರ್ಯದರ್ಶಿ ಬೆನ್‌ಕಿಮೂನ್ ಅವರು ಹೇಳಿದ್ದು, ಜಗತ್ತಿನ ಒಂದು ನೂರು ಕೋಟಿ ಜನ ಹಸಿವಿಗೆ ಈಡಾಗಿರುವುದು ಆಹಾರದ ಅಭಾವದಿಂದ ಅಲ್ಲ, ಬದಲಾಗಿ ಧಾನ್ಯಗಳನ್ನು ಕೊಳ್ಳಲು ಆದಾಯವಿಲ್ಲದೆ ಎಂದು.

ಉದ್ಯೋಗವಕಾಶ ಇಳಿಕೆ: ಸಾಂಪ್ರಾದಾಯಿಕವಾಗಿ ಮಹಿಳೆಯರೇ ಹೆಚ್ಚಾಗಿ ದುಡಿಯುತ್ತಿದ್ದ ಕ್ಷೇತ್ರಗಳಲ್ಲಿನ ಉದ್ಯೋಗ ಅವಕಾಶಗಳಲ್ಲಿ ಇಳಿತ ಉಂಟಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಕ್ಷೇತ್ರದಲ್ಲಿ ಉದ್ಯೋಗ ದೊರೆಯುತ್ತಿದ್ದ ದಿನಗಳಲ್ಲಿ ಸಂಖ್ಯೆ ಇಳಿಮುಖವಾಗಿದೆ. ಮಹಿಳೆಯರಿಗೆ ವೇತನ ರಹಿತ ಕೆಲಸ ಹೆಚ್ಚಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಸ್ವಉದ್ಯೋಗಿಗಳೆಂದು ಗುರುತಿಸಲ್ಪಡುವ ಮುಕ್ಕಾಲು ಪಾಲು ಮಹಿಳೆಯರು ಯಾವುದೇ ವೇತನವಿರದ ಕೌಟುಂಬಿಕ ಕೆಲಸಗಾರರು, ಕೃಷಿ ಬಿಕ್ಕಟ್ಟು ಮತ್ತು ಕೃಷಿ ಅವಶ್ಯಕ ಸಾಮಗ್ರಿಗಳ ಬೆಲೆಯಲ್ಲಾಗಿರುವ ಹೆಚ್ಚಳದಿಂದಾಗಿ ಕೂಲಿಕಾರರನ್ನು ನೇಮಿಸಿಕೊಳ್ಳುತ್ತಿದ್ದ ಕುಟುಂಬಗಳು ಈಗ ನೇಮಿಸಿಕೊಳ್ಳುತ್ತಿಲ್ಲ.. ಬೀಡಿ, ಕೈಮಗ್ಗ ವಲಯಗಳ ಕೆಲಸ ಮಾಡುತ್ತಿರುವವರಿಗೆ ತಿಂಗಳಿಗೆ 10 ದಿನಕ್ಕಿಂತ ಹೆಚ್ಚು ಕೆಲಸ ದೊರೆಯುತ್ತಿಲ್ಲ, ಹಲವಾರು ಸಾಂಪ್ರಾದಾಯಿಕ ಗುಡಿ ಕೈಗಾರಿಕೆಗಳು ಮುಚ್ಚಿವೆ. ಅಸಂಘಟಿತ ವಲಯದಲ್ಲಿ ದೊರೆಯುವ ಕನಿಷ್ಟ ಕೂಲಿ ಸರ್ಕಾರವೇ ನಿಗದಿ ಮಾಡಿದ ವೇತನಕ್ಕಿಂತ ಕಡಿಮೆಯಿದೆ. ಒಂದು ಸರ್ವೇಯ ಪ್ರಕಾರ ಶೇ.85ರಷ್ಟು ಮಹಿಳೆಯರಿಗೆ ಸರ್ಕಾರವೇ ಕನಿಷ್ಠ ಮಿತಿಗಿಂತ 50 ಶೇ. ಕಡಿಮೆ ವೇತನ ನೀಡುತ್ತಿದೆ.



ದಾಖಲಾಗದ ಕೊಡುಗೆ

ಶೇ. 90 ರಷ್ಟು ಮಹಿಳೆಯರೇ ದುಡಿಯುವ ಕೆಲಸಗಳಲ್ಲಿ ಉಪ ಗುತ್ತಿಗೆದಾರರು ಗುತ್ತಿಗೆದಾರರ ಮೂಲಕ ಮಹಿಳೆಯರಿಗೆ ಕೆಲಸ ಒದಗಿಸಲಾಗುತ್ತದೆ. ಇವರನ್ನು ಉದ್ಯೋಗಿಗಳು ಎಂದೇ ಪರಿಗಣಿಸಲಾಗುವುದಿಲ್ಲ. ಇವರ ದುಡಿಮೆಯು ಎಲ್ಲೂ ದಾಖಲಾಗದ ಕಾರಣ ಜೆ.ಡಿ.ಪಿ.ಯ ಬೆಳವಣಿಗೆಗೆ ಇವರು ನೀಡುವ ಕೊಡುಗೆಯನ್ನು ಗುರುತಿಸಲಾಗುತ್ತಿಲ್ಲ. 10-12 ಗಂಟೆಗಳ ದುಡಿಮೆ ಮಾಡಿಸಲಾಗುತ್ತಿದೆ.

ಕಾಯಂ ಕೆಲಸಗಳನ್ನು ಕೂಡಾ ಗುತ್ತಿಗೆ ಆಧಾರದಲ್ಲಿ ಮಾಡಿಸಿಕೊಳ್ಳಲಾಗುತ್ತಿದೆ. ನೌಕರರ ಹಿತಾಸಕ್ತಿ ಕಾಯಬೇಕಾದ ಸರ್ಕಾರವೇ ಅಂಗನವಾಡಿ, ಬಿಸಿಯೂಟ, ನೌಕರರನ್ನು ಯೋಜನೆಗಳ ಆಧಾರದಲ್ಲಿ ಸುಮಾರು 30 ಲಕ್ಷ ಮಹಿಳೆಯರನ್ನು ಗೌರವಧನದ ಆಧಾರದಲ್ಲಿ, 6-7 ಲಕ್ಷ ಮಹಿಳೆಯರನ್ನು ಆಶಾ ಎಂಬ ಹೆಸರಿನಲ್ಲಿ 'ಪೀಸ್‌ರೇಟ್' ನಲ್ಲಿ ದುಡಿಸುತ್ತಿದೆ.

45 ಲಕ್ಷ ಮಹಿಳೆಯರು ಸಣ್ಣ ವ್ಯಾಪಾರಸ್ಥರಾಗಿ ದುಡಿಯುತ್ತಿದ್ದಾರೆ. ಬಿಗ್ ಬಜಾರ್, ಸ್ಪೆನ್ಸರ್ಸ್ ಮತ್ತು ರಿಲಯನ್ಸ್‌ನಂತಹ ದೊಡ್ಡ ವ್ಯಾಪಾರಸ್ಥರು ಬಂದ ಮೇಲೆ ಹಲವು ಲಕ್ಷ ಮಹಿಳೆಯರು ಕೆಲಸ ಕಳೆದುಕೊಂಡಿದ್ದಾರೆ.

ತಾರತಮ್ಯ: ಸಮಾಜದಲ್ಲಿ ಪ್ರಚಲಿತವಿರುವ ಮಹಿಳೆಯರ ದುಡಿಮೆ 'ಪೂರಕ ದುಡಿಮೆ' ಎಂಬ ನಂಬಿಕೆಯಿಂದಾಗಿ ಕಡಿಮೆ ಸಂಬಳದಲ್ಲಿ ಮಹಿಳೆಯರನ್ನು ದುಡಿಸಲಾಗುತ್ತಿದೆ. ಸಮಾನ ವೇತನ ಕಾನೂನು ಇದ್ದರೂ ಕೂಡಾ ಪುರುಷರಿಗಿಂತ ಶೇ.30 ಕಡಿಮೆ ಸಂಬಳವನ್ನು ಮಹಿಳೆಯರು ಪಡೆಯುತ್ತಿದ್ದಾರೆ.

ಪವಿತ್ರವೆಂದು ಕರೆಯಲ್ಪಡುವ ತಾಯ್ತನವೇ ಮಹಿಳೆಯರ ಪಾಲಿಗೆ ಶಾಪವಾಗಿ ಪರಿವರ್ತಿತವಾಗುತ್ತಿದೆ. ದೇಶದ ಹೆಚ್ಚಿನ ಉದ್ಯೋಗಪತಿಗಳು ಮತ್ತು ಉದ್ಯಮಪತಿಗಳು ಗರ್ಭಿಣಿಯರಿಗೆ ರಜೆ ಕೊಡಬೇಕು ಎನ್ನುವ ಕಾರಣಕ್ಕಾಗಿ ಕೆಲಸಕ್ಕೆ ನೇಮಿಸಿಕೊಳ್ಳುತ್ತಿಲ್ಲ. ಆರ್ಥಿಕ ವಲಯ ಮತ್ತು ರಫ್ತು ವಲಯಗಳಲ್ಲಿ 18-25 ವರ್ಷದ ಅವಿವಾಹಿತ ಮಹಿಳೆಯರನ್ನು ಮಾತ್ರವೇ ಕೆಲಸಕ್ಕೆ ನೇಮಿಸಿಕೊಳ್ಳಲಾಗುತ್ತಿದೆ. ಬ್ಯಾಂಕ್, ಎಲ್‌ಐಸಿ ಗಳಲ್ಲಿ ನೇಮಕಾತಿಯೇ ಇಲ್ಲ.

ಗಾರ್ಮೆಂಟ್ಸ್, ಗುತ್ತಿಗೆ ಪದ್ಧತಿ, ಗೃಹಾಧಾರಿತ ಕೈಗಾರಿಕೆಗಳಾದ ಅಗರಬತ್ತಿ, ಕೈಮಗ್ಗ, ಚರ್ಮಾಧಾರಿತ ಕೆಲಸ, ಪೀಸ್‌ರೇಟ್‌ನಲ್ಲಿ ದುಡಿಯುವವರು, ಹಮಾಲಿ ಮಹಿಳಾ ಕಾರ್ಮಿಕರು, ಸರ್ಕಾರದ ಯೋಜನೆಗಳಾದ ಅಕ್ಷರ ದಾಸೋಹ ಯೋಜನೆ, ಪ್ರೇರಕರು ಮತ್ತು ಸಹ ಪ್ರೇರಕರು ಮತ್ತು ಆಶಾ ಕಾರ್ಯಕರ್ತೆಯರು ಮಾಧ್ಯಮಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರಿಗೆ....

1961ರಲ್ಲಿ ಹೆರಿಗೆ ಸೌಲಭ್ಯಗಳ ಕಾನೂನು ಇದ್ದರೂ ಕೂಡಾ ಮೇಲೆ ವಿವರಿಸಿದ ಹಲವಾರು ಕಡೆಗಳಲ್ಲಿ ಇದನ್ನು ನಿರಾಕರಿಸಲಾಗುತ್ತಿದೆ, 30ಕ್ಕಿಂತ ಹೆಚ್ಚು ಮಹಿಳಾ ಕಾರ್ಮಿಕರು ಇರುವೆಡೆ ಶಿಶುಪಾಲನಾ ಕೇಂದ್ರಗಳು ಇರಬೇಕೆಂದಿದ್ದರೂ ಅವು ಇರುವುದಿಲ್ಲ.

ಇದಕ್ಕೆಲ್ಲಾ ಪರಿಹಾರವೇನು? ಮಹಿಳೆ ಸಂಘಟಿತಳಾಗುವುದು. ಪ್ರಜ್ಞಾವಂತಳಾಗಿ ಸರ್ವದರಲ್ಲಿಯೂ ಮಹಿಳೆ ತನ್ನ ನ್ಯಾಯಬದ್ಧ ಹಕ್ಕು ಕೇಳುವುದು, ಹಾಗೂ ಎಲ್ಲ ಬಗೆಯ ಅಸಮಾನತೆ, ಅನ್ಯಾಯಗಳ ವಿರುದ್ಧ ಹೋರಾಟವನ್ನು ನಡೆಸುವುದು, ಇದೊಂದೇ ಪರಿಸ್ಥಿತಿಯನ್ನು ಬದಲಿಸುವ ಮಾರ್ಗ. ●



ಹೆಚ್ಚುತ್ತಿರುವ ದೌರ್ಜನ್ಯಗಳು

ವಿಶೇಷ ಆರ್ಥಿಕ ವಲಯದ 'ಕಾಲ್ ಸೆಂಟರ್'ಗಳಲ್ಲಿ ಮಹಿಳೆಯರು ರಾತ್ರಿ ಪಾಳಿಯದಲ್ಲಿ ಕೆಲಸ ಮಾಡುವ ಒತ್ತಡವಿದೆ. ಸಾರಿಗೆ ವ್ಯವಸ್ಥೆ ಮತ್ತು ಭದ್ರತೆಯನ್ನು ಒದಗಿಸುವಲ್ಲಿ ಹೆಚ್ಚಿನ ಪ್ರಯತ್ನ ಅದರ ಮಾಲಿಕರಿಂದ ನಡೆದಿಲ್ಲ. ಇಲ್ಲಿಯೂ ಲೈಂಗಿಕ ಕಿರುಕುಳ ದೌರ್ಜನ್ಯ, ಹಲ್ಲೆ ಅನ್ಯಾಯಗಳು ಹೆಚ್ಚುತ್ತಿದೆ. ಉದಾ: ಬೆಂಗಳೂರಿನಲ್ಲಿ ಪ್ರತಿಭಾ ಶೆಟ್ಟಿಯ ಕೊಲೆ.

ಲೈಂಗಿಕ ಕಿರುಕುಳ ಎನ್ನುವುದು ಐಎಎಸ್ ಮಹಿಳಾ ಅಧಿಕಾರಿಗಳಿಂದ ಹಿಡಿದು ಎಲ್ಲಾ ವಿಭಾಗದ ಮಹಿಳೆಯರ ಮೇಲೂ ನಡೆಯುತ್ತಿದೆ. ಸರ್ವೋಚ್ಚ ನ್ಯಾಯಾಲಯ ತಂದಿರುವ ತೀರ್ಪು ಕಾನೂನು ಆಗಿ ಬರಬೇಕೆಂದೂ ಒತ್ತಾಯಿಸಲಾಗುತ್ತಿದೆ. ಆದರೆ ಸರ್ಕಾರಗಳು ಇದರ ಬಗ್ಗೆ ಹೆಚ್ಚಾಗಿ ಗಮನ ಕೊಡುತ್ತಿಲ್ಲ. 85ಶೇ. ಮಹಿಳೆಯರು ತಮ್ಮ ಜೀವಿತಾವಧಿಯಲ್ಲಿ ಒಂದಲ್ಲ ದೇಶದಲ್ಲಿ ಒಂದು ಬಾರಿ ಲೈಂಗಿಕ ಕಿರುಕುಳಕ್ಕೊಳಪಡುತ್ತಾರೆ.

National Crime Records Bureau (NCRB) ಅಧ್ಯಯನದ ಪ್ರಕಾರ ದೇಶದಲ್ಲಿ ಒಂದು ವರ್ಷದಲ್ಲಿ 16,373 ಮಹಿಳೆಯರ ಮೇಲೆ ಅತ್ಯಾಚಾರ, ಒಂದು ದಿನಕ್ಕೆ 45 ಮಹಿಳೆಯರ ಮೇಲೆ ಅತ್ಯಾಚಾರ, ಪ್ರತಿ 32 ನಿಮಿಷಕ್ಕೆ ಒಬ್ಬ ಮಹಿಳೆ ಮೇಲೆ ಅತ್ಯಾಚಾರ, ಇತ್ತೀಚಿನ ದಿನಗಳಲ್ಲಿ 6.7 ಶೇ. ಇಂತಹ ಪ್ರಕರಣಗಳು ಹೆಚ್ಚಿವೆ.


44,098 ಘಟನೆಗಳು ಲೈಂಗಿಕ ದಬ್ಬಾಳಿಕೆ ನಡೆದಿರುವುದು ವರದಿಯಾಗಿದೆ. ಪ್ರತಿದಿನಕ್ಕೆ 121 ಜನ ಮಹಿಳೆಯರು ಲೈಂಗಿಕ ದಬ್ಬಾಳಿಕೆಗೊಳಗಾಗುತ್ತಿದ್ದಾರೆ. ಪ್ರತಿ 12 ನಿಮಿಷಕ್ಕೆ ಒಬ್ಬರ ಮೇಲೆ ಲೈಂಗಿಕ ದಬ್ಬಾಳಿಕೆ ನಡೆಯುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ 20.6 ಶೇ. ರಷ್ಟು ಲೈಂಗಿಕ ದಬ್ಬಾಳಿಕೆಗಳು ಹೆಚ್ಚಾಗುತ್ತಿವೆ. ಈ ಅಂಕಿ ಅಂಶಗಳೇ ಇಂದು ಮಹಿಳೆಯರ ಪರಿಸ್ಥಿತಿ ಏನಿದೆ ಎಂಬುದನ್ನು ತೋರಿಸುತ್ತಿದೆ.

ಕಾನೂನೆಂಬ ಕನ್ನಡಿಯಲ್ಲಿ ಸಮಾಜದ ಮುಖ

— ವಿಮಲಾ ಕೆ.ಎಸ್

ಕೇವಲ ಕಾನೂನು ರೂಪಿಸಿದಾಕ್ಷಣ ಮಹಿಳೆಯ ಬದುಕು ಬದಲಾಗಲಾರದು. ಆದರೆ ಇರುವ ಕಾನೂನುಗಳೇನು? ಅದರ ಸಕಾರಾತ್ಮಕ ಅಂಶಗಳೇನು, ಕೊರತೆ ಏನು? ಎಂದು ಅರ್ಥ ಮಾಡಿಕೊಂಡು ಅದನ್ನು ಪರಿಣಾಮಕಾರಿಯಾಗಿ ಬಳಸುವುದಂತೂ ಅಗತ್ಯವಾದುದಾಗಿದೆ.



ಹೆಣ್ಣಿಗೆ ದೈವತ್ವದ ಪಟ್ಟ ನೀಡಿ, 'ಮಾತೃದೇವೋಭವ' ಎಂಬ ಕಣ್ಣಿಗೆ ಕಾಣದ ಗೌರವ ನೀಡಿ ಬಾಯಿಗೆ ಬೀಗ ಜಡಿವ ವ್ಯವಸ್ಥೆ ನಮ್ಮದು. ಈ ದೈವತ್ವದ ಕಲ್ಪನೆಯೇ ಮಹಿಳೆಯ ಮೇಲೆ ನಡೆದ ಮೊದಲ ದೌರ್ಜನ್ಯ. ಅವಳಿಗೇ ಅರಿವಾಗದಂತೆ ಅವಳನ್ನು ಕಟ್ಟಿಹಾಕಿ, ಆ ಕಟ್ಟಿನೊಳಗೇ ಅವಳು ತನಗೇನೋ ಬಹಳ ದೊಡ್ಡ ಸ್ಥಾನ ಸಿಕ್ಕಿದೆ ಎಂಬುದು ಸಂಭ್ರಮಿಸಿಕೊಳ್ಳುವಂತೆ ನಾಜೂಕಾಗಿ ಒಳತಳ್ಳಿದ ವರ್ತುಲವಿದು.

ದೇವತೆ..... ಆದರೆ 'ಕನ್ಯಾದಾನ'ದ ಹಕ್ಕಿಲ್ಲ !!

ಮೊನ್ನೆ ಹೀಗೇ ಒಂದು ಕುಟುಂಬದ ಚೌಕಟ್ಟಿನೊಳಗೆ ಒಂದು ಚರ್ಚೆ ನಡೆದಿತ್ತು. ಹೆಣ್ಣುಮಗಳ ಮದುವೆಯ ಸಂಬಂಧದಲ್ಲಿ ಹಿಂದೂ ವಿವಾಹ ಸಂಪ್ರದಾಯದಂತೆ ಮದುವೆಯಲ್ಲಿ "ಕನ್ಯಾದಾನ" ಮಾಡುವುದಿದೆ. ಕನ್ಯಾದಾನ ತಂದೆ, ತಾಯಿ, ತಾಯಿ ಇಲ್ಲದಿದ್ದರೆ ತಂದೆ ಮಾತ್ರ ಕೂಡ ಸಾಮಾನ್ಯವಾಗಿ ಮಾಡಬಹುದು. ಆದರೆ ತಂದೆ ಇಲ್ಲದಿದ್ದರೆ ತಾಯಿಗೆ ಆ ಅಧಿಕಾರವಿಲ್ಲ! (ಅವಳು ದೇವರ ಸ್ಥಾನದಲ್ಲಿ ನಿಂತಿರಬಹುದಷ್ಟೆ) ಆಕಸ್ಮಾತ್ ತಂದೆ, ತಾಯಿ ಇಲ್ಲ ಎಂದರೆ ತಂದೆಯ ಕಡೆಯವರು ಮಾಡಬಹುದು. ತಾಯಿಯ ತಂಗಿ, ಅವಳ ಗಂಡ ಮುಂತಾದವರಿಗೆ ಇದರ ಅಧಿಕಾರವಿಲ್ಲ! ಹೀಗೆ ಸಂಭಾಷಣೆ ನಡೆದಿತ್ತು. ಮಾತೃದೇವೋ ಭವ ಎಂದು ಅಟ್ಟಕ್ಕೇರಿಸಿ, ನಾಜೂಕಾಗಿ ಪಾತಾಳಕ್ಕೆ ತಳ್ಳುವ ಕುರಿತು ಇದೊಂದು ಚಿಕ್ಕ ಉದಾಹರಣೆಯಷ್ಟೇ. ಹೊರುವ, ಹೆರುವ ಕ್ರಿಯೆಯೊಂದು ಜೈವಿಕ ಕ್ರಿಯೆಯಷ್ಟೇ ಎಂದುಕೊಂಡಾಗಲೂ ಸಮಾನ ಅಧಿಕಾರ ಅಥವಾ ನವ ಮಾಸ ಧರಿಸಿ, ಜೀವಕ್ಕೆ ಜೀವಕೊಟ್ಟು ಪುನರ್ ಸೃಷ್ಟಿಗೆ ಕಾರಣವಾದ ಜೀವವಿದೆಯೆಂದಾಗಲೂ ಹೆಚ್ಚಿನ ಅಧಿಕಾರವಲ್ಲದಿದ್ದರೂ ಸಮಾನ ಅಧಿಕಾರದ ಅವಕಾಶವಿರಬೇಕಿಲ್ಲವೇ? ಅಂತಹ ಅವಕಾಶವನ್ನು ಸ್ಪಷ್ಟವಾಗಿ ನಿರಾಕರಿಸುವ ಮತ್ತು ಅದು ಅತ್ಯಂತ ಸಹಜವೆಂಬಂತೆ ಸ್ವೀಕರಿಸುವ ಮನ:ಸ್ಥಿತಿಯನ್ನು ಕಟ್ಟಿ ಕೊಟ್ಟ ಪರಿಸರವಿದು. ಇಲ್ಲಿ ನನ್ನ ಚರ್ಚೆ ಕನ್ಯಾದಾನವನ್ನು ಪುಷ್ಟೀಕರಿಸುವುದಿಲ್ಲ. ಮೂಲತ: ಆ ಕ್ರಿಯೆಯೇ ಮಹಿಳೆಯ ಸ್ವತಂತ್ರ ಅಸ್ತಿತ್ವವನ್ನು ಸಾರಾಸಗಟಾಗಿ ನಿರಾಕರಿಸುವುದಾಗಿದೆ. ಆದರೆ ಈ ಸಮಾಜ ಅತ್ಯಂತ ಸಹಜವೆಂಬಂತೆ ಸ್ವೀಕರಿಸಿದ ಈ ಎಲ್ಲ ಅಂಶಗಳು. ಅಪ್ರಕಟಿತ ಹಿಂಸೆಗಳು ಅಥವಾ ಹಿಂಸೆ, ದೌರ್ಜನ್ಯ ಅಧೀನತೆಗಳ ಕುರಿತು ಮಾತನಾಡುವಾಗ ಬೆಳಕಿಗೆ ಬಾರದ ಸಂಗತಿಗಳು ಇದರ ಮುಂದುವರಿದ ಭಾಗಗಳಾಗಿಯೇ. ವೈಧವ್ಯ, ಪುನರ್ ವಿವಾಹ, ಆಸ್ತಿಹಕ್ಕು, ಬಾಲ್ಯವಿವಾಹ, ಕೌಟುಂಬಿಕ ಹಿಂಸೆ, ಸ್ತ್ರೀ ಭ್ರೂಣಹತ್ಯೆ ಈ ಎಲ್ಲ ಅಂಶಗಳು.

ಕೆಂಪು - ಬಿಳಿ ಸೀರೆ ಉಡಿಸಿ ... ತಲೆ ಬೋಳಿಸಿ....

ಮಹಿಳೆಗೆ ಸ್ವತಂತ್ರ ಅಸ್ತಿತ್ವವನ್ನೇ ನಿರಾಕರಿಸಿ ಬಾಲ್ಯದಲ್ಲಿ ತಂದೆ, ಯೌವನದಲ್ಲಿ ಗಂಡ, ವೃದ್ಧಾಪ್ಯದಲ್ಲಿ ಮಗನನ್ನು ಆಶ್ರಯಿಸಬೇಕು! ಎಂಬ ಶಾಸನವನ್ನು ವಿಧಿಸುವ ಧರ್ಮ! ಶಾಸ್ತ್ರಗಳು ಅವಳ ಬಾಲ್ಯವನ್ನೇ ಕಿತ್ತುಕೊಂಡು ಸಂಸಾರದ ನೊಗಕ್ಕೆ ಕಟ್ಟಿದ್ದನ್ನಾಗಲಿ, ರೋಗಿಯೋ ಮುದುಕನೋ, ಇನ್ನೇನೋ ಆಗಿ ಗಂಡ ಸತ್ತರೆ, ಪುನರ್ ವಿವಾಹದ ಕುರಿತು ಮಾತೇ ಆಡಲಿಲ್ಲ. ಬದಲಾಗಿ ಕಟ್ಟು, ಕಟ್ಟಳೆ, ಶಾಸನಗಳನ್ನು ರಚಿಸಿತು. ಅವಳ ವಯಸ್ಸು ಏನೇ ಇರಲಿ, ಕೆಂಪು ಬಿಳಿ ಸೀರೆ ಉಡಿಸಿ, ತಲೆ ಬೋಳಿಸಿ, ಇನ್ನೂ ಕೆಲವೆಡೆ ಗಂಡನ ಚಿತೆಯಲ್ಲಿ ಬಲವಂತವಾಗಿ ನೂಕಿ ಜೀವಂತ ದಹಿಸಿ ಧರ್ಮ ಸಾರ್ಥಕ್ಯವನ್ನು ಪಡೆಯಿತು. ಧರ್ಮ, ಸಂಪ್ರದಾಯಗಳ ಹೆಸರಿನಲ್ಲಿ ಇದನ್ನೆಲ್ಲ ಆಚರಣೆಗೆ ತಂದ ಕನಿಷ್ಠ ವ್ಯವಸ್ಥೆ ಕನಿಷ್ಠ ಒಮ್ಮೆಯೂ ಪುರುಷನಂತೆಯೇ ಮಹಿಳೆಯೂ ಒಬ್ಬ ವ್ಯಕ್ತಿ ಎಂದು ಭಾವಿಸಲೇ ಇಲ್ಲ. ಕೇವಲ ಪುರುಷನ ಮನೋವಾಂಛೆಯನ್ನು ಮತ್ತು ಈ ಸಮಾಜ ವಿಧಿಸಿದ ಕಟ್ಟುಪಾಡುಗಳನ್ನು ಪ್ರಶ್ನಾತೀತವಾಗಿ ಪಾಲಿಸಿಕೊಂಡು ಬರಬೇಕೆಂಬುದಷ್ಟೇ ಅವಳ ಕರ್ತವ್ಯ ಎಂದು ಅವಳಿಗೆ ತಿಳಿಸಲಾಯಿತು.

ಈ ಸಮಾಜ ಕೂಡ ಅದಕ್ಕೆ ತನ್ನ ಅಂಗೀಕಾರವಿದೆ ಎಂಬಂತೆ ನಡೆದುಕೊಂಡಿತು. ಅತ್ಯಂತ ಸ್ವಾಗತಾರ್ಹ ಸಂಗತಿ ಎಂದರೆ ಭಾರತದ ಚರಿತ್ರೆಯಲ್ಲೇ ದಾಖಲಾಗಿರುವ, ರಜಪೂತ ಮಹಿಳೆಯರಂತೂ ಸದಾ ನೆನಪಿಸಿಕೊಳ್ಳಬೇಕಾದ ಮತ್ತು ಇಂದಿಗೂ ಗುಟ್ಟು ಗುಟ್ಟಾಗಿ ನಡೆಯುವ ಸತಿ ಪದ್ಧತಿಯ ವಿರುದ್ಧ ಅಸ್ತ್ರದಂತೆ ಬಳಸಬಹುದಾದ ಸತಿಪದ್ಧತಿ ನಿಷೇಧ ಕಾನೂನು 1837 ಬರಲು ಪ್ರಮುಖ ಕಾರಣಕರ್ತರು, ರಾಜಾರಾಮ್ ಮೋಹನ್‌ರಾಯ್, ಎಂದರೆ ಪುರುಷ ಪ್ರಧಾನ ಮೌಲ್ಯಗಳ ಕಬಂಧಬಾಹುಗಳು ಆವರಿಸಿಕೊಂಡ ಸಮಾಜದಲ್ಲಿ ಸಮಾಜದ ಸ್ವಾಸ್ಥ್ಯದ ಪರವಾಗಿ, ಮಹಿಳಾ ಪರವಾಗಿ ಆಲೋಚಿಸುವ ಪುರುಷರ ಕೊಡುಗೆಯೂ ಅಷ್ಟೇ ಗುರುತರವಾದದ್ದು ಎಂಬುದೂ ಗಮನಿಸಬೇಕಾದದ್ದೇ.

ಹಲವು ಮಹಿಳಾ ವಿರೋಧಿ ಅಂಶಗಳನ್ನು ಸಮಾಜ ಒಪ್ಪಿಕೊಳ್ಳುವಂತಹ ವಾತಾವರಣ ನಿರ್ಮಿಸುವ ಎಲ್ಲ ಪ್ರಯತ್ನಗಳು ನಡೆದು ಒಂದಿಷ್ಟು ಸಫಲತೆ ಪಡೆಯಲಾಯಿತಾದರೂ ಅಲ್ಲಲ್ಲಿ ಇದ್ದ ಚಿಂತನಶೀಲ ಮನಸ್ಸುಗಳು ಇದರ ವಿರುದ್ಧ ಆಲೋಚಿಸತೊಡಗಿದವು. ಆಲೋಚನೆಗಳು, ವಾಕ್ಯಗಳಾಗಿ, ವಾಕ್ಯಗಳು ಸಾಹಿತ್ಯವಾಗಿ, ಸಾಹಿತ್ಯ ಸಂಘರ್ಷವಾಗಿ,



ಸಂಪಾದಿಸಬೇಕೆಂದರೆ ವರನಿಗೆ ದಕ್ಷಿಣೆಯ ರೂಪದಲ್ಲಿ ಕನ್ಯೆಯ ಜೊತೆ ಕೊಡಬೇಕು ಎಂದು ವಿಧಿಸಲಾಗಿದೆ. ಪ್ರಾರಂಭದಲ್ಲಿ ಇದೊಂದು "ಪ್ರೀತಿಯ ಕೊಡುಗೆ" ಎಂಬಂತೆ ಇದ್ದರೂ ಕ್ರಮೇಣ ಒಂದು ಕಡ್ಡಾಯ ಕ್ರಿಯೆಯಾಗಿ ಈಗ "ವರದಕ್ಷಿಣೆ ಪದ್ಧತಿ"ಯಾಗಿ ಮಾರ್ಪಾಟುಗೊಂಡಿದೆ. ಮತ್ತು ಹೆಣ್ಣಿನ ಬದುಕು ನರಕವಾಗುವ, ಸೀಮೆ ಎಣ್ಣೆಯ ಬೆಂಕಿಯ ಜ್ವಾಲೆಯಲ್ಲಿ ಸುಟ್ಟು ಕರಕಲಾಗುವ, ತಂಗಾಳಿ ನೀಡಬೇಕಾದ ಫ್ಯಾನಿಗೆ ಹೆಣವಾಗಿ ನೇತಾಡುವ ದು:ಸ್ಥಿತಿಯ ಮುಂದುವರಿಕೆಗೆ ಈ 'ವೇದ'ದ ವ್ಯಾಖ್ಯೆಯ ಬೆಂಬಲವಿದೆ. ಆ ಕಾರಣದಿಂದಲೇ ಅತ್ಯಂತ ಹರಿತವಾದ ಹಲ್ಲುಳ್ಳ ವರದಕ್ಷಿಣೆ ನಿಷೇಧ ಕಾನೂನು ಜಾರಿಗೆ ಬಂದು ಅರ್ಧ ಶತಮಾನವಾಗುತ್ತಿದ್ದರೂ, ಪಿಡುಗೆಂದು ಕರೆದರೂ ನಿರ್ಮೂಲಗೊಳಿಸಲಾರದ ಪದ್ಧತಿಯಾಗಿಯೇ ನಡೆದುಕೊಂಡು ಹೋಗುತ್ತಿದೆ. ಅಥವಾ, ಮಹಿಳೆಯ ಆಸ್ತಿ ಹಕ್ಕಿನ ಸಂದರ್ಭದಲ್ಲಿ "ಅಯ್ಯೋ ಆಸ್ತೀಲಿ ಪಾಲು ಕೇಳಿ ಅಣ್ಣ ತಮ್ಮರನ್ನು ಕಳೆದುಕೊಳ್ಳುವುದು" ಆಸ್ತಿ ಏನು ಹೊತ್ಕೊಂಡು ಹೋಗ್ತೀವಾ? ಪ್ರೀತಿ, ವಿಶ್ವಾಸ, ಸಂಬಂಧ, ಕುರುಳುಬಳ್ಳಿನಾ ಆಸ್ತಿಗಾಗಿ ಬಿಟ್ಟುಬಿಡೋದಾ? ಎಂಬ ಸೆಂಟಿಮೆಂಟಲ್ ಪ್ರಶ್ನೆಗಳು ಕಾಡತೊಡಗುತ್ತವೆ. ಅಲ್ಲದೆ ಇಂದಿಗೂ ಗಂಡನ ಮನೆಯ ಆಸ್ತಿಯಲ್ಲಿ ಕಾನೂನುಬದ್ಧ ಹಕ್ಕು ಎಂಬುದಿಲ್ಲ. ಅಥವಾ ವಿಚ್ಛೇದನ, ಬೇರೆಯಾಗಿರುವುದು, ಇತ್ಯಾದಿ ಸಂದರ್ಭಗಳಲ್ಲಿ ಸಿ.ಆರ್.ಪಿ.ಸಿ.125 ಪ್ರಕಾರ ಜೀವನಾಂಶ ಕೊಡಬೇಕಾದಾಗಲೂ ಬದುಕಿಗೆ ಅಗತ್ಯವಿರುವಷ್ಟು ಜೀವನಾಂಶ ಕೊಡುವಂತೆ ಆದೇಶ ನೀಡದ ಸ್ಥಿತಿಯೂ ಇಂದಿಗೂ ಇದೆ.

ಸಂಘರ್ಷ ಚಳುವಳಿಯಾಗಿ ಮಾರ್ಪಟ್ಟಿತು. ಅದರ ಪರಿಣಾಮವೇ ಹಲವಾರು ಕಾನೂನುಗಳು ಜಾರಿಗೆ ಬರಲು ಸಾಧ್ಯವಾಯಿತು. ಅಂತಹ ಹಲವಾರು ಮಹಿಳಾ ಪರ ಕಾನೂನುಗಳಲ್ಲಿ ಸಾಕಷ್ಟು ಮೊದಲನೆಯದು ಹಿಂದೂ ಪುನರ್ ವಿವಾಹ ಕಾನೂನು.

ಹಿಂದೂ ಪುನರ್ ವಿವಾಹ ಕಾನೂನು

1856 ರಷ್ಟು ಹಿಂದೆಯೇ ಈ ಕಾನೂನು ಈ ದೇಶದಲ್ಲಿ ಅಸ್ತಿತ್ವಕ್ಕೆ ಬಂತು. ಅಂತೆಯೇ ತೀರಾ ಇತ್ತೀಚೆಗಷ್ಟೇ ತಿದ್ದುಪಡಿಗಳೊಂದಿಗೆ ಬಂದ ಹಿಂದೂ ಮಹಿಳೆಯರಿಗೆ ಆಸ್ತಿಯಲ್ಲಿನ ಸಮಾನ ಹಕ್ಕು ಕಾಯಿದೆ 1937 ರಲ್ಲಿ, ಅನೈತಿಕ ಸಾಗಾಟ ನಿಷೇಧ ಕಾಯ್ದೆ 1956 ರಲ್ಲಿ, ವರದಕ್ಷಿಣೆ ನಿಷೇಧ ಕಾನೂನು 1961 ರಲ್ಲಿ, ಹೆರಿಗೆ ಸೌಲಭ್ಯ ಕಾನೂನು, 1961 ರಲ್ಲಿ, ಮುಸ್ಲಿಂ ಮಹಿಳೆಯರ ವಿವಾಹ, ಅನೂರ್ಜಿತ ಹಕ್ಕಿನ ಕಾನೂನು, 1939 ರಲ್ಲಿ ಕೌಟುಂಬಿಕ ನ್ಯಾಯಾಲಯ ಕಾನೂನು, 1984 ರಲ್ಲಿ ಸ್ತ್ರೀ ಭ್ರೂಣ ಹತ್ಯೆ ನಿಷೇಧ ಕಾನೂನು, 1994 ಗರ್ಭಪಾತದ ಹಕ್ಕು , 1971 ಕೌಟುಂಬಿಕ ದೌರ್ಜನ್ಯ ತಡೆ ಕಾನೂನು 2005 ಹೀಗೆ ಹಲವು ಹತ್ತು ಕಾನೂನುಗಳು ಜಾರಿಗೆ ಬಂದವು.

ಕಾನೂನುಗಳು ಜಾರಿಗೆ ಬಂದಿತೆಂಬುದೇನೋ ನಿಜ. ಆದರೆ ಬಂದ ಕಾನೂನುಗಳೆಲ್ಲ ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿವೆ ಎಂಬ ಭ್ರಮೆ ನಮಗೆ ಬೇಕಿಲ್ಲ. ಹಾಗಂತ ಅವುಗಳು ನಿರರ್ಥಕವೆಂಬ ಭಾವನೆಯೂ ತರವಲ್ಲ. ಇರುವ ಕಾನೂನುಗಳಲ್ಲಿ ಇರುವ ರೀತಿಯಲ್ಲಿಯೇ ಸರಿ ಇವೆ ಎಂದೂ ಅರ್ಥವಲ್ಲ. ಸರಿ ಇಲ್ಲದ್ದನ್ನು ಸರಿಪಡಿಸುವ ಜವಾಬ್ದಾರಿ ಕೂಡ ಸಮಾಜದ್ದೇ ಆಗಿರುತ್ತದೆ. ಅಂತಹ ಪ್ರಯತ್ನಗಳು ತಿದ್ದುಪಡಿಗಳ ಮೂಲಕ ನಡೆಯುತ್ತಿದೆ. ಆದರೆ ಕಾನೂನಿನ ಬಗ್ಗೆ ಅರಿವು ಮೂಡಿಬೇಕಾದ ವ್ಯಕ್ತಿಗಳೇ ಕಾನೂನು ಜಾರಿಯಾಗದಂತೆ ನೋಡುವ ಕೆಲಸದಲ್ಲಿಯೂ ನಿರತರಾಗುತ್ತಾರೆ.

ವರದಕ್ಷಿಣೆ : ವೇದ ಮೂಲ

ಉದಾ: ವರದಕ್ಷಿಣೆ ನಿಷೇಧ ಕಾನೂನು. 1961 ರಲ್ಲಿ ಕಾನೂನು ಬಂದಿದೆ. ಇದಕ್ಕೂ ಪೂರ್ವದಲ್ಲಿಯೇ 1939 ರಲ್ಲಿಯೇ ಸಿಂಧ್ ಲೇ ಲೇ.... ದೇಲೇ ಕಾನೂನು ಹೆಸರಿನಲ್ಲಿ ಒಂದು ಕಾನೂನು ಜಾರಿಗೆ ಬಂದಿತ್ತು. ಆದರೆ ವೇದಗಳ ಕಾಲದಲ್ಲಿ ಧರ್ಮಶಾಸ್ತ್ರಗಳ ಮೂಲಕ ಕನ್ಯಾದಾನದ ಪುಣ್ಯ

ಕೌಟುಂಬಿಕ ದೌರ್ಜನ್ಯ : ಎನ್.ಡಿ.ಎ ಸೂಚಿತ ಶಾಸನದ ಕ್ರೌರ್ಯ

ಇನ್ನೂ ಇತ್ತೀಚೆಗೆ ಬಂದ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ 2005 ಪ್ರಾರಂಭದಲ್ಲಿ ಬಂದಾಗ (ಎನ್.ಡಿ.ಎ.ಯ ವಾಜಪೇಯಿ ಸರ್ಕಾರದಲ್ಲಿ) ಹಿಂಸೆ ಎಷ್ಟು ದಿನದಲ್ಲಿ ಎಷ್ಟು ಬಾರಿ ನಡೆಯುತ್ತದೆ ಎಂಬ ಆಧಾರವನ್ನಿಟ್ಟುಕೊಂಡು ನಿರ್ಧರಿಸುವಂತಹ ಪ್ರಸ್ತಾಪವನ್ನು ಇಟ್ಟುಕೊಂಡು ಮಂಡಿಸಲ್ಪಟ್ಟಿತ್ತು. ಪ್ರಜ್ಞಾಪೂರ್ವಕ, ನಿರಂತರ ಪ್ರಯತ್ನದ ಮೂಲಕ ತಪ್ಪು ಸರಿಪಡಿಸಬಹುದೆಂಬುದಕ್ಕೆ ಉದಾಹರಣೆಯಾಗಿ ಅದು ಕಾನೂನಾಗುವಾಗ ಅಂತಹ ಪ್ರಸ್ತಾಪವನ್ನು ಕೈಬಿಡುವಂತಹ ಸಾರ್ವಜನಿಕ ಒತ್ತಡ ತರಲಾಯಿತು. ಹಾಗೆಂದಾಕ್ಷಣ ಇಂದು ಅದು ಸಂಪೂರ್ಣ ದೋಷರಹಿತವೆಂದೇನೂ ಅಲ್ಲ. ಆದರೆ ಕಾನೂನು ಕೂಡ ಜನರ ಒತ್ತಾಯದ ಮೂಲಕ ಬದಲಾಗಲು ಸಾಧ್ಯ ಎಂಬುದಕ್ಕೆ ಒಂದು ಉದಾಹರಣೆ.

ಒಟ್ಟಿನಲ್ಲಿ ಉಳಿದೆಲ್ಲ ಅಸಮಾನತೆಗಳ ಜೊತೆ ಲಿಂಗಾಧಾರಿತ ಅಸಮಾನತೆ ಕೂಡ ಆಳವಾಗಿ ಬೇರೂರಿರುವ ಈ ವ್ಯವಸ್ಥೆಯಲ್ಲಿ ಪುರುಷ, ಮಹಿಳೆಯರ ಮಧ್ಯೆ ಸಮಾನತೆಯ ಹಾದಿ ಸುಗಮವಾಗಲು ಕಾನೂನುಗಳೂ ಸಹಕಾರಿಯಾಗಬಲ್ಲವು. ದಾರಿಯಲ್ಲಿ ತೊಡಕುಗಳು ಬಂದಾಗ, (ಬಂದೇ ಬರುತ್ತವೆ) ಎಷ್ಟೇ ಹೇಳಿದರೂ ಪುರುಷ ಪ್ರಧಾನ ಮೌಲ್ಯಗಳೇ ವಿಜೃಂಭಿಸುತ್ತಿರುವ ಸಮಾಜವಲ್ಲವೇ? ಅದನ್ನು ತೊಡೆದುಹಾಕುವವರೆಗೂ ಕಾನೂನು, ಚಳುವಳಿ, ಸಂಘಟನೆ, ಸಂಘರ್ಷಗಳ ಮೂಲಕವೇ ಬದಲಾವಣೆ ತರುವತ್ತ ನಮ್ಮ ದೂರದ ಪಯಣ ಸಾಗಬೇಕು.

ನಮ್ಮ ಬದುಕಿನ ರಂಗವಲ್ಲಿಗೆ ಬಣ್ಣಗಳ ಯಾರ್ಯಾಕೆ ಹಚ್ಚಬೇಕು?

- ಕೆ.ಎಸ್.ಲಕ್ಷ್ಮಿ

ಸಣ್ಣ ಪ್ರಾಯದಲ್ಲಿರುವಾಗ ನನಗೆ "ನಾನು ಗಂಡುಮಗನಾಗಿ ಹುಟ್ಟಬೇಕಿತ್ತು" ಎಂದು ಅನಿಸುತ್ತಿತ್ತು. ಈ ಮನಸ್ಥಿತಿ ಪದವಿ ಓದಲು ಬೆಂಗಳೂರಿನ ಹಾಸ್ಟೆಲ್ ಸೇರುವವರೆಗಿತ್ತು. ಅಪ್ಪ ವಾರಕ್ಕೊಮ್ಮೆ ಹೋಟೆಲ್‌ನಿಂದ ಮನೆಯ ಎಲ್ಲ ಸದಸ್ಯರಿಗೂ ಇಷ್ಟವಾದ ತಿಂಡಿಗಳನ್ನು ತರಿಸಿಕೊಡುತ್ತಿದ್ದರು. ಆ ದಿನಕ್ಕಾಗಿ ಕಾಯುತ್ತಿದ್ದೆವು. ದಿನಾ ಕೇಳುವ ಹಾಗಿರಲಿಲ್ಲ. ಆಸೆಯಾದಾಗಲೆಲ್ಲಾ ಅನ್ನಿಸ್ತಾ ಇತ್ತು. ಅಪ್ಪ ಹೊರಗೆ ದುಡೀತಾರೆ. ಓಡಾಡ್ತಾರೆ ಇಷ್ಟವಾದಾಗ ಅವರು ಏನು ಬೇಕಾದರೂ ತಿನ್ನಬಹುದು. ಹೆಣ್ಣುಮಕ್ಕಳಾದರೆ ಮನೆಯೊಳಗೆ ಮಾತ್ರ ತಿನ್ನಬೇಕು. ಅಪ್ಪ ಬ್ಯಾಂಕ್ ನೌಕರರಾಗಿದ್ದು, ಸಾಕಷ್ಟು ವಿಚಾರಗಳಲ್ಲಿ ಪ್ರಗತಿಪರವಾಗಿದ್ದ ಆ ಕುಟುಂಬದೊಳಗೇ ನನ್ನಂಥವಳಿಗೆ ಈ ರೀತಿ ಅನಿಸಿದ್ದರೆ, ಪ್ರತಿಗಾಮಿ ವಿಚಾರಗಳನ್ನು ಒಪ್ಪಿತ ಮೌಲ್ಯಗಳನ್ನಾಗಿಸಿಕೊಂಡ ಕುಟುಂಬಗಳ ಹೆಣ್ಣುಮಕ್ಕಳಿಗೆ ಏನನ್ನಿಸಬೇಡ?

ಮೂಗು ಚುಚ್ಚಿಸಿಕೊಳ್ಳಬೇಕಾ? ಬೇಡವಾ?

ಮೂಗು ಚುಚ್ಚಿಸಿಕೊಳ್ಳಬೇಕಾ? ಬೇಡವಾ? ಮಧುಮಗ ಮತ್ತು ಅವರ ಮನೆಯವರು ತೀರ್ಮಾನಿಸಬೇಕು. ಕೆಲಸಕ್ಕೆ ಹೋಗಬೇಕಾ ಬೇಡವಾ, ಶಿಕ್ಷಣ ಮುಂದುವರೆಸಬೇಕಾ? ಬೇಡವಾ? ಮದುವೆಯ ನಂತರ ಎಂತಹ ಉಡುಪು ಧರಿಸಬೇಕು? ಇವೆಲ್ಲವೂ ಗಂಡ ಮತ್ತು ಗಂಡನ ಮನೆಯವರ ಮರ್ಜಿ.


ಅದೇ ರೀತಿ ಏನು ಓದಬೇಕು, ಯಾವಾಗ, ಯಾರನ್ನು ಮದುವೆಯಾಗಬೇಕು, ಯಾವ ಕಾಲೇಜಿಗೆ ಸೇರಬೇಕು. ಯಾರೊಂದಿಗೆ ಕಾಲೇಜಿಗೆ ಹೋಗಬೇಕು ಇವು ತಂದೆತಾಯಿಯರ ಮರ್ಜಿ.

ಈ ಕುರಿತಂತೆ ಎಲ್ಲ ವಿಭಾಗದ ನಡುವಿನ ಯುವತಿಯರ ನಡುವೆ ನಡೆಸಿದ ಸಮೀಕ್ಷೆಗಳ ಮೂಲಕ ತಿಳಿದುಬಂದದ್ದು. 150 ಯುವತಿಯರಲ್ಲಿ 117 ಯುವತಿಯರು ಅವರ ಬಾಳಸಂಗಾತಿಯ ಆಯ್ಕೆಯನ್ನು ಅವರೇ ಆಯ್ಕೆ ಮಾಡಿಕೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿರುವುದು ಅತ್ಯಂತ ಸ್ವಾಗತಾರ್ಹ ಬೆಳವಣಿಗೆ ಎಂದು ತೃಪ್ತಿಪಡುವಷ್ಟರಲ್ಲೇ ಇನ್ನೊಂದು ಕಾಲಂನ ಅಭಿಪ್ರಾಯ ಓದಿ ಆಘಾತವೇ ಆಯಿತು. ಅವರಲ್ಲಿ 103 ಯುವತಿಯರು ತಂದೆತಾಯಿ ಒಪ್ಪಿದರೆ ಮಾತ್ರ ಅಂತರಜಾತೀಯ, ಅಂತರಧರ್ಮೀಯ ವಿವಾಹವಾಗುವುದಾಗಿ ತಿಳಿಸಿದ್ದಾರೆ. ಇಲ್ಲಿರುವ ಸಾಮಾಜಿಕ ಅಂತರದಿಂದ ಹೆಣ್ಣುಮಕ್ಕಳ ಆಯ್ಕೆಯ ಹಕ್ಕುಗಳು ನಿರಾಕರಣೆಗೆ ಒಳಗಾದರೆ, ಆಯ್ಕೆಯ ಹಕ್ಕನ್ನು ಸಮರ್ಥಿಸಿಕೊಂಡು ಮಾಡಿ, ಬಾಳಸಂಗಾತಿಯನ್ನು ತೀರ್ಮಾನ ಮಾಡಿಕೊಂಡಾಗ ಜಾತಿವಾದಿಗಳು, ಮೂಲಭೂತವಾದಿಗಳಿಂದ ದಾಳಿಗಳನ್ನು ಎದುರಿಸಬೇಕಾಗುತ್ತದೆ. ಇದಕ್ಕೆ ಯಾವ ಧರ್ಮವೂ ಹೊರತಲ್ಲ. ಇತ್ತೀಚಿಗೆ ಕೇಳಿಬರುತ್ತಿರುವ 'ಲವ್ ಜಿಹಾದ್' ಎಂಬ ಪ್ರಕರಣಗಳ ಕುರಿತ ಆರೋಪಗಳು ವಾಸ್ತವ ಅಲ್ಲವೆಂದು ಕೇರಳ, ಕರ್ನಾಟಕ, ಪೊಲೀಸ್ ಇಲಾಖೆಗಳು ವರದಿ ನೀಡಿದ್ದರೂ ಹಿಂದೂಸೇನೆ, ಶ್ರೀರಾಮಸೇನೆ, ಹಿಂದೂ ಜಾಗರಣಾ ವೇದಿಕೆಯಂತಹ ಪ್ರತಿಗಾಮಿ ಸಂಘಟನೆಗಳು ಲವ್ ಜಿಹಾದ್

ಮೂಲಭೂತವಾದಿ ಚಿಂತನೆಗಳು ಮತ್ತು ಪಾಳೇಗಾರಿ ಚಿಂತನೆಗಳ ಸಖ್ಯತೆಯನ್ನು ಅತ್ಯಂತ ವ್ಯವಸ್ಥಿತವಾಗಿ ಗಟ್ಟಿಗೊಳಿಸುವ ಪ್ರಯತ್ನಗಳು ಅತ್ಯಂತ ಆತಂಕಕಾರಿಯಾಗಿವೆ. ಇವರ ನಡುವೆ ತನ್ನ ಆಸಕ್ತಿ, ಅಭಿರುಚಿ, ಆಸೆ ಆಕಾಂಕ್ಷೆ, ಕನಸುಗಳನ್ನು ಗಂಡ ಮಕ್ಕಳ ಮೂಲಕ ನೋಡುವುದೇ ಸಾರ್ಥಕ ಜೀವನ, ತ್ಯಾಗ ಜೀವನವೆಂಬುದನ್ನು ಅತ್ಯಂತ ವ್ಯವಸ್ಥಿತವಾಗಿ ಪ್ರತಿಪಾದಿಸುವ ಮೂಲಕ ಅವಳ ಸ್ವಂತಿಕೆಯನ್ನು, ಅಸ್ತಿತ್ವವನ್ನೇ ಇಲ್ಲವಾಗಿಸಲಾಗುತ್ತಿದೆ.

ಅನ್ನು ಅತಿರಂಜಿತವಾಗಿ, ವೈಭವೀಕರಿಸುವ ಮೂಲಕ ಯುವ ಜನತೆಯ ಹಕ್ಕುಗಳ ಮೇಲೆ ದಾಳಿ ನಡೆಸಿವೆ.

ಮೂಲಭೂತವಾದಿ ಚಿಂತನೆಗಳು ಮತ್ತು ಪಾಳೇಗಾರಿ ಚಿಂತನೆಗಳ ಸಖ್ಯತೆಯನ್ನು ಅತ್ಯಂತ ವ್ಯವಸ್ಥಿತವಾಗಿ ಗಟ್ಟಿಗೊಳಿಸುವ ಪ್ರಯತ್ನಗಳು



ಅತ್ಯಂತ ಆತಂಕಕಾರಿಯಾಗಿವೆ. ಇವರ ನಡುವೆ ತನ್ನ ಆಸಕ್ತಿ, ಅಭಿರುಚಿ, ಆಸೆ ಆಕಾಂಕ್ಷೆ, ಕನಸುಗಳನ್ನು ಗಂಡ ಮಕ್ಕಳ ಮೂಲಕ ನೋಡುವುದೇ ಸಾರ್ಥಕ ಜೀವನ, ತ್ಯಾಗ ಜೀವನವೆಂಬುದನ್ನು ಅತ್ಯಂತ ವ್ಯವಸ್ಥಿತವಾಗಿ ಪ್ರತಿಪಾದಿಸುವ ಮೂಲಕ ಅವಳ ಸ್ವಂತಿಕೆಯನ್ನು, ಅಸ್ತಿತ್ವವನ್ನೇ ಇಲ್ಲವಾಗಿಸಲಾಗುತ್ತಿದೆ.

ಮೂಲಂಗಿ ತಿನ್ನುತ್ತಿರಲಿಲ್ಲ..... ಆದರೀಗ

'ಮದುವೆಗೂ ಮುನ್ನ ನಾನು ಮೂಲಂಗಿ ತಿನ್ನುತ್ತಲೇ ಇರಲಿಲ್ಲ. ಈಗ ನೋಡಿದ್ರೆ ನಮ್ಮ ಮನೆಯವರಿಗೆ ಅದು ತುಂಬಾ ಇಷ್ಟ. ಅವರೊಂದಿಗೆ ನಾನು ಹೊಂದಿಕೊಂಡುಬಿಟ್ಟಿದ್ದೇನೆ' ಎಂದು ಹೇಳುವ ಉದಾಹರಣೆಗಳು ಬಹಳಷ್ಟಿವೆ. ಮದುವೆಗೂ ಮುನ್ನ ಚೂಡಿದಾರ್ ಹಾಕದೆ ಇದ್ದ ಹೆಣ್ಣುಮಕ್ಕಳು

ಗಂಡನ ಅಭಿರುಚಿಗೆ ತಕ್ಕಂತೆ ಚೂಡಿದಾರ ಹಾಕಿಕೊಳ್ಳುವುದಿದೆ. ಇದು ಗಂಡನನ್ನು ಗೌರಿವಿಸಿದಂತೆ ಎನ್ನುವುದು ಕೆಲ ಹೆಣ್ಣುಮಕ್ಕಳ ತಿಳುವಳಿಕೆ. ಮದುವೆಯಾದ ಮಹಿಳೆ ಸೀರೆಯನ್ನು ಮಾತ್ರ ಉಡಬೇಕಾಗಿಲ್ಲ. ಚೂಡಿದಾರನ್ನು ತೊಟ್ಟರೆ ತಪ್ಪಲ್ಲ ಎಂಬ ತಿಳುವಳಿಕೆಯ ಭಾಗವಾಗಿ ಇದು ಬಂದರೆ ಸ್ವಾಗತಾರ್ಹವಾದ ವಿಷಯವೇ. ಕೆಲವೊಮ್ಮೆ ಆ ತಿಳುವಳಿಕೆ ಇಲ್ಲದೇ ಕೇವಲ ಗಂಡನಿಗಾಗಿ ಬದಲಾವಣೆ ಆಗುವುದೂ ಇದೆ. ಆದೇ ರೀತಿ ಗಂಡನಿಗಿಷ್ಟವಿಲ್ಲವೆಂದು ಹೇರ್ ಸ್ಟೈಲ್ ಮಾಡಿಕೊಳ್ಳದಿರುವುದನ್ನು ಕಾಣುತ್ತೇವೆ. ಇನ್ನೂ ಒಂದು ಹೆಜ್ಜೆ ಮುಂದೆ ಬಂದಿರುವ ನಾಗರೀಕ (ಅನಾಗರೀಕ) ಸಮಾಜದಲ್ಲಿ ಗಂಡನ ಆಕಾಂಕ್ಷೆಗಳಿಗೆ ತಕ್ಕಂತೆ ದೇಹದ ಅಂಗಾಂಗಗಳ ಬೆಳವಣಿಗೆಗೆ ಹಾರ್ಮೋನ್ ಇಂಜೆಕ್ಷನ್ಸ್ ತೆಗೆದುಕೊಳ್ಳುವ ಮೂಲಕ ಗಂಡನ ನಿರೀಕ್ಷೆಗೆ ಸ್ಪಂದಿಸಲು ಹೋಗಿ ಹಲವು ಸಮಸ್ಯೆಗಳಿಗೆ ತುತ್ತಾಗಿರುವುದನ್ನು ಕಾಣುತ್ತೇವೆ.

ಹೀಗೆ ಸಮೀಕ್ಷೆಯನ್ನು ನಡೆಸುತ್ತಿದ್ದಾಗ 150 ಜನರಲ್ಲಿ 123 ಯುವತಿಯರು ಸರಳ ವಿವಾಹದ ಇಚ್ಛೆಯನ್ನು ವ್ಯಕ್ತಪಡಿಸಿದರೆ, ಹಲವು ಹೆಣ್ಣುಮಕ್ಕಳು, ದುಬಾರಿ ಮದುವೆ, ವರದಕ್ಷಿಣೆ ಬಯಸಿರುವುದು ಸಹ ಆತಂಕವನ್ನುಂಟುಮಾಡಿತು. ಅರೇ, ಅದ್ದೂರಿ ಮದುವೆಯಾಗುವುದು, ಮದ್ಯಪಾನ ಮಾಡುವುದು ಆಯ್ಕೆಯ ಹಕ್ಕುಗಳಾಗಿವೆಯಾದರೂ, ಇಂತಹ ಆಯ್ಕೆಗಳನ್ನು ಅವರು ಬಯಸಲು, ಅಂತಹ ಮನಸ್ಥಿತಿ ರೂಪುಗೊಳ್ಳಲು ಕಾರಣವಾಗುತ್ತಿರುವ ಪ್ರತಿಗಾಮಿ, ಪಾಳೇಗಾರಿ, ವಿಚಾರಗಳ ವೈಭವೀಕರಣ ಅವುಗಳಿಗೆ ಮಾಧ್ಯಮಗಳು ನೀಡುತ್ತಿರುವ ಒತ್ತು. ಪುರಸ್ಕರಿಸುತ್ತಿರುವ ಶಕ್ತಿಗಳನ್ನು ಪ್ರಜ್ಞಾವಂತ ಪ್ರಜಾಪ್ರಭುತ್ವೀಯ ಶಕ್ತಿಗಳು ಬಲಹೀನಗೊಳಿಸಿ ಆಯ್ಕೆಗಳು ಹಕ್ಕುಗಳು ಸಮಾಜಮುಖಿ, ಜನಮುಖಿಯಾಗಲು ಇಡೀ ಸಮಾಜದ ಮನಸ್ಥಿತಿಯ ಬದಲಾವಣೆಗೆ ಶ್ರಮಿಸಬೇಕು.... ಜನ ಚಳುವಳಿಗಳನ್ನು ಬಲಪಡಿಸಬೇಕು.

ಮೆಹರ್

ಒಂದೇ ಉಸಿರಿನಲ್ಲಿ
ಹೇಳಿ ಮೂರು ತಲ್ಲಾಖ್
ಹೊರಟೆ ನೀನು ಎಲ್ಲಿಗೆ?
ಬದುಕಿನ ಏರುಪೇರುಗಳಲಿ
ಬಹಳ ಸಹಿಸಿಹೆನು ಪೀಡನೆ
ಸಾಕು ಹೋಗು ನಿನ್ನ ದಾರಿಗೆ

ಮೆಹರ್‌ನ ಮೊತ್ತ ಇಟ್ಟು
ಹಸಿರು ನೋಟಿನ ಕಟ್ಟು
ಬಹುಮಾನವೆರಡು ಕೈಗಿಟ್ಟು
ನಿನ್ನ ಪಾಪದ ಫಲವನ್ನು
ಬದುಕೆಲ್ಲಾ ತೊಳೆಯಲೆ ಘಮಟು?



ನಿನ್ನ ಮೆಹರಿನ ಮೊತ್ತ
ಸಾಕಾಗುತ್ತಿಲ್ಲ ವಿಷ ಕೊಳ್ಳಲು
ಸಿಕ್ಕಾಳು ನಿನಗೊಬ್ಬ ಸಂಗಾತಿ
ನನ್ನ ಮಕ್ಕಳಿಗೊಬ್ಬ ತಂದೆ
ಎಲ್ಲಿಂದ ತರಲಿ ಹೇಳು?

ಕೊಡುವುದೇ ಆದಲ್ಲಿ ಕೊಟ್ಟುಹೋಗು
ನನ್ನ ಮಕ್ಕಳ ಭವಿಷ್ಯತ್ತಿಗೆ
ಬದುಕು ಕೊಟ್ಟು ಹೋಗು
ಎಳೆಯ ರಟ್ಟೆಗಳಲಿ ಕಸುವು ತುಂಬಿ
ನಿನ್ನ ನೆರಳಲ್ಲಿ ಕಳೆದು ಹೋದ
ನನ್ನ ಆತ್ಮ ವಿಶ್ವಾಸ ಮರಳಿ ಕೊಟ್ಟು ಹೋಗು.

-ಕೆ.ಷರೀಫಾ

ಮಹಿಳಾ ದುಡಿಮೆ : ನಮ್ಮ ಮನೆಯ ಸುತ್ತ ಒಂದು ಸುತ್ತು

ಆರ್. ರಾಮಕೃಷ್ಣ

'ಉದ್ಯೋಗಂ ಪುರುಷ ಲಕ್ಷಣಂ' ಎಂಬ ಮಾತು ನಮ್ಮ ಸಮಾಜದ ವಾಸ್ತವಕ್ಕೆ ಎಷ್ಟು ದೂರ ಎಂದು ಯಾರಾದರೂ ಕಂಡುಕೊಳ್ಳಬಹುದು. ನಮ್ಮ ಸುತ್ತಲ ಸಮಾಜದಲ್ಲಿ ನಾವು ಗುರುತಿಸದೇ ಹೋಗುವ, ಯೋಚಿಸದೇ ಹೋಗುವ ಮಹಿಳಾ ದುಡಿಮೆಯನ್ನು ಗುರುತಿಸುವ ಮನಸ್ಸು ಬೇಕು ಅಷ್ಟೆ. ಸ್ವಲ್ಪ 'ಕಣ್ತೆರೆದು' ನೋಡಬೇಕು ಅಷ್ಟೆ.



ಉದ್ಯೋಗಂ ಪುರುಷ ಲಕ್ಷಣಂ ಅಂತ ಸಾರಿ ಡಂಗೂರ ಬಾರಿಸಿ ಬೀಗುವವರು, ಹೆಂಗಸರು ಅಬಲೆಯರು ಅವರೇನು ಮಾಡಬಲ್ಲರು ಎಂದು ಹೀಯಾಳಿಸುವವರು ಅಥವಾ ಪಾಪ ಹೆಣ್ಣು ಹೆಂಗಸು ಅವಳ ಕೈಲೇನಾದೀತು, ಎಂದು 'ಅನುಕಂಪ' ತೋರುವವರ ಸಂಖ್ಯೆಗೆ ನಮ್ಮಲ್ಲಿ ಕಡಿಮೆ ಇಲ್ಲ. ಇಂಥದ್ದೇ ಏನೋ ಒಂದು ಮಾತು ಎಲ್ಲೋ ಕಿವಿಯ ಮೇಲೆ ಬಿದ್ದು ತಲೆಯಲ್ಲಿ ಕೊರೆಯುತ್ತಿದ್ದ ಹೊತ್ತು.

ಒಂದು ದಿನ ಬೆಳಗಾಗಿ ಎದ್ದವನು ಹಾಸಿಗೆಯ ಹಾಗೆ ಮೇಲೆ ಕೂತೆ. ಯಾಕೋ ಯೋಚನೆ ನಮ್ಮ ಮನೆಯ ಸುತ್ತಮುತ್ತಲ ಮನೆಗಳು, ಆ ಮನೆಗಳ ಆರ್ಥಿಕ ಪರಿಸ್ಥಿತಿ ಮತ್ತು ಆದಾಯ ಮೂಲಗಳ ಕಡೆಗೆ ಹರಿಯಿತು. ಅದರಲ್ಲೂ ಕುಟುಂಬವನ್ನು ನಡೆಸುವುದರಲ್ಲಿ ಮಹಿಳೆಯರ ಪಾತ್ರದ ಕುರಿತು ಮನಸ್ಸು ಯೋಚಿಸಿತು.

ಸಂಸಾರ, ಹೊಟೇಲೂ ಎರಡನ್ನೂ ನಿಬಾಯಿಸುತ್ತ....

ಅದು ಕೆಂಗೇರಿ ಉಪನಗರದ ಹೊರ ವಲಯದಲ್ಲಿನ ಒಂದು ಬಡಾವಣೆ. ಗಡಿಯಾರದ ಮುಳ್ಳಿನಂತೆ ನನ್ನ ಮನಸ್ಸು ಒಂದು ಕಡೆಯಿಂದ ಮತ್ತೊಂದು ಕಡೆಗೆ ಒಂದೊಂದೇ ಮನೆ. ಬಾಗಿಲಿನೆಡೆಗೆ ಹರಿಯಿತು.

ಅದು ದೊಡ್ಡ ಕುಟುಂಬ. ಉಪನಗರದಿಂದ ತಾವರೆಕೆರೆಯ ಕಡೆಗೆ ಹೋಗುವ ಮುಖ್ಯರಸ್ತೆಗೆ ತಾಗಿಕೊಂಡಂತೆ ಮನೆಯ ಮುಂದೆ ಬಟ್ಟೆ ಒಗೆಯುತ್ತಾ, ಪಾತ್ರೆ ತೊಳೆಯುತ್ತಾ, ಮನೆಗೆ ನೀರು ತುಂಬುತ್ತಾ, ಮಕ್ಕಳನ್ನು ಶಾಲೆಗೆ ಕಳಿಸಲು ಅವರನ್ನು ಸಿದ್ಧ ಮಾಡುತ್ತಾ ಸದಾ ಏನಾದರೊಂದು ಕೆಲಸದಲ್ಲೇ ನಿರತರಾಗಿರುತ್ತಿದ್ದ ಮಧ್ಯ ವಯಸ್ಸಿನ ಆ ಮನೆಯಾಕೆಯ ಹೆಗಲಿಗೆ ಇತ್ತೀಚಿನ ವರ್ಷಗಳಲ್ಲಿ ಹೊಸತೊಂದು ಜವಾಬ್ದಾರಿ ಏರಿದೆ.

ಗಂಡ ಖಾಸಗಿ ಸಾರಿಗೆ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದವರು. ಯಾಕೋ ಕೆಲಸ ಸರಿ ಬರಲಿಲ್ಲ. ಮನೆಯವರೆಲ್ಲಾ ಸೇರಿದರು. ಮನೆಯ ಮುಂದೆ ಒಂದು ಶೆಡ್ ಎದ್ದಿತು. ಅದೀಗ ಒಂದು ಹೋಟೆಲ್.

ಎಂದಿನ ಮನೆಯ ಕೆಲಸಗಳ ಜೊತೆ ಹೋಟೆಲ್‌ನ ಅಡುಗೆ ಕೆಲಸ, ಪಾತ್ರೆ ತೊಳೆಯುವುದು, ಗಂಡನ ನೆರವಿನೊಂದಿಗೆ ಒಟ್ಟಾರೆ ಹೋಟೆಲ್ ನಿಭಾಯಿಸುವ ಹೊಣೆ.

ಆ ಮಹಿಳೆ ಆ ಮನೆಯ ಆದಾಯದ ಒಂದು ಆಧಾರಸ್ತಂಭ. ಮನೆಯ ಕೆಲಸ ಹೋಟೆಲ್ ಕೆಲಸ ಎರಡೂ ಕೂಡಿದರೆ ದುಡಿಮೆಯ ಲೆಕ್ಕದಲ್ಲಿ ಗಂಡನಿಗಿಂತ ಬಹಳ ಮುಂದೆ.

ಕೊಂಚ ಪಕ್ಕಕ್ಕೆ ಮುಖ್ಯರಸ್ತೆಯನ್ನು ಎದುರುಗೊಂಡು ನಿಂತ ಪೆಟ್ಟಿಗೆ ಅಂಗಡಿಯಲ್ಲಿ ಸದಾ ನಿಮಗೆ ಕಾಣುವುದು ಒಬ್ಬ ಮಹಿಳೆಯೇ. ಸೋಪು, ಶ್ಯಾಂಪು, ಬೀಡಿ, ಸಿಗರೇಟು... ಕಾಯಿನ್ ಫೋನೂ ಉಂಟು. ನಿಮಗೆ ಕುಡಿಯಬೇಕೆನಿಸಿದರೆ ಕಾಫಿ, ಟೀ ಕೂಡ ಅಲ್ಲಿ ಉಂಟು.

ಆ ಮನೆಗೆ ಅಂಟಿಕೊಂಡ ಒಂದು ಮನೆ. ಅಲ್ಲಿ ಸುಮಾರು 45ರ ಪ್ರಾಯದ ಆ ಮಹಿಳೆ ಉಪ ನಗರದ ಕಾಲೇಜೊಂದರಲ್ಲಿ ಆಯಾ. ಗಂಡ ತೀರಿಕೊಂಡಿದ್ದಾರೆ. ಮಗಳು ಗಾರ್ಮೆಂಟೊಂದರಲ್ಲಿ ಉದ್ಯೋಗಿ. ಇಬ್ಬರು ಹುಡುಗರು. ಸಣ್ಣ ಹುಡುಗರು. ಒಬ್ಬ ಕಾರ್ಪೆಂಟರ್ ಬಳಿ, ಮತ್ತೊಬ್ಬ ಮತ್ತೇನೋ ಕೆಲಸ ಮಾಡುತ್ತಾನೆ. ಆದರೆ ತಾಯಿ ಮಗಳ ದುಡಿಮೆ ಕುಟುಂಬದ ಆದಾಯದ ಮುಖ್ಯ ಮೂಲ.

ಆ ಮನೆಯ ಪಕ್ಕ ಒಂದು ಕುಟುಂಬ. ನಡು ವಯಸ್ಸಿನ ಗಂಡ ಹೆಂಡತಿ ಇದ್ದಾರೆ. ಒಬ್ಬರು ವಯಸ್ಸಾದ ಅಜ್ಜಿ. ಹಿಂದೆ ಈ ಜಾಗ ಹೊಲವಾಗಿದ್ದ ಕಾಲದಿಂದಲೂ ದೊಡ್ಡ ಕುಟುಂಬವನ್ನು ನಿಬಾಯಿಸಿದ ಹಿರಿ ಜೀವ. ಇಂದಿಗೂ ದುಡಿಮೆ ತಪ್ಪಿಲ್ಲ.

ಆ ಮನೆಯ ಮುಂದೆ ಹದಿನೈದೋ, ಇಪ್ಪತ್ತೋ ಕುರಿಗಳು ತಟ್ಟಿಗೆಯಿಂದ ಮಾಡಿದ ಬೇಲಿಯೊಳಗೆ ನಿಂತಿವೆ. ಈಗ ಈ ಕುರಿಗಳು ಕುಟುಂಬದ ಮುಖ್ಯ ಆದಾಯದ ಮೂಲ. ಅದನ್ನು ಮೇಯಿಸುವವರು ಯಾರು? ಅಜ್ಜಿ, ಅಜ್ಜಿಯ ಸೊಸೆ, ಮಗ ಅಥವಾ ಯಾರಾದರೂ ಆದೀತು. ಸಮಯ ಸಂದರ್ಭ ನೋಡಿಕೊಂಡು ಅನುಕೂಲಕ್ಕೆ ತಕ್ಕಂತೆ ಯಾರಾದರೂ ಹೋಗುತ್ತಾರೆ. ಈ ಕುರಿ ಕಾಯುವ ಕೆಲಸದಲ್ಲಿ ಎರಡು ಹೆಣ್ಣು ಜೀವಗಳು. ಒಂದು ಗಂಡು. ಸೊಸೆಗೆ ಮನೆಯಲ್ಲಿ ಕಸ ಮುಸುರೆ ತಿಕ್ಕುವ, ಅಟ್ಟಿಕ್ಕುವ ಅಂದರೆ ಅಡುಗೆ ಬೇಯಿಸಿ ಹಾಕುವ 'ಮನೆ ವಾರ್ತೆ'ಯ ಕೆಲಸ, ಮಕ್ಕಳನ್ನು ಶಾಲೆಗೆ ಕಳಿಸುವ ಕೆಲಸ ಇದ್ದೇ ಇದೆ ಎಂಬುದನ್ನು ಬಿಡಿಸಿ ಬೇರೆ ಹೇಳಬೇಕಿಲ್ಲ. ಇಲ್ಲಿ ಯಾರ್ಯಾರ ಕೆಲಸ ಎಷ್ಟಾಯಿತು ಲೆಕ್ಕ ಸರಳ. ಅಲ್ಲವೇ?

ಮಣಬಾರದ ತರಕಾರಿ ಚೀಲ ಹೊತ್ತು...

ಇನ್ನೂ ಸ್ವಲ್ಪ ಮುಂದೆ ಸಿಗುವ ಮನೆಯಲ್ಲಿ ಇರುವುದು, ಮಧ್ಯ ವಯಸ್ಸು ದಾಟಿದ ಗಂಡ ಹೆಂಡತಿಯರ ಕುಟುಂಬ. ಮೂವರೂ ಹೆಣ್ಣು ಮಕ್ಕಳು. ಕೆಂಗೇರಿ ಉಪನಗರದ ಮುಖ್ಯ ಸರ್ಕಲ್‌ನ ರಸ್ತೆ ಬದಿಯಲ್ಲಿ ಇವರದ್ದು ತರಕಾರಿ ಅಂಗಡಿ. ಪ್ರತಿ ದಿನ ಸಂಜೆಯ ಹೊತ್ತು ಅಲ್ಲೇ ಬಿಸಿ ಬಿಸಿ ಬಜ್ಜಿ - ಬೋಂಡಗಳ ಮಾರಾಟ. ಟೀಯನ್ನೂ ಮಾರುತ್ತಾರೆ. ಬಜ್ಜಿ ಬೋಂಡ ಮಾಡುವುದರಲ್ಲಿ ಕುಟುಂಬದ ಏಕೈಕ ಪುರುಷ ವ್ಯಕ್ತಿಯ ಪಾತ್ರ. ಇನ್ನು ಉಳಿದಂತೆ ಬೆಳಗ್ಗಿನಿಂದ ರಾತ್ರಿಯವರೆಗೆ ತರಕಾರಿ, ಸೊಪ್ಪುಗಳ ಮಾರಾಟ. ಬಜ್ಜಿ, ಬೋಂಡ ವ್ಯಾಪಾರ, ಮಾರುಕಟ್ಟೆಗೆ ಹೋಗಿ ತರಕಾರಿ ತರುವುದು ಎಲ್ಲದರಲ್ಲಿ ಮನೆಯ ಹೆಂಗಸು ಮತ್ತು ಹೆಣ್ಣುಮಕ್ಕಳದ್ದೇ ಪಾರುಪತ್ಯ.

ಈಗಾಗಲೇ ಅಜ್ಜಿ ಎಂದು ಕರೆಯುವ ಮೊಮ್ಮಗ ಇರುವ ಆ ಮಹಿಳೆ

ಪ್ರತಿದಿನ ಬೆಳ್ಳಂಬೆಳಗ್ಗೆ ಹೊರಟು, ಸಿಟಿ ಮಾರ್ಕೆಟ್‌ನಿಂದ ಬಿ.ಎಂ.ಟಿ.ಸಿ. ಬಸ್‌ಗಳಲ್ಲಿ ಈರುಳ್ಳಿ, ಆಲೂಗಡ್ಡೆ ಸೇರಿದಂತೆ ಮಣಭಾರ ತೂಕದ ಚೀಲಗಳನ್ನು ಅಂಗಡಿಗೆ ತಂದು ಹಾಕುವ ಸಾಹಸಕ್ಕೂ ಎಂದೂ ಹಿಂಜರಿದಿದ್ದಿಲ್ಲ.

ಅಂಗಡಿಯಲ್ಲಿ ಅಲ್ಲದೆ ನೆರೆಯ ಮನೆಮನೆಗೆ, ಪಕ್ಕದ ಅಪಾರ್ಟ್‌ಮೆಂಟ್‌ನ ಫ್ಲಾಟು ಫ್ಲಾಟುಗಳಿಗೆ ತರಕಾರಿಯನ್ನು ಹೊತ್ತುಕೊಂಡು ಹೋಗಿ ಕೊಟ್ಟು, ಮಾರಿ ಬರಲು ಯಾವ ಹೆಣ್ಣುಮಕ್ಕಳು 'ನಾಚಿಕೊಂಡವರಲ್ಲ.'

ಇಷ್ಟೆಲ್ಲಾ ಕುಟುಂಬದ ಬಾರ ಹೊತ್ತ ಈ ಹೆಣ್ಣುಮಕ್ಕಳಲ್ಲಿ ಇಬ್ಬರು ಕಾಲೇಜು ಕಲಿತು ಒಂದು 'ಗೌರವಯುತ' ಸರ್ಕಾರಿ ಹುದ್ದೆ ಗಳಿಸುವಲ್ಲಿಯೂ ಯಶಸ್ವಿಯೇ. ತಾಯಿ ತಾನು ಹೆಚ್ಚು ಓದಿರದಿದ್ದರೂ ಹೆಣ್ಣುಮಕ್ಕಳಿಗೆ ಬರೀ ತರಕಾರಿ ಮಾರುವುದು ಮಾತ್ರ ಕಲಿಸಲಿಲ್ಲ. ಹೊಟ್ಟೆ ಬಟ್ಟೆ ಕಟ್ಟಿ ಕಣ್ಣಲ್ಲಿ ಕಣ್ಣಿಟ್ಟು ಮಕ್ಕಳಿಗೆ ಶಿಕ್ಷಣ ಕೊಡಿಸಿದಳು. ಜೋಪಾನ, ಜಾಗ್ರತೆ ಮಾಡಿದಳು.

ಅಂಗಡಿ, ಮನೆ ಎಲ್ಲವನ್ನೂ ನಡೆಸುವ ಸಾರಥಿ

ಇನ್ನು ಕೊಂಚ ಪಕ್ಕಕ್ಕೆ 'ಮೇಸ್ತ್ರ' ಮನೆ. ಅದು, ಮೇಸ್ತ್ರ ಮನೆಯಾದರೂ ಗಂಡ, ಹೆಂಡತಿ ಇಬ್ಬರದೂ ಶಿಕ್ಷಕ ಹುದ್ದೆ. ಇಬ್ಬರೂ ದುಡಿಯುತ್ತಾರೆ.

ಅವರ ಪಕ್ಕದ ಮನೆ 'ಕೆ.ಇ.ಬಿ. ಮೇಡಂ' ಮನೆ. ಹೆಸರೇ ಹೇಳುವಂತೆ ಅವರು ಕೆ.ಇ.ಬಿ.ಯಲ್ಲಿ ಅಕೌಂಟೆಂಟ್ ಆಗಿದ್ದರು. ನಿವೃತ್ತರಾಗಿದ್ದಾರೆ. ಆದರೆ ಸುಮ್ಮನೆ ಕುಳಿತಿಲ್ಲ. ಈಗ ಕೆಪಿಟಿಸಿಎಲ್ ಆಗಿರುವ ಅದೇ ಸಂಸ್ಥೆಯಲ್ಲಿ ಬಹುಶಃ ಗುತ್ತಿಗೆ ಆಧಾರದಲ್ಲೋ ಏನೋ ಅದೇ ಅಕೌಂಟೆಂಟ್ ಕೆಲಸ ಮಾಡುತ್ತಾರೆ. ಕೆಲವು ಇತರ ಖಾಸಗಿ ಸಂಸ್ಥೆಗಳಲ್ಲಿ ಸಹ ಅಕೌಂಟೆಂಟ್ ಕೆಲಸ ಮಾಡುತ್ತಾರೆ. ಆ ಕುಟುಂಬಕ್ಕೆ ಅವರೇ ಮುಖ್ಯಸ್ಥರು. ದುಡಿಮೆ ಮಾಡುವ ಗಂಡು ಮಕ್ಕಳು ಮನೆಯಲ್ಲಿದ್ದಾರೆ. ಆದರೂ ಮೇಡಂ ದುಡಿಮೆಯೇ ಕುಟುಂಬದ ಮುಖ್ಯ ಆಧಾರ.



ಇನ್ನು ಕೊಂಚ ಬಲಕ್ಕೆ ನೋಡಿದರೆ ಒಂದು ಮನೆಗೇ ಹೊಂದಿಕೊಂಡಿರುವ ಅಂಗಡಿ. ತರಕಾರಿಯಿಂದ ಹಿಡಿದು ದಿನಸಿಯವರೆಗೆ ದಿನಬಳಕೆಯ ಹೆಚ್ಚಿನ ವಸ್ತುಗಳು ಸಿಗುವ ಅಂಗಡಿ. ಬೆಳಿಗ್ಗೆ 6.00 ಕ್ಕೆ ತೆರೆಯುವ ಅಂಗಡಿ ಮುಚ್ಚುವುದು ರಾತ್ರಿ 10.30 - 11.00 ಕ್ಕೆ. ಇಲ್ಲಿ ಸದಾಕಾಲ ವ್ಯಾಪಾರ ವಹಿವಾಟು ನಡೆಸುತ್ತಾ ನಗುನಗುತ್ತಾ ನಿಂತಿರುವುದು ಹೆಚ್ಚಾಗಿ ಆ ನಡು ವಯಸ್ಸಿನ ಮಹಿಳೆಯೇ. ಶಾಲೆ ಕಲಿಯುವ ಮಗ, ಮಗಳು, ತಮ್ಮ, ಗಂಡ ಎಲ್ಲರದೂ ಸಹಾಯಕ ಪಾತ್ರಗಳಷ್ಟೆ. ಮುಖ್ಯ ಭಾರ ಹೊತ್ತಿರುವುದು ಮನೆಯಾಕೆ. ಅಂಗಡಿಯಲ್ಲಿ ಗಿರಾಕಿಗಳಿಲ್ಲದ ಹೊತ್ತಿಗೆ ಕೆಲಸಗಳನ್ನು ಹೊಂದಿಸಿಕೊಂಡು, ವಯಸ್ಸಾದ ಇಬ್ಬರು ಹಿರಿಯರಿರುವ ಕುಟುಂಬವನ್ನು ನಡೆಸುವ ಮನೆಯ ಸಾರಥಿಯೂ ಅವರೇ. ಹೊರಗೆ ದುಡಿಯುವ ಗಂಡ, ಅಂಗಡಿಗೆ ತರಕಾರಿ, ದಿನಸಿ ತಂದುಕೊಡುವ ಒಂದು ಪ್ರಮುಖ ಜವಾಬ್ದಾರಿ ಹೊತ್ತಿದ್ದಾರೆ.

ಇನ್ನೂ ಕೊಂಚ ಮುಂದೆ ಒಡವೆ ಹನುಮಕ್ಕಳ ಮನೆ ಗಂಡ ತೀರಿಕೊಂಡ ಮೇಲೆ ಎದೆಗುಂದದೇ ಗಟ್ಟಿಯಾಗಿ ಬದುಕನ್ನು ಎದುರಿಸಿದ ದಿಟ್ಟ ಮಹಿಳೆ. ಕಿತ್ತು ಕಾಡುವ ಬಡತನ, ಮಕ್ಕಳೂ ಹೆಚ್ಚು. ಊದುಗಡ್ಡಿಬತ್ತಿ ಹೊಸೆದಿದ್ದೇನು? ಕೂಲಿನಾಲಿ ಮಾಡಿದ್ದೇನು? ಅಂತೂ ಇಂತೂ ಇದೀಗ ಮಕ್ಕಳ ಕೈಗೆ ಬರುತ್ತಿವೆ ಎಂದುಕೊಂಡರೆ ಅಗೋ ಕಷ್ಟ ಪರಂಪರೆಗಳೂ ಬೆನ್ನಟ್ಟಿಕೊಂಡೇ ಬರುತ್ತಿವೆ. ಈಜಬೇಕು ಇದ್ದು ಜೈಸಬೇಕು ಎಂಬ ಗಾದೆ ಮಾತು ಈ ದಲಿತ ಮಹಿಳೆಗೆ ಗೊತ್ತೋ ಇಲ್ಲವೋ ತಿಳಿಯದು. ಆದರೆ ಬದುಕಿನ ನೀತಿ, ರೀತಿ ಮಾತ್ರ ಅದೇ.

ಅಲ್ಲೊಬ್ಬರು ಅವಿವಾಹಿತ ಮಹಿಳೆ. ಉಪನಗರದ ಕಾಲೇಜೊಂದರಲ್ಲಿ ಲೈಬ್ರರಿ ಸಹಾಯಕಿ. ಹಳ್ಳಿಯಲ್ಲಿರುವ ತನ್ನ ಅಕ್ಕನ ಇಬ್ಬರು ಮಕ್ಕಳನ್ನು ತನ್ನ ಮನೆಯಲ್ಲಿರಿಸಿಕೊಂಡು ಓದಿಸುತ್ತಾ ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ. ಅವರು ಆ ಅಪಾರ್ಟ್‌ಮೆಂಟ್‌ನ ನಿವಾಸಿ.

ಇದೀಗ ಅಲ್ಲಿ ಎದ್ದು ನಿಂತಿರುವ ಅಪಾರ್ಟ್‌ಮೆಂಟ್‌ಗಳು ಹೊಸವು. ಎಷ್ಟೋ ಜನ ಮಹಿಳೆಯರು ಪುರುಷರು, ಬಸ್, ಸ್ಕೂಟರ್, ಕಾರು, ಸ್ಕೂಟಿ ಏರಿ ದಿನ ಬೆಳಿಗ್ಗೆ ದುಡಿಮೆಗೆ ಹೋಗುವುದು ಕಾಣುತ್ತದೆ. ಹೆಚ್ಚಿನ ವಿವರಗಳು ಗೊತ್ತಿಲ್ಲ. ಆದರೆ ನಿತ್ಯ ದುಡಿಮೆಗೆ ಹೋಗುವವರಲ್ಲಿ ಮಹಿಳೆಯರ ಸಂಖ್ಯೆ ಯಾವ ರೀತಿಯಲ್ಲೂ ಪುರುಷರಿಗಿಂತ ಕಡಿಮೆ ಇಲ್ಲ. ಮಹಿಳೆಯರದ್ದೇ ಒಂದು ಕೈ ಮೇಲೆ ಅನಿಸುತ್ತದೆ. ಖಚಿತ ಲೆಕ್ಕ ಮಾತ್ರ ಗೊತ್ತಿಲ್ಲ.

ಗಡಿಯಾರ್ದ ಮುಳ್ಳು ಇನ್ನೇನು ಒಂದು ಸುತ್ತು ಹಾಕುತ್ತಿದೆ. ಅದೀಗ ನಮ್ಮ ಮನೆಯಿರುವ ವಠಾರವನ್ನೇ ತೋರಿಸುತ್ತಿದೆ.

ನಮ್ಮ ಮನೆಗೆ ಅಂಟಿಕೊಂಡಂತೇ ಇರುವ ಪಕ್ಕದ ಮನೆಯಲ್ಲಿರುವುದು ಒಂದು ಹೊಸದಾಗಿ ಮದುವೆಯಾದ ಜೋಡಿ. ಪ್ರೇಮ ವಿವಾಹ. ಕುಂಬಳಗೋಡಿನ ಕೈಗಾರಿಕಾ ಪ್ರದೇಶದ ಬೇರೆ ಬೇರೆ ಕೈಗಾರಿಕೆಯಲ್ಲಿ ಇಬ್ಬರದೂ ಉದ್ಯೋಗ.

ಈ ಮನೆಯ ಪಕ್ಕದ ವ೦ನ೦ಯ೦ಲ್ಲಿ ಹೈಕೋರ್ಟ್‌ನಲ್ಲಿ ಸ್ಟೆನೋ ಆಗಿ ಕೆಲಸ ಮಾಡುವ ಒಬ್ಬ ಯುವತಿ. ಇಬ್ಬರು ತಮ್ಮಂದಿರು, ತಂದೆ ಹ೦ೂ೦ಗ೦ ದುಡಿಯುವವರಾದರೂ ಎಲ್ಲರದೂ ಅಸಂಘಟಿತ ಕ್ಷೇತ್ರದಲ್ಲಿ ದುಡಿಮೆ. ಗಡಿಯಾರದ ಮುಳ್ಳು ಒಂದು ಸುತ್ತು ಸುತ್ತಿತು. ನಾನೇ ಅವಾಕ್ಕಾದೆ.

ದುಡಿಮೆ, ಎಲ್ಲೆಲ್ಲೂ...

ಮನೆ ಮನೆಗಳಲ್ಲಿ ದುಡಿಯುವ ಮಹಿಳೆಯರು. ಬರೀ ದುಡಿಯುವವರು ಅಲ್ಲ. ಮನೆಯ ಆರ್ಥಿಕತೆಗೆ ಆಧಾರ ಸ್ಥಂಭವಾಗಿರುವವರು. ಮನೆಯ ಒಳಗೆ - ಹೊರಗೆ ದುಡಿಮೆ, ದುಡಿಮೆ.

ಹೀಗೆ ಒಂದು ಸುತ್ತು ಬರುವಾಗ ಖಂಡಿತ ಕೆಲವೊಂದೆರಡು ಮನೆಗಳ ಮಾಹಿತಿ ತಪ್ಪಿಹೋಗಿದೆ. ಆ ಮನೆಗಳಲ್ಲಿ ಪುರುಷರಷ್ಟೇ 'ಹೊರಗೆ ಹೋಗಿ ದುಡಿಯುವವರು'. ಮಹಿಳೆಯರು ಬರೀ 'ಗೃಹಿಣಿಯರು'. ಅಂದರೆ ಸಂಬಳವಿಲ್ಲದ, 'ದುಡಿಮೆ' ಎಂದು ಕರೆಯದ, ರಜೆಯಿಲ್ಲದ, ಬಹಳಷ್ಟು ಸಾರಿ ವಿಶ್ರಾಂತಿಯೂ ಇಲ್ಲದ ದುಡಿಮೆ ಅವರದು. ತಾವು ದುಡಿಯುತ್ತಿರುವ ದುಡಿಮೆಯ ಮೌಲ್ಯವು ಗೊತ್ತಿಲ್ಲದವರು ಅವರು.



ತೊಟ್ಟಿದ್ದ ಉಡುಪು, ಸೆಲ್ವಾರ್ ಕಮೀಜ್.

ಯಾವ ಕೆಲಸವನ್ನಾದರೂ ಮಾಡಬಲ್ಲೆ ಅಂತ ಅವರಿಗೆ ಧೈರ್ಯ ತಂದುಕೊಟ್ಟ ಸಂಗತಿಗಳಲ್ಲಿ ಅವರ ಉಡುಪು ಸಹ ಒಂದು ಅಂತ ನನಗೆ ಮತ್ತೊಮ್ಮೆ ಮನದಟ್ಟಾಯಿತು.

ನನ್ನ ಕಿಂಚಿತ್ ಶ್ರಮವಿಲ್ಲದೆ ಇಡೀ ಮನೆಯನ್ನು ಒಪ್ಪ ಒರಣ ಮಾಡಿಟ್ಟಿದ್ದ ಮಡದಿ, ಮುದ್ದಿನ ಮಗಳ ಬಗೆಗೆ ಅಭಿಮಾನ ಮೂಡದೇ ಇರಲಿಲ್ಲ.

ನಮ್ಮ ಮನೆಯ ಗಾಡಿ ಬಹುತೇಕ ಓಡುತ್ತಿರುವುದು ಹೆಣ್ಣಿನ ದುಡಿಮೆಯ ಪೆಟ್ರೋಲ್‌ನಿಂದಲೇ.

ನಾವು ಕೆಲವೊಮ್ಮೆ ಹೋಟೆಲ್‌ನಲ್ಲಿ ಊಟ ಮಾಡಿ ಹೊರಬರುವಾಗ ನನ್ನ ಹೆಂಡತಿ ಪರ್ಸ್ ತೆಗೆದು ಬಿಲ್ ಕೊಡುವುದು, ನಾನು ಸುಮ್ಮನೆ ಕರ್ಚೀಫ್‌ನಿಂದ ಕೈಯೊರೆಸಿಕೊಂಡು ತಣ್ಣನೆ ಹೊರ ನಡೆಯುವುದು. ಇದೆಲ್ಲಾ ಎಂದೂ ಅಪಮಾನ ಅನಿಸಿಲ್ಲ. ಬದಲಿಗೆ ಹೆಮ್ಮೆಯ ವಿಷಯವೇ ಆಗಿ ಕಂಡಿದೆ.

ಇತ್ತೀಚೆಗೆ ಟಿ.ವಿ.9 ಚರ್ಚೆಯೊಂದರಲ್ಲಿ ಆರೆಸ್ಸೆಸ್ ಪಡೆಯ ಡಾ.ಕೇಸರಿ ಎಂಬ ವೈದ್ಯನೊಬ್ಬ ಉದ್ಘೋಗಂ 'ಪುರುಷ ಲಕ್ಷಣಂ', ಹೆಣ್ಣು ಮನೆಯೊಳಗಿರಬೇಕು. ಆಕೆ ಅಬಲೆ ಅಂತೆಲ್ಲಾ ವದರುತ್ತಿದ್ದಾಗ ಕಾಂ.ಶಾಹಿನ್ ರನ್ನು ಕರೆದುಕೊಂಡು ಹೋಗಿ 'ಕೇಸರಿ' ಡಾಕ್ಟರ್‌ನ 'ಕೇಸರಿ'ಯ ಚಿಂತನೆ, ಆಲೋಚನೆಗೆ ಬೇರೆ ಬಣ್ಣ ಬಳಿಸಲು ಸಾಧ್ಯವಾ ಅಂತ ಯಾಕೋ ಆಲೋಚನೆ ಬಂತು? ಏನು ಮಾಡುವುದು?



ಮಹಿಳೆಯರ ದುಡಿಮೆಯ ಕುರಿತು ಈ ಕೊನೆಯ ಘಟನೆ ಹೇಳದೇ ಹೋದರೆ ವಿಚಾರ ಅಪೂರ್ಣವಾದೀತು.

ಲೇಡಿ ಪೈಂಟರ್ ನಮ್ಮ ಮನೆಗೆ ಬಳಿದ ಬಣ್ಣ

ನಾವು ವಾಸವಿದ್ದ ಮನೆಗೆ ಬಣ್ಣ ಮಾಡಿಸಬೇಕಿತ್ತು. ಮನೆಗೆ ಬಣ್ಣ ಮಾಡಿಸುವುದೆಂದರೆ ಬೀರು, ಕುರ್ಚಿ, ಪಾತ್ರೆ ಪಗಡೆ ಇರುವುದೆಲ್ಲಾ ಹೊರಗೆ, ಎತ್ತಿ ಇಳಿಸಿ ತೊಳೆದು, ಬಳಿದು ಮಾಡುವುದೆಲ್ಲಾ ಬಾರಿ ಕೆಲಸವೇ ಅಲ್ಲವೇ? ನಾನಾಗ ವಿದ್ಯಾರ್ಥಿ ಸಂಘಟನೆ, ಎಸ್.ಎಫ್.ಐ.ನ ರಾಜ್ಯ ಕಾರ್ಯದರ್ಶಿಯಾಗಿದ್ದೆ. ಬಿಡುವಿರದ ಪ್ರಯಾಣ, ಕೆಲಸಗಳು, ಏನು ಮಾಡುವುದು? ನನಗೆ ಚಿಂತೆಯಾಗಿತ್ತು.

ಬಣ್ಣ ಬಳಿಯುವವರನ್ನು ಹುಡುಕಬೇಕು. ಬಣ್ಣ ಕೊಡಿಸಬೇಕು. ಇದು ಬೇರೆ ಇತ್ತು.

ಚಿಟಿಕೆ ಹೊಡೆಯುವಷ್ಟರಲ್ಲಿ ನನ್ನ ಚಿಂತೆ ಬಗೆಹರಿಸಿದ್ದು ನನ್ನ ಬಾಳ ಸಂಗಾತಿ.

ಜನವಾದಿ ಮಹಿಳಾ ಸಂಘಟನೆಯ ಕೆಂಗೇರಿ ಪ್ರದೇಶದ ಕಾರ್ಯಕರ್ತೆ ಕಾಂ.ಶಾಹಿನ್ ತಾಜ್ ಆ ದಿನ ಬೆಳಿಗ್ಗೆ ನಮ್ಮ ಮನೆಗೆ ಬಂದಾಗ ನನಗೆ ಒಂದು ಬಗೆಯ ಸಂತೋಷ, ಅಚ್ಚರಿ ಎರಡೂ ಆಯ್ತು. ಒಹೋ ಹೆಂಗಸರೂ ಕಟ್ಟಡಕ್ಕೆ ಬಣ್ಣ ಬಳಿಯುವ ಪೈಂಟರ್ ಕೆಲಸ ಮಾಡುತ್ತಾರೆ!!

ಯಾವ ಕೆಲಸಕ್ಕೂ ನನಗೆ ಇರಲಾಗಲಿಲ್ಲ. ಹೊರಗೆ ಹೊರಟೆ. ನಾನು ಪ್ರಯಾಣ ಮುಗಿಸಿ ಮರಳಿ ಮನೆಗೆ ಬಂದಾಗ ಮನೆಗೆ ಬಳಿದಿದ್ದ ಚಂದದ ತಿಳಿ ಗುಲಾಬಿ ಬಣ್ಣ ನೋಡಿ ನಿಜಕ್ಕೂ ಖುಷಿಯಾಯ್ತು. ಕಾಂ. ಶಾಹಿನ್ ಏಣಿ ಹಾಕಿಕೊಂಡು ಹತ್ತಿ ಒಬ್ಬರೇ ಮನೆಗೆ ಬಣ್ಣ ಬಳಿದರಂತೆ. ಅಚ್ಚುಕಟ್ಟಾದ ಕೆಲಸ. ಶಾಹಿನ್ ಬಂದಾಗ ನಾನು ಗಮನಿಸಿದ್ದೆ. ಅವರು

ಮಹಿಳಾ ಮೀಸಲಾತಿ ಮಸೂದೆ

ಜನಸಂಖ್ಯೆಯ ಸರಿಸುಮಾರು ಅರ್ಧಭಾಗ ಇರುವ ಮಹಿಳೆಯರಿಗೆ ಶಾಸನಸಭೆಗಳಲ್ಲಿ ಈಗಿರುವ ಪ್ರಾತಿನಿಧ್ಯ ತೀರಾ ನಿಕೃಷ್ಟ. ಪ್ರಜಾಪ್ರಭುತ್ವ ಅರ್ಥಪೂರ್ಣವಾಗಬೇಕಾದರೂ ಮಹಿಳೆಯರು ಸ್ವಾತಂತ್ರ್ಯವನ್ನು ಕಸಿಯುವ ಲಿಂಗಸಮಾನತೆಗೆ ಅಡೆತಡೆಯಾಗಿರುವ ನಮ್ಮ ಸಮಾಜದ ನೂರೆಂಟು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ನಿರ್ಬಂಧ, ನಿಷೇಧ, ಕಟ್ಟಳೆಗಳನ್ನು ಮೀರಿ ಮಹಿಳೆ ಮುನ್ನಡೆಯ ಹಾದಿಯಲ್ಲಿ ಹೆಜ್ಜೆಯಿಡಲು, ಶಾಸನಸಭೇಗಳಲ್ಲಿನ ಮೀಸಲಾತಿಯು ಸಹಾಯಕವಾಗಬಹುದು. ನಮ್ಮ ಒಟ್ಟು ಸಮಾಜದ ಹಾಗೂ ರಾಜಕೀಯದ ಆರೋಗ್ಯದ ದೃಷ್ಟಿಯಿಂದ ಮಹಿಳಾ ಮೀಸಲಾತಿ ಅಗತ್ಯವಾದ ಕ್ರಮವಾಗಿದೆ.

ಇದು ಡಾ. ಟಿ.ಆರ್.ಚಂದ್ರಶೇಖರ್ ಲೇಖನದ ಆಯ್ದ ಭಾಗ.

ಡಾ.ಟಿ.ಆರ್.ಚಂದ್ರಶೇಖರ
ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕಳೆದ 14 (1996) ವರ್ಷಗಳಿಂದ ರಾಜಕೀಯ ಪಕ್ಷಗಳು ಲೋಕಸಭೆಯಲ್ಲಿ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಸ್ಥಾನಗಳನ್ನು ಮೀಸಲಿಡುವ ಪ್ರಯತ್ನವನ್ನು ನಡೆಸುತ್ತಿವೆ. ಇದಕ್ಕೆ ಅಗತ್ಯವಾದ ಮಸೂದೆಯು ಸಿದ್ಧವಾಗಿದ್ದರೂ ಅದನ್ನು ಲೋಕಸಭೆಯ ಮುಂದಿಟ್ಟು ಅನುಮೋದನೆ ಪಡೆಯುವುದು ಅವುಗಳಿಗೆ ಸಾಧ್ಯವಾಗಿಲ್ಲ. ಈ ಮಸೂದೆಯ ಅನುಮೋದನೆಗೆ ಬಹುಪಾಲು ರಾಜಕೀಯ ಪಕ್ಷಗಳು ಸಿದ್ಧವಿದ್ದರೂ ಮಸೂದೆಯನ್ನು ಲೋಕಸಭೆಯ ಮುಂದಿಡುವುದು ಸಾಧ್ಯವಾಗಿಲ್ಲವೆಂದರೆ ಇದನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? ಹಿಂದುಳಿದ ವರ್ಗಗಳಿಗೆ, ಅಲ್ಪಸಂಖ್ಯಾತ ವರ್ಗಕ್ಕೆ ಮತ್ತು ಪ.ಜಾ ಹಾಗೂ ಪ.ಪಂಗಳಿಗೆ ಸೇರಿದ ಮಹಿಳೆಯರಿಗೂ ಮೀಸಲಾತಿಯಲ್ಲಿ ಒಳಮೀಸಲಾತಿ ನೀಡಬೇಕೆಂಬ ಒತ್ತಾಯದಿಂದಾಗಿ ಮಸೂದೆಗೆ ಲೋಕಸಭೆಯಲ್ಲಿ ಅನುಮೋದನೆ ದೊರೆಯುತ್ತಿಲ್ಲ. ನಮ್ಮ ಎರಡು ದೊಡ್ಡ ರಾಜಕೀಯ ಪಕ್ಷಗಳು ಮಹಿಳಾ ಮೀಸಲಾತಿ ಮಸೂದೆಗೆ ಬೆಂಬಲ ಘೋಷಿಸಿವೆ. ಈ ಮಸೂದೆಗೆ ಯಾವ ಮೂಲೆಗಳಿಂದ ಮತ್ತು ಯಾವ ಕಾರಣಕ್ಕೆ ವಿರೋಧ ಬರುತ್ತಿದೆ ಎಂಬುದು ತಿಳಿದಿದ್ದರೂ ಅದನ್ನು ಸರಿಪಡಿಸುವ ಕ್ರಮವನ್ನು ಆಳುವ ಪಕ್ಷಗಳು ತೆಗೆದುಕೊಳ್ಳಲಿಲ್ಲ. ಈ ಮಸೂದೆಯನ್ನು ವಿರೋಧಿಸುತ್ತಿರುವ ಪಕ್ಷಗಳು ಕೂಡ ಅದನ್ನು ಈಗಿರುವಂತೆ ಅನುಮೋದಿಸಿ ನಂತರ ಅದರಲ್ಲಿ ಒಳ ಮೀಸಲಾತಿ ಬಗ್ಗೆ ಒತ್ತಾಯಿಸಬಹುದೆಂಬ ಪ್ರಬುದ್ಧ ರಾಜಕಾರಣವನ್ನೂ ಪ್ರದರ್ಶಿಸುತ್ತಿಲ್ಲ. ಅದು ಒಳಮೀಸಲಾತಿಯಿರಲಿ ಅಥವಾ ಮತ್ತಾವುದೇ ಒತ್ತಾಯವಿರಲಿ ಮೊದಲು ಮಹಿಳಾ ಮೀಸಲಾತಿ ಮಸೂದೆಯನ್ನು ಒಪ್ಪಿಕೊಳ್ಳುವ ಬಗ್ಗೆ ನಾವು ಯೋಚಿಸಬೇಕಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ಮಹಿಳೆಯರ ಸ್ಥಿತಿಗತಿ ಬಗ್ಗೆ ಕರ್ನಾಟಕವನ್ನು ಗಮನದಲ್ಲಿಟ್ಟುಕೊಂಡು ಮೊದಲ ಭಾಗದಲ್ಲಿ ಚರ್ಚಿಸಿ ನಂತರ ಎರಡನೆಯ ಭಾಗದಲ್ಲಿ ಅವರ ಮೀಸಲಾತಿ ಪ್ರಶ್ನೆಯನ್ನು ಚರ್ಚಿಸಲಾಗಿದೆ.

ಮಹಿಳೆಯರು ಮುಖ್ಯಸ್ಥರಾಗಿರುವ ಪಂಚಾಯಿತಿಗಳಲ್ಲಿ ಭ್ರಷ್ಟಾಚಾರ ಕಡಿಮೆ, ರಾಜಕೀಯದ ಅಪರಾಧೀಕರಣದ ದೃಷ್ಟಿಯಿಂದಲೂ ಮಹಿಳಾ ರಾಜಕಾರಣಿಗಳೇ ಪುರುಷರಿಗಿಂತ ಉತ್ತಮ ಎಂದು ಅಧ್ಯಯನಗಳು ಹೇಳುತ್ತವೆ.

ಭಾಗ-1

ಲಿಂಗ ಸಂಬಂಧಗಳ ದೃಷ್ಟಿಯಿಂದ ನಾವು ಬದುಕುತ್ತಿರುವುದು ಅಸಮಾನತೆಯ ಪ್ರಪಂಚವಾಗಿದೆ. ಅಸಮಾನತೆಗಿಂತ ಅದನ್ನು ಸಮಸ್ಯೆಯನ್ನಾಗಿ ಒಪ್ಪಿಕೊಳ್ಳಲು ಸಿದ್ಧವಿಲ್ಲದ ರಾಜಕಾರಣ ಅಪಾಯಕಾರಿಯಾದುದು. ಏಕೆಂದರೆ ಎರಡನೆಯ ನಿಲುವಿನಲ್ಲಿ ಪರಿಹಾರಕ್ಕೆ ಅವಕಾಶವಿಲ್ಲ. ಮೊದಲನೆಯ ನಿಲುವಿನಲ್ಲಿ ಪರಿಹಾರದ ಬಗ್ಗೆ ಯೋಚಿಸಲು ಅವಕಾಶವಿದೆ. ಲಿಂಗ ಸಂಬಂಧಿ ಅಸಮಾನತೆಯ ಸಂಗತಿಯು ಕೇವಲ ಮಹಿಳೆಯರಿಗೆ ಸಂಬಂಧಿಸಿದ ವಿಷಯವಲ್ಲ. ಅದು ಪುರುಷರನ್ನು ಒಳಗೊಂಡಂತೆ ಮೂಲಭೂತವಾಗಿ ಅಭಿವೃದ್ಧಿ ಸಮಸ್ಯೆಯಾಗಿದೆ. ಅದರಿಂದ ನಮ್ಮ ಆರ್ಥಿಕತೆ, ಸಮಾಜ ಮತ್ತು ರಾಜಕಾರಣ ಸಮೃದ್ಧವಾಗಿ ಬೆಳೆಯಲು ಸಾಧ್ಯವಾಗಿಲ್ಲ. ಲಿಂಗ ಸಮಾನತೆಯು ಮಹಿಳೆಯರಿಗೆ ಅಗತ್ಯ ನಿಜ. ಆದರೆ ಅದು ಪುರುಷರನ್ನು ಒಳಗೊಂಡಂತೆ ಅಭಿವೃದ್ಧಿಗಾಗಿ ಅಗತ್ಯವಾಗಿದೆ.

ಕರ್ನಾಟಕದಲ್ಲಿ ರಾಜಕಾರಣದ ದೃಷ್ಟಿಯಿಂದ ಮಹಿಳೆಯರ ಸ್ಥಿತಿಗತಿಯು ಸಮಾಧಾನಕರವಾಗಿಲ್ಲ. ಅಲ್ಲಿನ ಸಚಿವ ಸಂಪುಟದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯವೇ ಇಲ್ಲ!. ರಾಜ್ಯದ ಮಹಿಳಾ ಆಯೋಗಕ್ಕೆ


ಮಹಿಳಾ ಮೀಸಲಾತಿ ಒತ್ತಾಯಿಸಿ ಪಾರ್ಲಿಮೆಂಟ್ ಮುಂದೆ ಪ್ರದರ್ಶನ

ಅಧ್ಯಕ್ಷರಿಲ್ಲ. ಲೋಕಸಭೆಯಲ್ಲಿ ಶೇ33 ರಷ್ಟು ಸ್ಥಾನಗಳನ್ನು ವಿಧಾನಸಭೆಗಳಲ್ಲಿ ಮತ್ತು ಲೋಕಸಭೆಯಲ್ಲಿ ಮೀಸಲಾತಿ ನೀಡುವ ಕ್ರಮವನ್ನು ನಮ್ಮ ರಾಜ್ಯದಲ್ಲಿನ ಆಳುವ ಪಕ್ಷವು ಸಮರ್ಥಿಸುತ್ತಿದೆ. ಅದಕ್ಕೆ ಮಸೂದೆ ಬಗ್ಗೆ


ರಾಜ್ಯಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರವಾದಾಗ

ಪ್ರಾಮಾಣಿಕ ಬದ್ಧತೆಯಿರಬಹುದು. ಆದರೆ ಅದರ ಚಟುವಟಿಕೆಗಳು ಅದನ್ನು ಸಾಬೀತುಪಡಿಸುವುದಿಲ್ಲ. ಉದಾಹರಣೆಗೆ ಈ ಪಕ್ಷದ ಲೋಕಸಭೆಯಲ್ಲಿನ ವಿರೋಧ ಪಕ್ಷದ ನಾಯಕಿಯಾಗಿರುವವರು ನಮ್ಮ ರಾಜ್ಯದ ಬಳ್ಳಾರಿ ನಗರಕ್ಕೆ ಶ್ರಾವಣ ಮಾಸದಲ್ಲಿ ವರಮಹಾಲಕ್ಷ್ಮಿ ಪೂಜೆಗೆ ಪ್ರತಿ ವರ್ಷ ಬರುವುದಾಗಿ ಭರವಸೆ ನೀಡಿದ್ದಾರೆ. ಅದರ ಪ್ರಕಾರ ಅವರು ಬರುತ್ತಿದ್ದಾರೆ. ಅವರ ಉದ್ದೇಶದ ಬಗ್ಗೆ ನಾವು ಪ್ರಶ್ನೆ ಮಾಡುವುದು ಬೇಡ. ಆದರೆ ಅದು ಯಾವ ಬಗೆಯ ಸಂದೇಶವನ್ನು ಸಮಾಜಕ್ಕೆ, ಅದರಲ್ಲೂ ಮಹಿಳೆಯರಿಗೆ ನೀಡುತ್ತದೆ ಎಂಬುದು ಮುಖ್ಯ. ಅವರೊಬ್ಬರು ರಾಷ್ಟ್ರೀಯ ಮುಂದಾಳಾಗಿದ್ದಾರೆ ಮತ್ತು ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ನಮ್ಮ ರಾಜ್ಯಕ್ಕೆ ಬಂದಾಗ ಮಹಿಳೆಯರ ಸಮಸ್ಯೆಯ ಬಗ್ಗೆ ಒತ್ತಿ ಹೇಳುತ್ತಿಲ್ಲ. ಅವರ ಪಕ್ಷವು ಆಡಳಿತ ನಡೆಸುತ್ತಿರುವ ರಾಜ್ಯದ ಸಚಿವ ಸಂಪುಟದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯವಿಲ್ಲ. ಇವೆಲ್ಲವನ್ನೂ ಅವರು ಸಹಿಸಿಕೊಂಡಿದ್ದಾರೆ. ಈ ವಿಷಯದಲ್ಲಿ ಅವರು ಮಧ್ಯ ಪ್ರವೇಶಿಸುತ್ತಿಲ್ಲ. ಆದರೆ ಲೋಕಸಭೆಯಲ್ಲಿ ಮಹಿಳಾ ಮೀಸಲಾತಿಗೆ ಮಂಡಿಸಿರುವ ಮಸೂದೆಗೆ ಬೆಂಬಲ ಘೋಷಿಸಿದ್ದಾರೆ.!

ಈ ವಿಷಯದಲ್ಲಿ ಕಾಂಗ್ರೆಸ್ಸಿನ ಸಾಧನೆಯೇನೂ ಅನುಕರಣೀಯವಾದುದೇನಲ್ಲ. ಈ ಪಕ್ಷದಲ್ಲೂ ಲಿಂಗ ಸಂಬಂಧದ ವಿಷಯದಲ್ಲಿ ಅನೇಕ ಆಂತರಿಕ ವೈರುಧ್ಯಗಳಿವೆ. ಇವೆರಡು ಪಕ್ಷಗಳ ನಡುವೆ ಇರುವ ವ್ಯತ್ಯಾಸ ಒಂದೇ : ನಮ್ಮಲ್ಲಿನ ಆಳುವ ಪಕ್ಷದ ನೀತಿಯು ಪಾರಮಾರ್ಥಿಕವಾದುದಾಗಿದ್ದರೆ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಕಾಂಗೆಸ್ಸಿನದ್ದು ಪದಾರ್ಥವಾದಿಯಾದುದಾಗಿದೆ. ಮೊದಲನೆಯದರ ಆಸಕ್ತಿಗಳು ಉಳ್ಳವರ ಪರವಾಗಿದ್ದರೆ ಎರಡನೆಯದು 'ಜನರ' ಪರವಾಗಿರುವಂತೆ ಕಾಣುತ್ತದೆ. ಮೊದಲನೆಯದರಲ್ಲಿ ದೇವರು-ದಿಂಡರು, ಯಜ್ಞ-ಯಾಗ, ಮಠ-ಮಠಾದೀಶರು, ಟ್ರಸ್ಟು-ಪ್ರತಿಷ್ಠಾನಗಳು ಮುಖ್ಯವಾಗಿದ್ದರೆ ಎರಡನೆಯದರಲ್ಲಿ ಅಂತಹ ಪಾರಮಾರ್ಥಿಕತೆ ಬಹಿರಂಗವಾಗಿ ಪ್ರತಿಪಾದಿತವಾಗುತ್ತಿಲ್ಲ. ಮಠ-ಮಾನ್ಯಗಳ ಬಗ್ಗೆ ನಮ್ಮ ಆಳುವ ಸರ್ಕಾರವು ಯಾವ ಸಂಕೋಚವೂ ಇಲ್ಲದೆ ಅದರ ಬದ್ಧತೆಯನ್ನು ಬಹಿರಂಗ ಪಡಿಸುತ್ತಿದೆ. ಈ ದೃಷ್ಟಿಯಿಂದ ಎರಡನೆಯದನ್ನು ನಾವು ಕಡಿಮೆ ಅಪಾಯಕಾರಿಯೆಂದು ಹೇಳಬಹುದು. ಲಿಂಗ ಸಂಬಂಧದ ನಿರ್ವಹಣೆಯ ದೃಷ್ಟಿಯಿಂದ ಇವೆರಡೂ ಪಕ್ಷಗಳ ನಡುವೆ ಬಹಳ ಭಿನ್ನತೆ ಕಂಡು ಬರುವುದಿಲ್ಲ.

ಕರ್ನಾಟಕದಲ್ಲಿ ಲಿಂಗ ಸಂಬಂಧಿ ಅಸಮಾನತೆ

ಅಭಿವೃದ್ಧಿಯ ಯಾವುದೇ ಸೂಚಿಯನ್ನು ತೆಗೆದುಕೊಂಡರೂ ಮಹಿಳೆಯರು ಅಸಮಾನತೆಯನ್ನು, ತಾರತಮ್ಯವನ್ನು ಮತ್ತು ದೌರ್ಜನ್ಯವನ್ನು ಅನುಭವಿಸುತ್ತಿರುವುದು ತಿಳಿಯುತ್ತದೆ. ಕರ್ನಾಟಕದಲ್ಲಿ ಲಿಂಗ ಅನುಪಾತವು 2001ರಲ್ಲಿ 965 ರಷ್ಟಿತ್ತು. ಲಿಂಗ ಅನುಪಾತವು ಸಾವಿರವಿರಬೇಕೆಂದು ನಿಯಮ ಮಾಡಿಕೊಂಡರೆ ನಮ್ಮ ರಾಜ್ಯದಲ್ಲಿ 2001ರ ಜನಗಣತಿ ಪ್ರಕಾರ ಕಳೆದುಹೋದ ಮಹಿಳೆಯರ ಸಂಖ್ಯೆ ಸುಮಾರು 9 ಲಕ್ಷ. ಅದೇ ರೀತಿ 0-6 ವಯೋಮಾನದ ಮಕ್ಕಳಲ್ಲಿ ಲಿಂಗ ಅನುಪಾತವು 1991 ರಲ್ಲಿ 960 ರಷ್ಟಿದ್ದುದು 2001 ರಲ್ಲಿ 946 ಕ್ಕೆ ಇಳಿದಿದೆ. ರಾಜ್ಯದಲ್ಲಿ ಗ್ರಾಮೀಣ ಮಹಿಳೆಯರ ಸಾಕ್ಷರತಾ ಪ್ರಮಾಣ 2001ರಲ್ಲಿ ಶೇ48.01. ರಾಜ್ಯದ ಹಿಂದುಳಿದ ಕೆಲವು ಜಿಲ್ಲೆಗಳಲ್ಲಿ ಅದು ಶೇ30ಕ್ಕಿಂತ ಕಡಿಮೆಯಿದೆ. ನಾವು ಇಂದು ಜ್ಞಾನ ಸಮಾಜದ ಬಗ್ಗೆ ಮಾತನಾಡುತ್ತಿದ್ದೇವೆ. ಆದರೆ ಕನಿಷ್ಟ ಸಾಕ್ಷರತೆಯ ಸೌಭಾಗ್ಯವನ್ನು ಪಡೆದುಕೊಳ್ಳಲಾಗದ ಮಹಿಳೆಯರು ನಮ್ಮಲ್ಲಿ ಲಕ್ಷಾಂತರ ಇದ್ದಾರೆ. ರಾಜ್ಯದ ಒಟ್ಟು ಗ್ರಾಮೀಣ ಅಕ್ಷರಸ್ಥರಲ್ಲಿ ಮಹಿಳೆಯರ ಪ್ರಮಾಣ ಶೇ 40.07ರಷ್ಟಿದ್ದರೆ(71.23 ಲಕ್ಷ) ಅನಕ್ಷರಸ್ಥರಲ್ಲಿ ಅವರ ಪ್ರಮಾಣ ಶೇ63.33(77.14 ಲಕ್ಷ). ಆದರೆ ಪುರುಷರಲ್ಲಿ ಅಕ್ಷರಸ್ಥರ ಪ್ರಮಾಣ ಶೇ 59.92(106.49 ಲಕ್ಷ) ಮತ್ತು ಅವರಲ್ಲಿ ಅನಕ್ಷರಸ್ಥರ ಪ್ರಮಾಣ ಶೇ. 36.67(44.67 ಲಕ್ಷ). ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಅಕ್ಷರಸ್ಥರಲ್ಲಿ ಪುರುಷರ ಸಂಖ್ಯೆಯು(106.49 ಲಕ್ಷ) ಮಹಿಳೆಯರ ಸಂಖ್ಯೆಗಿಂತ(71.23 ಲಕ್ಷ) ಅಧಿಕ. ಅನಕ್ಷರಸ್ಥರನ್ನು ತೆಗೆದುಕೊಂಡರೆ ಅಲ್ಲಿ ಪುರುಷರ ಸಂಖ್ಯೆಯು(44.67 ಲಕ್ಷ) ಮಹಿಳೆಯರ ಸಂಖ್ಯೆಗಿಂತ(77.14 ಲಕ್ಷ) ಕಡಿಮೆ. ಅಭಿವೃದ್ಧಿಯು ಹೇಗೆ ಪುರುಷರು ಮತ್ತು ಮಹಿಳೆಯರ ನಡುವೆ ತಾರತಮ್ಯವೆಸಗುತ್ತದೆ ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ. ಆದರೆ ಮಾತ್ರ (ಇದು ಒಟ್ಟು ಜನಸಂಖ್ಯೆಯ ಚಿತ್ರ. ಇದನ್ನು ಬಿಡಿಸಿ ಪ.ಜಾ ಮತ್ತು ಪ.ಪಂ ಗಳ ಸಾಕ್ಷರತೆ ಮತ್ತು ಅಲ್ಲಿ ಮಹಿಳೆಯರ ಸಾಕ್ಷರತೆಯ ವಿವರಗಳನ್ನು ಗಮನಿಸಿದರೆ ನಮಗೆ ಅಘಾತಕಾರಿಯಾದ ಸಂಗತಿಗಳು ಕಂಡು ಬರುತ್ತವೆ). ರಾಜ್ಯದಲ್ಲಿನ ಒಟ್ಟು ದುಡಿಮೆಗಾರರಲ್ಲಿ ಮಹಿಳೆಯರ ಪ್ರಮಾಣ ಶೇ 35.26ರಷ್ಟಿದ್ದರೆ ಭೂರಹಿತ ದಿನಗೂಲಿಗಳಲ್ಲಿ ಮಹಿಳೆಯರ ಪ್ರಮಾಣ ಶೇ 57.91ರಷ್ಟಿದೆ. ಅಲ್ಲಿ ಪುರುಷರ ಪ್ರಮಾಣ ಶೇ 42.01ರಷ್ಟಿದೆ. ಅದೇ ಇತರೆ ಕೆಲಸಗಳಿಗೆ(ಕೃಷಿಯೇತರ-ನಗರ ಕೇಂದ್ರಿತ) ಬಂದರೆ ದುಡಿಯುವ ಮಹಿಳೆಯರ ಪ್ರಮಾಣ ಶೇ 22.06ರಷ್ಟಿದ್ದರೆ ದುಡಿಯುವ ಪುರುಷರ ಪ್ರಮಾಣ ಶೇ 77.94ರಷ್ಟಿದೆ. ಎಲ್ಲಿ ಉದ್ಯೋಗಗಳು ಖಾಯಮಾಗಿರುತ್ತವೋ ಮತ್ತು ಕಾರ್ಮಿಕರ ಮಾರುಕಟ್ಟೆಯು ಸಂಘಟಿತ ರೂಪದಲ್ಲಿರುತ್ತದೋ ಅಲ್ಲಿ ಪುರುಷರ ಪ್ರಮಾಣ ಅಧಿಕವಾಗಿರುತ್ತದೆ ಮತ್ತು ಎಲ್ಲಿ ಉದ್ಯೋಗಗಳು ಹಂಗಾಮಿಯಾಗಿರುತ್ತವೋ ಮತ್ತು ಕಾರ್ಮಿಕ ಮಾರುಕಟ್ಟೆಯು ಅಸಂಘಟಿತವಾಗಿರುತ್ತದೋ ಅಲ್ಲಿ ಮಹಿಳೆಯರ ಪ್ರಮಾಣವು ಅಧಿಕವಾಗಿರುತ್ತದೆ. ದುಡಿಮೆಯ ದೃಷ್ಟಿಯಿಂದ ಇವೆರಡೂ ಸಂಗತಿಗಳಲ್ಲಿ ಪ.ಜಾ ಮತ್ತು ಪ.ಪಂ. ಹಾಗೂ ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ಮಹಿಳೆಯರ ಸ್ಥಿತಿಗತಿಯು ಹೆಚ್ಚು ದುರ್ಬಲವಾಗಿರುವುದು ಸ್ಪಷ್ಟವಾಗುತ್ತದೆ.

ಇಂದು ನಾವು ಜನರನ್ನು ಒಳಗೊಳ್ಳುವ ಅಭಿವೃದ್ಧಿಯ ಬಗ್ಗೆ ಮಾತನಾಡುತ್ತಿದ್ದೇವೆ. ನಮ್ಮ ಆರ್ಥಿಕತೆಯಾಗಲಿ, ಸಾಮಾಜಿಕ ರಂಗವಾಗಲಿ ಅಥವಾ ರಾಜಕಾರಣವಾಗಲಿ ಮಹಿಳೆಯರನ್ನು ಒಳಗೊಳ್ಳುವ ಸ್ವರೂಪದಲ್ಲಿ ಇಲ್ಲ. ನೀತಿ-ನಿರ್ಣಯಗಳಲ್ಲಿ, ಅದರಲ್ಲೂ ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆಗಳಲ್ಲಿ ಮಹಿಳೆಯರು ಪ್ರಾತಿನಿಧ್ಯವನ್ನು ಪಡೆಯುವುದು ಸುಲಭದ ಮಾತಲ್ಲ. ಅದಕ್ಕೆ ಅವಕಾಶ ಮಾಡಿಕೊಡುವ ಪ್ರಯತ್ನಗಳು ಸರಿಯಾಗಿ ನಡೆಯುತ್ತಿಲ್ಲ. ಅಲ್ಲಿ ಮಹಿಳೆಯರಿಗೆ ಶೇ33 ಮೀಸಲಾತಿ ನೀಡುವ ಕುರಿತಂತೆ ಅನೇಕ ದಶಕಗಳ ಕಾಲ ಚರ್ಚೆ ನಡೆದರೂ ಅದು ದಡ ಸೇರಿರಲಿಲ್ಲ. ಈಗ ಸಂವಿಧಾನದ 108ನೆಯ ತಿದ್ದುಪಡಿ(2008) ಮಸೂದೆಯನ್ನು ದಿನಾಂಕ 09 ಮಾರ್ಚ್ 2010ರಂದು ರಾಜ್ಯಸಭೆಯಲ್ಲಿ ಅನುಮೋದಿಸಲಾಗಿದೆ. ಅದೇ ರೀತಿಯಲ್ಲಿ ಲೋಕಸಭೆಯಲ್ಲೂ ಅದು ಅನುಮೋದನೆ ಪಡೆಯುತ್ತದೆ ಎಂಬುದಕ್ಕೆ ಭರವಸೆಯೇನಿಲ್ಲ.

ದಕ್ಷಿಣ ಭಾರತದಲ್ಲಿ ಅತಿ ಹೆಚ್ಚು ತಾಯಂದಿರ ಸಾವಿನ ಪ್ರಮಾಣ ಎಂ.ಎಂ.ಆರ್. (MMR) ಕರ್ನಾಟಕದಲ್ಲಿದೆ!

ಲಿಂಗ ಸಂಬಂಧದ ದೃಷ್ಟಿಯಿಂದ ಕರ್ನಾಟಕದ ಸ್ಥಿತಿಯು ಸಾಪೇಕ್ಷವಾಗಿ ಕೆಳಸ್ಥಾನದಲ್ಲಿದೆ. ಹೆರಿಗೆ ಸಂಬಂಧಿ ತಾಯಂದಿರ ಮರಣ ಪ್ರಮಾಣದ ವಿವರಗಳನ್ನು ಕೆಳಗೆ ನೀಡಲಾಗಿದೆ.

ಎಮ್ ಎಮ್ ಆರ್	1997-98	2001-03
ಆಂಧ್ರ ಪ್ರದೇಶ	197	195
ಕರ್ನಾಟಕ	245	228
ಕೇರಳ	150	110
ತಮಿಳುನಾಡು	135	134
ದಕ್ಷಿಣ ಭಾರತ ಸರಾಸರಿ	187	173
ಭಾರತ	327	301

ಮೂಲ : ಸ್ಯಾಂಪಲ್ ರಿಜಿಷ್ಟ್ರೇಶನ್ ಸಿಸ್ಟಮ್: 2005

ದಕ್ಷಿಣ ಬಾರತದ ರಾಜ್ಯಗಳಲ್ಲಿ ಎಮ್ ಎಮ್ ಆರ್ 200ಕ್ಕಿಂತ ಕಡಿಮೆಯಿದೆ. ಆದರೆ ಅದು ನಮ್ಮ ರಾಜ್ಯದಲ್ಲಿ 200ಕ್ಕಿಂತ ಅಧಿಕವಿದೆ. ಇದಕ್ಕಿಂತ ಆತಂಕಕಾರಿ ಸಂಗತಿಯೆಂದರೆ ಈ ತಾಯಂದಿರ ಮರಣಗಳು ಹೆಚ್ಚಾಗಿ ಮಹಿಳೆಯರ 20 ರಿಂದ 34 ವಯೋಮಾನದಲ್ಲಿ ಸಂಭವಿಸುತ್ತಿವೆ. ಈ ಬಗೆಯ ಒಟ್ಟು ಸಾವುಗಳಲ್ಲಿ ಶೇ 70 ರಷ್ಟು ಸದರಿ ವಯೋಮಾನದಲ್ಲಿ ಸಂಭವಿಸುತ್ತವೆ. ಇದರ ಅರ್ಥವೇನೆಂದರೆ ನಮ್ಮಲ್ಲಿ ಸಂತಾನೋತ್ಪತ್ತಿ ಆರೋಗ್ಯ ವ್ಯವಸ್ಥೆಯು ಸರಿಯಾಗಿಲ್ಲ. ಸಮಸ್ಯೆಯೆಲ್ಲಿದೆಯೆಂಬುದು ಸ್ಪಷ್ಟವಾಗಿದೆ. ಆದರೂ ಮಹಿಳೆಯರು ಸಂತಾನೋತ್ಪತ್ತಿ ಆರೋಗ್ಯಕ್ಕೆ ಸಂಬಂಧಿಸಿದಂತೆ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಕರ್ನಾಟಕವು ಸಂತಾನೋತ್ಪತ್ತಿ ಆರೋಗ್ಯ ವ್ಯವಸ್ಥೆಯನ್ನು ಸುಸಂಘಟಿತಗೊಳಿಸುವುದರ ಕಡೆಗೆ ಹೆಚ್ಚು ಗಮನ ನೀಡಬೇಕಾಗಿದೆ. ಈ ಬಗ್ಗೆ ಶಾಸನಾಂಗದಲ್ಲಿ ಒತ್ತಡವನ್ನು ಉಂಟು ಮಾಡಲು ಲೋಕಸಭೆ-ವಿಧಾನಸಬೆಗಳಲ್ಲಿ ಮಹಿಳೆಯರಿಗೆ ಶೇ33 ಸ್ಥಾನ ಮೀಸಲು ಅಗತ್ಯವಿದೆ.

ಭಾಗ-2

ಮೀಸಲಾತಿ ಯಾಕೆ ಬೇಕು? ಮತ್ತು ಎಷ್ಟು ಬೇಕು?

ಮೊದಲನೆಯ ಪ್ರಶ್ನೆಗೆ ಉತ್ತರ ನೀಡುವ ಅಗತ್ಯವಿದೆಯೆಂದು ನನಗನ್ನಿಸುವುದಿಲ್ಲ. ಜನಸಂಖ್ಯೆಯಲ್ಲಿ ಸರಿಸುಮಾರು ಅರ್ಧದಷ್ಟಿರುವ ಮತ್ತು ಮತದಾರರಲ್ಲಿ ಅರ್ಧದಷ್ಟಿರುವ ಹಾಗೂ ದುಡಿಮೆಗಾರರಲ್ಲಿ ಶೇ35ರಷ್ಟಿರುವ ಮಹಿಳೆಯರಿಗೆ ನೀತಿ-ನಿರ್ಣಯದಲ್ಲಿ ಸಹಭಾಗಿಗಳಾಗಲು ಅವಕಾಶ ಕೊಡುವುದು ಪ್ರಜಾಪ್ರಭುತ್ವದ ಸಂಗತಿ ಮತ್ತು ಅದು ಮಾನವ ಹಕ್ಕಿನ ಸಂಗತಿಯಾಗಿದೆ. ಈಗಾಗಲೇ ತೋರಿಸಿರುವಂತೆ ಅಭಿವೃದ್ಧಿಯ ಎಲ್ಲ ಸೂಚಿಗಳಲ್ಲೂ ಮಹಿಳೆಯರ ಸಾಧನೆ ಪುರುಷರಿಗೆ ಎದುರಾಗಿ ಕಡಿಮೆಯಿದೆ. ಇದಕ್ಕೆ ಜೈವಿಕ ಕಾರಣಗಳನ್ನು ನೀಡುವ ಕಾಲ ಇದಲ್ಲ. ಈ ಬಗೆಯ ತಾರತಮ್ಯದ ಮೂಲದಲ್ಲಿ ಮಹಿಳೆಯರ ಬಗೆಗಿನ ಸಮಾಜದ ನಿಲುವು ಕಾರಣವಾಗಿದೆ. ಲಿಂಗ ಅಸಮಾನತೆಯೆಂಬುದು ಮೂಲಭೂತವಾಗಿ ಸಾಮಾಜಿಕ ಸಮಸ್ಯೆ. ಮಹಿಳೆಯನ್ನು ಕೇವಲ ತಾಯಿಯಾಗಿ, ಹೆಂಡತಿಯಾಗಿ, ಮಗಳಾಗಿ ಮಾತ್ರ ಪರಿಭಾವಿಸಿಕೊಳ್ಳಲಾಗುತ್ತಿದೆ. ಇದನ್ನು ತಪ್ಪೆಂದು ಹೇಳಲು ಸಾಧ್ಯವಿಲ್ಲ. ಆದರೆ ಈ ಬಗೆಯ ನಂಬಿಕೆಯಿಂದಾಗಿ ಅವರು ಸಮಾಜದಲ್ಲಿ ಕೇವಲ ಅನುಬಂಧವಾಗಿ ಬಿಟ್ಟಿದ್ದಾರೆ. ಲಿಂಗ ಸಂಬಂಧಿ ತಾರತಮ್ಯದಿಂದಾಗಿ ಮಹಿಳೆಯರು ಅಭಿವೃದ್ಧಿಯ ವ್ಯಾಪ್ತಿಯಿಂದ ಹೊರಗುಳಿದಿದ್ದಾರೆ. ಅವರ ದುಡಿಮೆಯ ಮಹತ್ವವನ್ನು ಸಮಾಜ ಮನ್ನಿಸುತ್ತಿಲ್ಲ. ಅನೇಕ ಅಧ್ಯಯನಗಳು ತೋರಿಸಿಕೊಟ್ಟಿರುವಂತೆ ದೇಶದ ಒಟ್ಟು ರಾಷ್ಟ್ರೀಯ ಉತ್ಪನ್ನ (ಜಿಎನ್‌ಪಿ)ಗೆ ಮಹಿಳೆಯರ ಕಾಣಿಕೆ ಶೇ50ಕ್ಕಿಂತ ಅಧಿಕವೆಂದು ಹೇಳಲಾಗಿದೆ. ಆದರೆ ಅದನ್ನು ನಾವು ಮನ್ನಿಸುತ್ತಿಲ್ಲ. ಪ್ರಸಿದ್ಧ ಅರ್ಥಶಾಸ್ತ್ರಜ್ಞ ಎ.ಸಿ.ಪಿಗು ಇದರ ಬಗ್ಗೆ ಚರ್ಚೆ ಮಾಡುತ್ತಾ ಒಂದು ನಿದರ್ಶನ ನೀಡುತ್ತಾನೆ. ಒಂದು ಕುಟುಂಬದಲ್ಲಿ ಅಡುಗೆ ಮಾಡುವುದಕ್ಕೆ ಒಬ್ಬ ಹೆಂಗಸನ್ನು ನೇಮಿಸಿಕೊಂಡಿರುತ್ತಾರೆ. ಇಲ್ಲಿ ಅವಳು ಅಡುಗೆಯ ಕೆಲಸದವಳಾಗಿರುವವರೆಗೆ ಅವಳ ಕೂಲಿಯು ರಾಷ್ಟ್ರದ ವರಮಾನಕ್ಕೆ ಸೇರುತ್ತದೆ. ಒಂದು ವೇಳೆ ಆ ಮನೆಯೊಡೆಯ ಅಡುಗೆ ಮಾಡುವವಳನ್ನು ಮದುವೆಯಾಗಿ ಬಿಟ್ಟರೆ, ಅಂದರೆ ಅಡುಗೆಯವಳು ಮನೆಯೊಡತಿಯಾಗಿ ಬಿಟ್ಟರೆ ಅವಳ ದುಡಿಮೆ ದುಡಿಮೆಯಾಗುವುದಿಲ್ಲ ಮತ್ತು ಅವಳಿಗೆ ಕೂಲಿ ಸಿಗುವುದಿಲ್ಲ. ಇದರಿಂದಾಗಿ ರಾಷ್ಟ್ರದ ವರಮಾನ ಕಡಿಮೆಯಾಗುತ್ತದೆ. ಇದು ಒಂದು ಕಟಕಿ. ಇದರಲ್ಲಿ ಸತ್ಯಾಂಶವಿದೆ. ಮಹಿಳೆಯರ ಮನೆವಾರ್ತೆ ದುಡಿಮೆಯನ್ನು ದುಡಿಮೆಯೆಂದು ಗಣನೆ ಮಾಡಿದರೆ ಅವರ ದುಡಿಮೆ ಸಹಭಾಗಿತ್ವ ಪ್ರಮಾಣ ಈಗಿರುವ ಶೇ35 ಕ್ಕೆ ಪ್ರತಿಯಾಗಿ ಶೇ 50 ಕ್ಕಿಂತ ಅಧಿಕವಾಗುತ್ತದೆ. ಮಹಿಳೆಯರ ದುಡಿಮೆಯನ್ನು ಪರಿಭಾವಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಅನೇಕ ಸೈದ್ಧಾಂತಿಕ ಸಮಸ್ಯೆಗಳಿವೆ.

ಈ ಬಗೆಯ ವೈರುಧ್ಯಗಳನ್ನು ಸರಿಪಡಿಸ ಬೇಕಾದರೆ ನಾವು ದೇಶದ ಮತ್ತು ರಾಜ್ಯದ ನೀತಿ-ನಿರ್ಣಯದಲ್ಲಿ ಮಹಿಳೆಯರು ಸಹಭಾಗಿಗಳಾಗಲು ಅವಕಾಶ ನೀಡಬೇಕು. ಮಹಿಳೆಯರ ದುಡಿಮೆ, ಅವರ ಹಿತಾಸಕ್ತಿಗಳು, ಅವರ ಅಗತ್ಯಗಳು ಮುಂತಾದ ಸಂಗತಿಗಳನ್ನು ಮಹಿಳೆಯರ ನೆಲೆಯಿಂದ ಪರಿಭಾವಿಸಿಕೊಳ್ಳಬೇಕು. ಅಭಿವೃದ್ಧಿ ಮತ್ತು ರಾಜಕಾರಣ ಜನರನ್ನು ಒಳಗೊಳ್ಳುವಂತಾಗ ಬೇಕಾದರೆ ಮಹಿಳೆಯರಿಗೆ ಶಾಸನಸಭೆಗಳಲ್ಲಿ ಕನಿಷ್ಠ

ಶೇ.33 ಮೀಸಲಾತಿ ನೀಡಬೇಕು. ಇಲ್ಲಿ ಪ್ರಶ್ನೆಯೊಂದು ನಮಗೆದುರಾಗಬಹುದು. ಜನಸಂಖ್ಯೆಯಲ್ಲಿ ಸರಿಸುಮಾರು ಶೇ50ರಷ್ಟಿರುವ ಮಹಿಳೆಯರಿಗೆ ಮೀಸಲಾತಿ ಯಾಕೆ ಶೇ.33 ವಾಸ್ತವವಾಗಿ ಅದು ಶೇ50 ರಷ್ಟಿರಬೇಕು. ಈ ಶೇ33 ಅನ್ನುವುದು ಹೇಗೆ ಬಂತು? ಇದಕ್ಕೆ ಬಹು ಮುಖ್ಯ ಕಾರಣವೊಂದನ್ನು ನಾವು ವಿವರಿಸಬಹುದು.

ಶಾಸನಸಭೆಗಳಲ್ಲಿ ಮಹಿಳೆಯರು ನೀತಿ-ನಿರ್ಣಯಗಳಲ್ಲಿ ಭಾಗವಹಿಸಿ ನಿರ್ಣಾಯಕ ಪ್ರಭಾವ ಬೀರಬೇಕೆಂದರೆ ಅಲ್ಲಿ ಕನಿಷ್ಟ ಶೇ33ರಷ್ಟು ಪ್ರಾತಿನಿಧ್ಯವಿರಬೇಕೆಂದು ವಿಶ್ವಸಂಸ್ಥೆಮಟ್ಟದಲ್ಲಿನ ಅಧ್ಯಯನಗಳಿಂದ ತಿಳಿದು ಬಂದಿದೆ. ಯುಎನ್‌ಡಿಪಿಯು 1995ರಲ್ಲಿ ಪ್ರಕಟಿಸಿದ ಮಾನವ ಅಭಿವೃದ್ಧಿ 'ವರದಿಯ ವಸ್ತುವಿಷಯ ಲಿಂಗ ಸಂಬಂಧಗಳು ಮತ್ತು ಅಭಿವೃದ್ಧಿ' ಈ ವರದಿಯಲ್ಲಿ ಮಹಿಳೆಯರ ಮೀಸಲಾತಿಯು ಕನಿಷ್ಟ ಶೇ33 ಯಾಕಿರಬೇಕೆಂದುಕ್ಕೆ ಸಂಬಂಧಿಸಿದಂತೆ ಸಾಕಷ್ಟು ಚರ್ಚೆ ಮಾಡಲಾಗಿದೆ. ಮಹಿಳೆಯರ ಸ್ಥಾನಮಾನ ಕುರಿತಂತೆ ಯುಎನ್‌ಡಿಪಿಯು ನೇಮಿಸಿದ್ದ ಸಮಿತಿಯೊಂದು 1990ರಲ್ಲಿ ಸಲಹೆ ಮಾಡಿದಂತೆ ರಾಷ್ಟ್ರೀಯ ಮಟ್ಟದಲ್ಲಿ ನೀತಿ-ನಿರ್ಣಯ ತೆಗೆದುಕೊಳ್ಳುವ ಸಂದರ್ಭದಲ್ಲಿ ಮಹಿಳೆಯರ ಹಿತಾಸಕ್ತಿಗಳನ್ನು ಕಾಪಾಡುವಂತೆ ಪ್ರಭಾವ ಬೀರಲು ಕನಿಷ್ಟ ಶೇ30ರಷ್ಟು ಮೀಸಲಾತಿ ಬೇಕು ಎಂಬುದಾಗಿತ್ತು.



ಮೊದಲನೆಯ ಹಂತವಾಗಿ ಮೀಸಲಾತಿಯು ಶೇ 33 ರಷ್ಟಿರಬೇಕು. ಆದರೆ ಅದು ಗರಿಷ್ಟವಲ್ಲ. ಗರಿಷ್ಟ ಮೀಸಲಾತಿ ಶೇ50. ಮುಂದೆ ಮಹಿಳೆಯರ ಮೀಸಲಾತಿಯನ್ನು ಶೇ33 ರಿಂದ ಅದನ್ನು ಶೇ 50ಕ್ಕೇರಿಸುವುದು ಅನಿವಾರ್ಯವಾಗುತ್ತದೆ. ಈ ಮೀಸಲಾತಿಯೆಂಬುದು ಮಹಿಳೆಯರ ಹಕ್ಕೇ ವಿನಾ ಪುರುಷರು ಅಥವಾ ಸರ್ಕಾರ/ಸಮಾಜ ನೀಡುವ ಕಾಣಿಕೆಯೆಂದು ಅದನ್ನು ಪರಿಭಾವಿಸಬೇಕಾಗಿಲ್ಲ.

ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಿಡುವ ಶೇ33 ರಲ್ಲಿ ಹಿಂದುಳಿದ ವರ್ಗಗಳಿಗೆ, ಅಲ್ಪಸಂಖ್ಯಾತರರಿಗೆ ಮತ್ತು ಪ.ಜಾ ಹಾಗೂ ಪ.ಪಂ.ಗಳಿಗೆ ಸೇರಿದ ಮಹಿಳೆಯರಿಗೂ ಒಳಮೀಸಲಾತಿ ನೀಡಬೇಕೆಂಬುದು ಈ ಮಸೂದೆಯನ್ನು ವಿರೋಧಿಸುತ್ತಿರುವವರ ಒತ್ತಾಯವಾಗಿದೆ. ಹೀಗೆ ಒಳಮೀಸಲಾತಿಯನ್ನು ಒತ್ತಾಯಿಸುತ್ತಿರುವ ಪಕ್ಷಗಳು ತಾವಾಗಿಯೇ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳಿಗೆ ಮತ್ತು ಪ.ಜಾ ಮತ್ತು ಪ.ಪಂ.ಗಳಿಗೆ ಸೇರಿದ ಮಹಿಳೆಯರಿಗೆ ತಮ್ಮ ಪಕ್ಷದಲ್ಲಿ, ಅಲ್ಲಿನ ಚುನಾವಣೆಗಳಲ್ಲಿ ಅವಕಾಶವನ್ನೇನು ನೀಡುತ್ತಿಲ್ಲ. ಆದರೆ ಮಹಿಳೆಯರಿಗೆ ಒಳಮೀಸಲಾತಿ ಬೇಡಿಕೆಯನ್ನು ಮುಂದು ಮಾಡಿಕೊಂಡು ಅವು ಮಸೂದೆಯನ್ನು ವಿರೋಧಿಸುತ್ತಿವೆ. ಇದು ಸರಿಯಲ್ಲ. ಪ್ರತಿಯೊಂದು ಪಕ್ಷವೂ ಆಷಾಡಭೂತಿತನವನ್ನು ಬಿಡಬೇಕು. ಜನರಿಗೆ ಅವುಗಳ ಆಷಾಡಭೂತಿತನ ಅರ್ಥವಾಗುತ್ತದೆ.

ಪಂಚಾಯತಿರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಶೇ33 ಮೀಸಲಾತಿ ನೀಡಲಾಗಿದೆ ಮತ್ತು ಅದರಲ್ಲಿ ಒಳಮೀಸಲಾತಿಯನ್ನೂ ನೀಡಲಾಗಿದೆ. ಈಗ ಕರ್ನಾಟಕದಲ್ಲಿ ಈ ಮಹಿಳಾ ಮೀಸಲಾತಿಯನ್ನು ಶೇ50ಕ್ಕೇರಿಸುವ ಪ್ರಯತ್ನ ನಡೆದಿದೆ. ಇಲ್ಲಿ ಇದು ಸಾಧ್ಯವಾಗುವುದಾದರೆ ಉನ್ನತ ಮಟ್ಟದ ರಾಜಕೀಯ ಸಂಸ್ಥೆಗಳಲ್ಲಿ ಯಾಕೆ ಸಾಧ್ಯವಿಲ್ಲ?. ಈ ಬಗೆಯ ಬದಲಾವಣೆಗೆ ನಾವು ಮಹಿಳೆಯರನ್ನು ಪರಿಭಾವಿಸಿಕೊಳ್ಳುವ ಪರಿಯು ಬದಲಾಗಬೇಕಾಗುತ್ತದೆ. ಅವಳನ್ನು ಒಬ್ಬ ವ್ಯಕ್ತಿಯಾಗಿ, ನಾಗರಿಕಳಾಗಿ, ತನ್ನ ಬದುಕನ್ನು ಕಟ್ಟಿಕೊಳ್ಳಲು ಅವಳಿಗೆ ಅಧಿಕಾರವಿದೆ ಎಂಬ ಸಂಗತಿಯನ್ನು ನಾವು ಮೊದಲು ಒಪ್ಪಿಕೊಳ್ಳಬೇಕಾಗುತ್ತದೆ. ಮಹಿಳೆಯನ್ನು ಜೈವಿಕ ಘಟಕವಾಗಿ ಪರಿಭಾವಿಸಿಕೊಳ್ಳುವುದಕ್ಕೆ ಪ್ರತಿಯಾಗಿ ಸಾಮಾಜಿಕ ಘಟಕವಾಗಿ ಪರಿಭಾವಿಸಿ ಕೊಳ್ಳುವ ಅಗತ್ಯವಿದೆ.

ಲೋಕಸಭೆಯಲ್ಲಿ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ33ರಷ್ಟು ಸ್ಥಾನಗಳನ್ನು ಮೀಸಲಿಟ್ಟು ಬಿಟ್ಟರೆ ಅವರ ಸಮಸ್ಯೆಗಳು ಮತ್ತು ಲಿಂಗ ಅಸಮಾನತೆ ಎಂಬ ಸಮಸ್ಯೆ ಪರಿಹಾರವಾಗಿ ಬಿಡುವುದಿಲ್ಲ. ಈ ದಿಶೆಯಲ್ಲಿ ಮಹಿಳಾ ಮೀಸಲಾತಿಯೆಂಬುದು ಒಂದು ಪ್ರಯತ್ನ. ಸಮಾಜದಲ್ಲಿ ಬದಲಾವಣೆಯೆಂಬುದು ರಾತ್ರೋರಾತ್ರಿ ನಡೆದು ಬಿಡುವುದಿಲ್ಲ. ಜನರು ಬದಲಾವಣೆಗಳು ಹಾಗೆ ನಡೆಯಬೇಕೆಂದು ಬಯಸುತ್ತಾರೆ. ಆದರೆ ಅದು ಸಾಧ್ಯವಿಲ್ಲ. ಆದರೆ ಖಚಿತವಾಗಿ ಈ ಮೀಸಲಾತಿಯಿಂದಾಗಿ ಸಮಾಜದಲ್ಲಿ ಅನೇಕ ಉಪಯುಕ್ತವಾದ ಬದಲಾವಣೆಗಳನ್ನು ಕಾಣಬಹುದಾಗಿದೆ.

ಮೊನ್ನೆ ಮೊನ್ನೆ ನಡೆದ ಮಹಿಳಾ ಮೀಸಲಾತಿ ಮಸೂದೆಯ ಅನುಮೋದನೆಯ(ರಾಜ್ಯಸಭೆ) ಬಗ್ಗೆ ನಾವು ಗಂಭೀರವಾಗಿ ಯೋಚಿಸಬೇಕಾಗಿದೆ. ಅದನ್ನು ಶಾಸನಸಭೆಗಳಲ್ಲಿ ಅನುಮೋದಿಸುವುದು ಬೇರೆ. ಅದನ್ನು ಲಿಂಗ ಸಮಾನತೆಯನ್ನು ಸಾಧಿಸುವ ಒಂದು ಸಾಧನವಾಗಿ ಪರಿಭಾವಿಸಿಕೊಳ್ಳುವುದು ಬೇರೆ. ಈ ಮಸೂದೆಯು ಲೋಕಸಭೆಯಲ್ಲೂ ಅನುಮೋದನೆಯಾಗಲೆಂದು ಹಾರೈಸೋಣ.

●


ಮಹಿಳಾ ವಿಮೋಚನೆ : ನಡೆದು ಬಂದ ದಾರಿ ಭವಿಷ್ಯದ ಗೊತ್ತು ಗುರಿ

ನೀಲಾ .ಕೆ

ಯುಗ ಯುಗಾಂತರಗಳಲ್ಲಿ ಮಹಿಳೆ ಸಾಗಿಬಂದ ಹಾದಿಯಲ್ಲಿ ಕಾಣುವ ಹೆಜ್ಜೆ ಗುರುತುಗಳೇನು? ಮಹಿಳೆಯು ಮುಂದೆ ಸಾಗಬೇಕಾದ ಹಾದಿ ಯಾವುದು?

ಮನುಜರ ಬೆಳವಣಿಗೆಯ ಆರಂಭದ ಘಟ್ಟ - ಮಹಿಳೆಯನ್ನು ಘನತೆ ಗೌರವದಿಂದ ಕಾಣುವ ಕಾಲವೇ ಅದಾಗಿತ್ತು. ಗುಂಪಿಗೆ ಹೊಸ ಜೀವ ಕೊಡುವ ಅವಳು ಶಕ್ತಿಯ ಸಂಕೇತವೇ ಆಗಿದ್ದಳು. ಆದ್ದರಿಂದಲೇ ಬೇಟೆಯ ತಂಡಕ್ಕೆ ಅವಳು ನಾಯಕಿಯಾಗಿದ್ದಳು.

ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ
ಗಂಡು ಗಂಡಾದಡೆ ಹೆಣ್ಣಿನ ಸೂತಕ
ಮನದ ಸೂತಕ ಹಿಂಗಿದಡೆ ತನುವಿನ ಸೂತಕಕ್ಕೆ ತೆರಹುಂಟೆ?
ಮುನ್ನಿಲ್ಲದ ಸೂತಕಕ್ಕೆ ಜಗ ಮರುಳಾಯಿತ್ತು ಚನ್ನಮಲ್ಲಿಕಾರ್ಜುನ.



ಹನ್ನೆರಡನೆ ಶತಮಾನದಲ್ಲಿ ಅಕ್ಕಮಹಾದೇವಿಯು ಸಿಡಿದೆದ್ದ ಪರಿ ಇದು. ಹೆಣ್ಣು-ಗಂಡೆಂಬ ಉಭಯದ ಭೇದ ಅಳಿದು ಸಮತೆಯ ನಾಡು ಕಟ್ಟುವ ಕನಸು ಹೊತ್ತ ಶರಣ ಸಂಗಾತಿಗಳ ಅಂತರಂಗದ ಮಾತುಗಳು ಇವು. ಹಲವು ವೈಚಾರಿಕ ಚಿಂತನ ಮಂಥನ ನಡೆದ ಕಾಲ ಘಟ್ಟವದು. ಮಹಿಳೆ ಕೀಳಲ್ಲ, ಮಾಯೆಲ್ಲ ಎಂಬುದನ್ನು ದಾಸಿಮಯ್ಯ ಹೀಗೆ ಹೇಳುತ್ತಾನೆ;

ಮೊಲೆ ಮೂಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ಒಳಗೆ ಸುಳಿವಾತ್ಮ ಹೆಣ್ಣು ಅಲ್ಲ ಗಂಡೂ ಅಲ್ಲ ರಾಮನಾಥ


ಹೆಣ್ಣು, ಗಂಡು ಹೀಗೆ ಎಲ್ಲ ಜೀವರಾಶಿಗಳು ಸೃಷ್ಟಿಯ ವೈವಿಧ್ಯತೆ. ಮೇಲು ಕೀಳು ಎಂಬುದು ಅಪ್ಪಟ ಸುಳ್ಳು ಎಂದು ಸಾರಲು ಅನೇಕ ವರ್ಷಗಳಿಂದ ನಿರಂತರ ಸಂಘರ್ಷ ನಡೆಯುತ್ತಿದೆ. ಯಾಕೆಂದರೆ ಹೆಣ್ಣನ್ನು ಕೀಳಾಗಿ ಕಾಣುತ್ತಿರುವುದರಿಂದ. ಹೆಣ್ಣಿನ ಹುಟ್ಟನ್ನೇ ತಿರಸ್ಕರಿಸುತ್ತಿರುವುದರಿಂದ. ಅವಳ ಅಸ್ತಿತ್ವ-ಅಸ್ಮಿತತೆಯನ್ನು ಹೊಸಕಿ ಹಾಕುತ್ತಿರುವುದರಿಂದ. ಗಂಡಿಗಿಂತಲೂ ಮೂರು ಪಟ್ಟು ಹೆಚ್ಚು ದುಡಿಮೆ ಮಾಡಿದ ತರುವಾಯವೂ ಹೆಣ್ಣೆಂಬ ಕಾರಣಕ್ಕೆ ಅಪಮಾನಗೊಳ್ಳಬೇಕಾದ ಪರಿಸ್ಥಿತಿ ಇರುವುದರಿಂದ. ಅವಳ ಮೇಲೆ ಅಮಾನವೀಯ ದೌರ್ಜನ್ಯ ನಡೆಯುತ್ತಿರುವುದರಿಂದ. ಎಲ್ಲ ಹಕ್ಕುಗಳಿಂದ ಅವಳನ್ನು ವಂಚಿತಳನ್ನಾಗಿ ಮಾಡುತ್ತಿರುವುದರಿಂದ.

ಹಾಗಾದರೆ ಎಲ್ಲಿಂದ ಆರಂಭವಾಯ್ತು ಅವಳ ಮೇಲೆ ಧಾಳಿ?

ಮನುಜರ ಬೆಳವಣಿಗೆಯ ಆರಂಭದ ಘಟ್ಟ - ಮಹಿಳೆಯನ್ನು ಘನತೆ ಗೌರವದಿಂದ ಕಾಣುವ ಕಾಲವೇ ಅದಾಗಿತ್ತು. ಗುಂಪಿಗೆ ಹೊಸ ಜೀವ ಕೊಡುವ ಅವಳು ಶಕ್ತಿಯ ಸಂಕೇತವೇ ಆಗಿದ್ದಳು. ಆದ್ದರಿಂದಲೇ ಬೇಟೆಯ ತಂಡಕ್ಕೆ ಅವಳು ನಾಯಕಿಯಾಗಿದ್ದಳು. ಕ್ರಮೇಣ ಪಶು ಸಂಗೋಪನೆ ಸುರುವಾಯ್ತು. ಜನರ ಬೇಡಿಕೆಗಳು ತುಂಬ ಕಡಿಮೆ ಇದ್ದವು. ಆಹಾರ ಮಾತ್ರವೇ ಪ್ರಮುಖ ಅವಶ್ಯಕವಾದದ್ದಾಗಿತ್ತು. ಅಷ್ಟರವರೆಗೆ ಮಹಿಳೆ ಕೃಷಿ ಕಂಡುಹಿಡಿದು ಕೃಷಿಯಲ್ಲಿ ಪ್ರಧಾನ ಪಾತ್ರ ನಿರ್ವಹಿಸುತ್ತಿದ್ದಳು. ಹೆಚ್ಚು ಕಡಿಮೆ ಕೃಷಿ ಮತ್ತು ಪಶು ಸಂಗೋಪನೆ ಏಕಕಾಲಕ್ಕೆ ನಿಭಾಯಿಸಬೇಕಿತ್ತು. ಕೆಲಸದ ಹೊರೆ ನಿರ್ವಹಿಸಲು ಶ್ರಮಿಕರು ಬೇಕಿತ್ತು. ಸಂಪತ್ತಿನ ಕ್ರೋಢೀಕರಣವೂ ಹೆಚ್ಚುತ್ತಿತ್ತು. ವಿವಿಧ ಬುಡಕಟ್ಟು ತಂಡಗಳು ಗುಂಪುಗಳ ನಡುವೆ ಯುದ್ಧಗಳು ನಡೆಯುತ್ತಿದ್ದವು. ಯುದ್ಧದಲ್ಲಿ ಸೆರೆ ಸಿಕ್ಕವರನ್ನು ಗುಲಾಮ ರನ್ನಾಗಿಸಲಾಯಿತು. ದುಡಿಮೆಗೆ ಹಚ್ಚಲಾಯಿತು. ಹೀಗೆ ಸಂಪತ್ತಿನ ಮಿಗುತಾಯದಿಂದಾಗಿ ಹುಟ್ಟಿಕೊಂಡಿದ್ದು ಶ್ರಮ ವಿಭಜನೆ. ಇದರಿಂದ ಸಮಾಜದಲ್ಲಿ ಪ್ರಪ್ರಥಮ ಬಾರಿಗೆ ಮಹಾಬಿರುಕು ಕಾಣಿಸಿತು. ಮತ್ತು ಸಮಾಜವು ಎರಡು ವರ್ಗಗಳಾಗಿ ವಿಭಜನೆಗೊಂಡಿತು. ಹೀಗೆ ವಿಭಜನೆಗೊಂಡ ಸಮಾಜದಲ್ಲಿ ಶೋಷಕರು ಮತ್ತು ಶೋಷಿತರು; ಗುಲಾಮರು ಮತ್ತು ಯಜಮಾನರು ಎಂಬ ವ್ಯವಸ್ಥೆ ಹುಟ್ಟಿಕೊಂಡಿತು. ಸಮಾಜ ವಿಜ್ಞಾನಿ ಏಂಗೆಲ್ಸ್ ತುಂಬಾ ನೋವಿನಿಂದ ಹೀಗೆ ದಾಖಲಿಸಿದ್ದಾನೆ. 'ಮಹಿಳೆಯರನ್ನು ಮಾತೃ ಪ್ರಧಾನ ಸ್ಥಾನದಿಂದ ಉಚ್ಚಾಟನೆ ಮಾಡಿದ್ದುದೇ ಸ್ತ್ರೀ ಕುಲದ ಜಾಗತಿಕ ಸೋಲು ಎಂಬಂತಾಯ್ತು. ಮನೆಯಲ್ಲಿಯೂ ಹೊರಗೂ ಪುರುಷನೇ ಯಜಮಾನನಾದ. ಮಹಿಳೆಯನ್ನು ಪುರುಷನ ಅಡಿಯಾಳಾಗಿಸಲಾಯಿತು. ಮಕ್ಕಳನ್ನು ಉತ್ಪಾದಿಸುವ ಯಂತ್ರವಾಗಿಸಲಾಯಿತು.'

ಈ ರೀತಿಯಾಗಿ ಮಹಿಳೆ ಸಾಮಾಜಿಕ ಉತ್ಪಾದನಾ ಸಂಬಂಧದಿಂದ ದೂರಾದಳು. ಗೃಹಬಂಧಿಯಾದಳು. ಸಾಮಾಜಿಕ ಉಳಿತಾಯದ ಆಸ್ತಿಯು

ಸಾಮಾಜಿಕ ಸ್ವತ್ತಾಗಿ ಉಳಿಯಬೇಕಾಗಿತ್ತು. ಆದರೆ ಸಾಮಾಜಿಕ ಉಳಿತಾಯದ ಸಂಪತ್ತನ್ನು ಖಾಸಗಿ ಸ್ವತ್ತಾಗಿಸಿಕೊಳ್ಳಲಾಯಿತು ಮತ್ತು ಆ ಸ್ವತ್ತಿನ ಒಡೆತನ ಪುರುಷ ಹೊಂದಿದನು. ಕುಟುಂಬವು ಸಹ ಖಾಸಗಿ ಆಸ್ತಿಯ ಮೇಲೆ ನೆಲೆ ನಿಲ್ಲುವಂತಾಯ್ತು. ಗಂಡ-ಹೆಂಡತಿಯರ ನಡುವಿನ ಸಂಬಂಧವು ಆಳು ಮತ್ತು ಮಾಲಿಕನ ನಡುವಿನ ಸಂಬಂಧವಾಗಿ ಪರಿವರ್ತನವಾಯ್ತು. ಈ ವರ್ಗಾಧಾರಿತ ಸಮಾಜ ಜನ್ಮಿಸಿದಾಗಿನಿಂದ ಇಂದಿನವರೆಗೆ ಮಹಿಳೆಯನ್ನು ಅವನತಿಯತ್ತ ತಳ್ಳಲಾಗುತ್ತಿದೆ. ಪ್ರಾಚೀನ ಗುಲಾಮಗಿರಿ, ಊಳಿಗಮಾನ್ಯ ಹಾಗೂ ಬಂಡವಾಳಶಾಹಿ ವ್ಯವಸ್ಥೆಯ ಸಮಾಜದಲ್ಲಿ ಅವಳು ನಿರಂತರ ತುಳಿತಕ್ಕೆ ಬಲಿಯಾಗುತ್ತಿದ್ದಾಳೆ. ಸಮಾಜದಲ್ಲಿ ಹಿಡಿತ ಹೊಂದಿದ ಭೂಮಾಲಕ ಬಂಡವಾಳಶಾಹಿ ವ್ಯವಸ್ಥೆಯು ಮಹಿಳಾ ವಿರೋಧಿ ನೀತಿ ನಿಯಮಗಳನ್ನು ಸಮಾಜದ ಮೇಲೆ ಹೇರಿತು. ಮತ್ತು ಕಾಲ ಕ್ರಮೇಣ ಮಹಿಳೆ ಒಪ್ಪಿಕೊಳ್ಳುವಂತಹ ಅನಿವಾರ್ಯತೆ ನಿರ್ಮಿಸಿತು. ಭಾರತದ ಸಂದರ್ಭದಲ್ಲಂತೂ ಮಹಿಳೆಯು ದುಪ್ಪಟ್ಟು ಶೋಷಣೆಗೆ ಒಳಗಾದಳು. ಇಲ್ಲಿಯ ಚಾತುರ್ವರ್ಣ ಪದ್ಧತಿಯು ಅವಳನ್ನು ಇನ್ನಿಲ್ಲದಂತೆ ಕ್ರೌರ್ಯದಿಂದ ನಡೆಸಿಕೊಂಡಿದೆ. ಜಾತಿ, ವರ್ಗ, ವರ್ಣ,ಲಿಂಗ ತಾರತಮ್ಯಗಳ ಎಲ್ಲ ಕವಲೊಳಗೂ ಅವಳನ್ನು ಮತ್ತೆ ಮತ್ತೆ ಹಿಂಡಿ ಹಿಪ್ಪೆ ಮಾಡಲಾಗಿದೆ. ತುಳಿದು ಹೊಸಕಲು ಹವಣಿಸಿದೆ.




ವಿಮೋಚನೆ ಹಾದಿಯಲ್ಲಿ...

ಹಾಗಾದರೆ ಮಹಿಳಾ ವಿಮೋಚನೆಯ ದಿಕ್ಕಿನತ್ತ ಪ್ರಯತ್ನಗಳು ನಡೆಯಲಿಲ್ಲವೇ? ಜಗತ್ತಿನಾದ್ಯಂತ ಇಂತಹ ಪ್ರಯತ್ನಗಳು ನಡೆದಿವೆ. ಸಮಸ್ಯೆಯ ಮೂಲವನ್ನು ಕೆದಕಿ-ಬೆದಕಿ ನಡೆಸಿದ ಹೋರಾಟಗಳು ಒಂದೆಡೆಯಾದರೆ ವಿಷಯಾಧಾರಿತ ಚಳುವಳಿಗಳು ಅಲ್ಲಲ್ಲಿ ನಡೆದಿವೆ. ಮಹಿಳಾ ವಿಮೋಚನೆ ಎಂಬುದು ಜಾಗತಿಕ ಮಟ್ಟದ ದುಡಿಯುವ ವರ್ಗದ ವಿಮೋಚನೆಯೊಂದಿಗೆ ತಳುಕು ಹಾಕಿಕೊಂಡಿರುವುದರಿಂದ ಒಂದೆಡೆ ದುಡಿಯುವ ವರ್ಗದ ಚಳುವಳಿ ಸಂಘಟಿಸುತ್ತಲೇ ಇನ್ನೊಂದೆಡೆ ಅದೇ ಸಮಯದಲ್ಲಿ ಮಹಿಳೆಯ ಮೇಲೆ ನಡೆಯುತ್ತಿರುವ ದೌರ್ಜನ್ಯ ತಾರತಮ್ಯ ಅಸಮಾನತೆಗಳ ವಿರುದ್ಧ ಸಮರಧೀರ ಹೋರಾಟ ಅಣಿನೆರೆಸಬೇಕಾಗುತ್ತದೆ.

ಈ ದಿಕ್ಕಿನಲ್ಲಿ ಜಾಗತಿಕ ಮಟ್ಟದಲ್ಲಿ ಮಹಿಳಾ ಹಕ್ಕುಗಳಿಗಾಗಿ ಹೋರಾಟಗಳು ನಡೆದಿವೆ. ಶ್ರಮಿಕ ವರ್ಗದ ಚಳುವಳಿಗಳು ಬೆಳೆದು ಬಂದಲ್ಲಿ ಮಹಿಳಾ ಪ್ರಶ್ನೆಗಳಿಗಾಗಿ ಚಿಂತನೆ ಮತ್ತು ಚಳುವಳಿ ನಡೆದಿವೆ. ಮತ್ತು ಮಹಿಳೆಯರು ಸಹ ಅಂತಹ ಆಂದೋಲನಗಳಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡಿದ್ದಾರೆ. ಫ್ರಾನ್ಸ್, ಇಂಗ್ಲೆಂಡ್, ಜರ್ಮನಿ ಮತ್ತಿತರ ದೇಶಗಳ ಟ್ರೇಡ್ ಯುನಿಯನ್‌ಗಳಲ್ಲಿ ಮಹಿಳೆಯರು ಭಾಗವಹಿಸತೊಡಗಿದರು. ಲಿಯಾನ್ಸ್‌ನಲ್ಲಿಯ ರೇಶ್ಮೆ ಫ್ಯಾಕ್ಟರಿಯಲ್ಲಿ ದುಡಿಯುತ್ತಿರುವ ಎಂಟು ಸಾವಿರ ಮಹಿಳೆಯರು ಮುಷ್ಕರ ಸಾರಿದರು. ಬಟ್ಟೆ ಗಿರಣಿಯಲ್ಲಿ ಕೆಲಸ ಮಾಡುವವರು ಮುನ್ನುಗ್ಗಿ ಕಾರ್ಮಿಕ ವರ್ಗದ ಚಳುವಳಿಯಲ್ಲಿ ತೊಡಗಿದರು. 1871 ರ ಪ್ಯಾರಿಸ್ ಕಮ್ಯೂನ್ ಒಂದು ಚಾರಿತ್ರಿಕ ಆಂದೋಲನ. ಮನುಕುಲ ಇತಿಹಾಸದಲ್ಲಿ ಪ್ರಪ್ರಥಮ ಬಾರಿಗೆ ಶೋಷಕ ವರ್ಗ-ಕಾರ್ಮಿಕ ವರ್ಗವು ವ್ಯವಸ್ಥೆಯ ವಿರುದ್ಧ ಸಿಡಿದೆದ್ದು ಅಧಿಕಾರವನ್ನು ಹಿಡಿದ ಒಂದು ಕ್ರಾಂತಿ. ಈ ಕ್ರಾಂತಿಯನ್ನು ದಕ್ಕಿಸಿಕೊಳ್ಳುವುದು ಕಾರ್ಮಿಕ ವರ್ಗಕ್ಕೆ ಸಾಧ್ಯವಾಗಲಿಲ್ಲವಾದರೂ ಈ ಮಹಾನ್ ಕ್ರಾಂತಿಯಲ್ಲಿ ಮಹಿಳೆಯರು, ಮಹಿಳಾ ಕಾರ್ಮಿಕ ವರ್ಗ ವಹಿಸಿದ ಪಾತ್ರವನ್ನು ಮಾತ್ರ ಮರೆಯುವಂತಿಲ್ಲ. ಕ್ರಾಂತಿ ಬಾವುಟ ಎತ್ತಿ ಆ ಮಹಿಳೆಯರು ಅನ್ಯಾಯದ ವಿರುದ್ಧ ರಣಚಂಡಿಗಳಾಗಿ ಹೋರಾಡಿದರು. ಅಷ್ಟೇ ಸಂತೋಷದಿಂದ ಗಲ್ಲುಗಂಬದೆಡೆಗೆ ಸಾಗಿ ವೀರಚರಿತೆ ದಾಖಲಿಸಿದರು. ಅದಕ್ಕೂ ಮುನ್ನ ಫ್ರಾನ್ಸಿನ ಕ್ರಾಂತಿಯಂತೂ ಇನ್ನೂ ಅಪ್ರತಿಮವಾದದ್ದು. 1792ರಲ್ಲಿ ಮಾನವ ಹಕ್ಕುಗಳ ಚಾರ್ಟರ್ ತಯಾರಿಸಿದಾಗ ಅಲ್ಲಿಯ ಮಹಿಳೆಯರು ಅನುಪಮ ಧೈರ್ಯದಿಂದ ಸವಾಲೆಸೆದರು; 'ಮಹಿಳೆಯರು ಗಲ್ಲುಗಂಬಕ್ಕೆ ಹೋಗಿ ನೇಣೇರುವ ಹಕ್ಕು ಹೊಂದಿರುವುದಾದರೆ, ಯಾಕೆ ಅವರಿಗೆ ಸಂಸತ್ತಿಗೆ ಹೋಗುವ ಹಕ್ಕು ಇರುವುದಿಲ್ಲ?' ಎಂದು ಪ್ರಶ್ನಿಸಿದರು. ಇದೇ ವೇಳೆಗೆ ಜರ್ಮನಿಯ ಕ್ಲಾರಾ ಜಟ್ಕಿನ್ ಹೋರಾಟದ ಬಾವುಟವನ್ನು ಎತ್ತಿ ಹಿಡಿದಳು. ಸ್ತ್ರೀ ಪುರುಷರಿಬ್ಬರಿಗೂ ಸಮಾನ ಹಕ್ಕುಗಳ ಪ್ರಶ್ನೆಯನ್ನೆತ್ತಿದಳು. ಅನಂತರ ಅಂತರಾಷ್ಟ್ರ ಮಟ್ಟದ ಸಮ್ಮೇಳನಗಳು ನಡೆದವು. ಹದಿನೈದು ದೇಶಗಳ 59 ಮಹಿಳೆಯರಿಂದ ಕೂಡಿದ ಮಹಿಳಾ ಬ್ಯೂರೋ ಒಂದನ್ನು ರಚಿಸಲಾಯಿತು. ಮಹಿಳಾ ಮತದಾನದ ಹಕ್ಕಿನ ದನಿ ಎತ್ತಲಾಯಿತು. ಅಮೇರಿಕದ ನ್ಯೂಯಾರ್ಕ್‌ನಲ್ಲಿ 1908 ಮಾರ್ಚ್ 8 ರಂದು ಸಿದ್ಧ ಉಡುಪು ತಯಾರಕ ಮಹಿಳೆಯರು ನಡೆಸಿದ ಹೋರಾಟವಂತೂ ಧೀರೋದಾತ್ತವಾದದ್ದು. ಮತದಾನದ ಹಕ್ಕಿನೊಂದಿಗೆ ಇತರ ಬೇಡಿಕೆಗಳನ್ನಿಟ್ಟು ನಡೆಸಿದ ಹೋರಾಟವದು. ಜಗದ್ವಿಖ್ಯಾತ ರಷ್ಯಾ ಅಕ್ಟೋಬರ್ ಕ್ರಾಂತಿಯಲ್ಲಿ ಜಾರನ ನಿರಂಕುಶ ಪ್ರಭುತ್ವದ ವಿರುದ್ಧ ಮಹಿಳೆಯರು ರಾಜಿರಹಿತ ಹೋರಾಟಕ್ಕಿಳಿದರು. ಮೊದಲನೇ ಮಹಾಯುದ್ಧದ ಹೊತ್ತಿನಲ್ಲಿ ಸಾಮ್ರಾಜ್ಯಶಾಹಿಯ 'ಸಂಗ್ರಾಮ ಸನ್ನಿ'ಯನ್ನು ಎದುರಿಸಲು ಬ್ರಿಟನ್, ಜರ್ಮನ್, ಫ್ರಾನ್ಸ್, ಇಟಲಿ, ಪೋಲ್ಯಾಂಡ್, ರಷ್ಯಾ, ಹಾಲೆಂಡ್, ಮತ್ತು ಸ್ವಿಡ್ಜರ್ಲ್ಯಾಂಡ್‌ನಿಂದ ಮಹಿಳಾ ಪ್ರತಿನಿಧಿಗಳು ಭಾಗವಹಿಸಿ 'ಶಾಂತಿ ಮತ್ತು ಸ್ವಾತಂತ್ರ್ಯಕ್ಕಾಗಿ ಇಂಟರ್‌ನ್ಯಾಶನಲ್ ಲೀಗ್ ಆಫ್ ವಿಮೆನ್' ಸಂಘಟನೆ ಕಟ್ಟಿದರು. ಯುರೋಪಿನ ಧನಿಕವರ್ಗದ ನವಜಾಗೃತಿ ಆಂದೋಲನದಲ್ಲಿ ಸ್ತ್ರೀ ಸಮಾನತೆ ಪ್ರಶ್ನೆಗಳು ಮುಂಚೂಣಿಗೆ

ಬಂದವು. ಈ ಆಂದೋಲನದಲ್ಲಿ ಮಹಿಳೆಯರೂ ಪಾಲ್ಗೊಂಡರು. ಮತದಾನದ ಹಕ್ಕಿಗಾಗಿ ನಿರಂತರ ಹೋರಾಟಗಳು ನಡೆದವು. ಯುರೋಪಿನಾದ್ಯಂತ ಶಿಕ್ಷಣಕ್ಕಾಗಿ ಮತ್ತಿತರ ಸಾಮಾಜಿಕ ಹಕ್ಕುಗಳು ಹಾಗೂ ಮಹಿಳಾ ಕಲ್ಯಾಣ ಸಾಧಿಸುವುದಕ್ಕಾಗಿ ಮೇಲ್ವರ್ಗ ಮತ್ತು ಮಧ್ಯಮ ವರ್ಗದ ಮಹಿಳೆಯರು ಉದಾರವಾದಿ ಚಳುವಳಿಗಳನ್ನು ಆರಂಭಿಸಿದರು. ದುಡಿಯುವ ಕಾರ್ಮಿಕ ವರ್ಗದ ಕ್ರಾಂತಿಯ ನಂತರವೇ ಇಂತಹ ಉದಾರವಾದಿ ಔಪಚಾರಿಕ ಚಳುವಳಿಗಳು ನಡೆದವು. ಹೀಗೆ ಬಂಡವಾಳಶಾಹಿ ದೇಶಗಳಲ್ಲಿಯೂ ಸಹ ಉಪಚಾರಕ್ಕಾಗಿಯಾದರೂ ಮಹಿಳಾ ಹಕ್ಕುಗಳನ್ನು ಗೌರವಿಸುವ ಪ್ರಕ್ರಿಯೆ ಆರಂಭವಾಯ್ತು. ಪಾಳೇಗಾರಿ ವ್ಯವಸ್ಥೆಯನ್ನು ಸದೆಬಡಿಯುವ ದಿಕ್ಕಿನಲ್ಲಿ ಇದೊಂದು ಮಹತ್ವದ ಹೆಜ್ಜೆಯೇ ಹೌದು.

ಹೀಗೆ ಜಾಗತಿಕ ಮಟ್ಟದಲ್ಲಿ ದುಡಿಯುವ ವರ್ಗದ ವಿಮೋಚನೆಯೊಂದಿಗೆ ಮಹಿಳಾ ಸಮಾನತೆಯ ವಿಮೋಚನೆಯ ಪ್ರಶ್ನೆಗಳನ್ನು ಕೈಗೆತ್ತಿಕೊಂಡು ಸಂಘಟಿಸಲಾದ ಬೃಹತ್ ಆಂದೋಲನಗಳು ಜಾಗತಿಕ ಬದಲಾವಣೆಗೆ ತನ್ಮೂಲಕ ಭಾರತದೊಳಗಿನ ಬದಲಾವಣೆಗೂ ಪ್ರಭಾವಿಸುವ ಅಂಶಗಳಾದದ್ದು ಚಾರಿತ್ರಿಕ ಸತ್ಯ.



ಭಾರತದ ಪಾಳೇಗಾರಿ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಶ್ರೇಣೀಕೃತ ಮಾದರಿಯಲ್ಲೇ ಅತ್ಯಂತ ಬರ್ಬರಿಕವಾಗಿ ನಡೆಸಿಕೊಳ್ಳಲಾಗುತ್ತಿತ್ತು. ಸತಿ ಪದ್ಧತಿ, ಬಾಲ್ಯವಿವಾಹ, ಬಹುಪತ್ನಿತ್ವ, ಹೆಣ್ಣುಶಿಶು ಹತ್ಯೆ, ಕುಲೀನ ವ್ಯವಸ್ಥೆ ಹಾಗೂ ದೇವದಾಸಿ ಪದ್ಧತಿಗಳಿಗೆ ಬಲಿಯಾಗಿ ಇಲ್ಲಿನ ಮಹಿಳೆ ಒದ್ದಾಡುತ್ತಿದ್ದಳು. ಮತಾಂಧತೆಯ ಮೌಢ್ಯದಲ್ಲಿ, ಪುರುಷಪ್ರಧಾನ ಅಟ್ಟಹಾಸಕ್ಕೆ ಸಿಕ್ಕು ನಲುಗುತ್ತಿದ್ದಳು. ವಿಧವೆ, ಬಂಜೆ, ಗಂಡಬಿಟ್ಟ 'ಪರಿತ್ಯಕ್ತೆ'ಯರ ಜೀವನ ನರಕ ಸದೃಶವಾಗಿತ್ತು. ಅಸಹಾಯಕ ಮಹಿಳೆಯರ ದೇಹವ್ಯಾಪಾರ ನಡೆಯುತ್ತಿತ್ತು. ಮಹಿಳೆಯರಿಗೆ ಸ್ವಾತಂತ್ರ್ಯ ಇಲ್ಲ ಎಂಬ ಮನುಸ್ಮೃತಿಯ ವಂಚಕ ಸಿದ್ಧಾಂತ ಎಲ್ಲೆಡೆ ಜಾರಿ ಮಾಡುತ್ತಿದ್ದರು. 'ಜನಾನಾ ಮಹಲ್' ಮತ್ತು 'ಅಂದರ್ ಮಹಲ್' ದಿಂದ ಆವರಿಸಿದ ಕತ್ತಲ ಕೋಣೆಯಲ್ಲಿ ಹಿಂದೂ ಮುಸ್ಲಿಂ ಮಹಿಳೆಯರು ಶಾಪಗ್ರಸ್ತರಂತೆ ಬಾಹ್ಯ ಪ್ರಪಂಚದ ಎಲ್ಲ ಸಂಬಂಧಗಳನ್ನು ಕಳೆದುಕೊಂಡು ಬದುಕುತ್ತಿದ್ದರು. ಜಾತಿಯ ಹೆಸರಿನ ದಬ್ಬಾಳಿಕೆಗಳು ವ್ಯಾಪಕವಾಗಿದ್ದವು. ಎಲ್ಲ ರೀತಿಯ ಹಕ್ಕುಗಳಿಂದ ದಲಿತ ಮಹಿಳೆಯನ್ನು ವಂಚಿಸಲಾಗಿತ್ತು. ಬಹಿರಂಗದಲ್ಲಿ 'ಮಾತೆ'ಯೆಂದು ಪೂಜಿಸುವ ಇದೇ ದೊಡ್ಡ ದೊಡ್ಡ ಮಾತುಗಳ, ಮಂತ್ರಗಳ ಗದ್ದಲಗಳ ನಡುವೆಯೇ ಮಹಿಳೆಯನ್ನು ಸತ್ತ ಗಂಡನ ಚಿತೆಯಲ್ಲಿ ತಳ್ಳಿ ಜೀವಂತ ಸುಟ್ಟು 'ಸತಿ'ಯಾಗಿಸಿ ವಿಕೃತ ಖುಷಿ ಅನುಭವಿಸುತ್ತಿದ್ದರು.

ವಚನ ಚಳುವಳಿಯ ಬೆಳಕು

ಆದರೆ ಈ ಎಲ್ಲ ಕರ್ಮಕಾಂಡವನ್ನು ಮೂಕರಾಗಿ ನೋಡುತ್ತ ಕೂಡಲಾಗಿತ್ತು ಎಂದೇನಲ್ಲ. ಸಾವಿರಾರು ವರ್ಷಗಳಿಂದ ಮಹಿಳಾ ಸಮಾನತೆಗಾಗಿ ದನಿ ಎತ್ತಲಾಗಿದೆ. ಹೋರಾಟಗಳು ನಡೆದಿವೆ. 12ನೇ ಶತಮಾನದ ಸಾಮಾಜಿಕ ಕ್ರಾಂತಿಯ ಬೆಳಕಿಗೆ ಲಿಂಗ ಸಮಾನತೆಗಾಗಿ ನಡೆಸಿದ ಚಿಂತನೆಗಳೂ ಪ್ರಮುಖ ಕಾರಣ. 37ಕ್ಕೂ ಹೆಚ್ಚು ಜನ ಮಹಿಳೆಯರು ಅದರಲ್ಲೂ ದಲಿತ ಮಹಿಳೆಯರನ್ನೊಳಗೊಂಡು ಅಕ್ಷರ ಕಲಿತು ವಚನ ಸಾಹಿತ್ಯ ಚಳುವಳಿ ಹಾಗೂ ಸಾಮಾಜಿಕ ಚಳುವಳಿಯ ಮೂಲಕ ಈ ಪಾಳೇಗಾರಿ ವ್ಯವಸ್ಥೆಯ ವಿರುದ್ಧ ಹೋರಾಡಿದ ಅಪ್ರತಿಮ ದಾಖಲೆಯದು. ಮಹಾರಾಷ್ಟ್ರದ ಸಾವಿತ್ರಿಬಾಯಿ ಫುಲೆ ನಡೆಸಿದ ಶೈಕ್ಷಣಿಕ ಕ್ರಾಂತಿಯು ಮಹಿಳೆಯರ ಸಮಗ್ರ ಸಮಾನತೆಯ ಪರ ಹೋರಾಟದ ಕಿಡಿಯಾಗಿ ಅರಳಿತು. ಅವಳು ನಡೆಸಿದ ಹೋರಾಟವು ಒಟ್ಟು ಮಹಿಳೆಯರ ಜೀವನಕ್ಕೊಂದು ತಿರುವು ತಂದು ಕೊಟ್ಟಿತು. ಈ ಪಾಳೆಗಾರಿ ವ್ಯವಸ್ಥೆ ಒಡ್ಡಿದ ಧಾಳಿ ದಬ್ಬಾಳಿಕೆಗಳನ್ನು ಮೆಟ್ಟಿ ಮೀರಿ ಸಾವಿತ್ರಿ ಛಲದಿಂದ ಅಂದು ಹಚ್ಚಿದ ಹಕ್ಕಿನ ದೀಪ ಇಂದಿಗೂ ಪ್ರಜ್ವಲಿಸುತ್ತಿದೆ.

ರಾಜಾರಾಂ ಮೋಹನರಾಯ್, ಈಶ್ವರಚಂದ್ರ ವಿದ್ಯಾಸಾಗರ್ ರಂಥ ಮಹಾನ್ ಸಮಾಜಸುಧಾರಕರು ಖಂಡಿತ ಮಹಿಳಾ ವಿಮೋಚನೆಗಾಗಿ ಬಡಿದಾಡಿದರು. ಆರ್ಥಿಕ ಅವನತಿಯು ಅವಳನ್ನು ಎಂಥ ದುರ್ಗತಿಗೆ ತಳ್ಳುತ್ತದೆ ಎಂಬುದನ್ನು ಅವರು ಮನಗಂಡಿದ್ದರು. ಸತಿ ಪದ್ಧತಿಯ ವಿರುದ್ಧ ಸಮರ ಸಾರಿದರು.

ಬಂಡಾಯಗಳ ಭಾಗವಾಗಿ....

ಇದೇ ಹೊತ್ತಿನಲ್ಲಿ ಭಾರತದಾದ್ಯಂತ ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ಚಳುವಳಿಗಳು ಬೆಳೆದುಬರುತ್ತಿದ್ದವು. ಅಷ್ಟು ಮಾತ್ರವಲ್ಲ ಸ್ಥಳೀಯ ಪಾಳೆಗಾರರ ದಬ್ಬಾಳಿಕೆ ಜಮಿನ್ದಾರಿಕೆಯ ವಿರುದ್ಧವೂ ಆಂದೋಲನ ಭುಗಿಲೇಳ ತೊಡಗಿದವು. ಪಶ್ಚಿಮ ಭಾರತದಲ್ಲಿ ನೇಕಾರರು, ಪಶ್ಚಿಮ ಬಂಗಾಳದ ಚೌವಾರ್ ದಂಗೆ, ವಾಹಾಬಿ ಬಂಡಾಯ, ಬರಸಾತಿನ ರೈತರ ಹೋರಾಟ, ಆನಂತರ ಸಂತಾಲರ ಬಂಡಾಯದ ಬೆನ್ನಿಗೆ ಬಿರ್ಸಾ ಬಂಡಾಯ ಆರಂಭವಾಯ್ತು. ರೈತಾಪಿ ದಂಗೆಗಳು ಸೆಟೆದೇಳುತ್ತ ಹುರಿಗೊಂಡು ಮುಂದೊಮ್ಮೆ 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಿಚ್ಚಾಗಿ ಸಿಡಿಯಿತು. ಆನಂತರ ನೀಲಿ ಬೆಳೆಗಾರರ ಚರಿತ್ರಾರ್ಹ ಹೋರಾಟ ನಡೆಯಿತು. ದಕ್ಷಿಣ ಭಾರತದಲ್ಲಿ ಮೋಪ್ಲಾ ದಂಗೆಯು ಪಾಳೆಗಾರಿ ಪ್ರಭುಗಳು ಹಾಗೂ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಇಬ್ಬರ ಶೋಷಣೆಯನ್ನು ಏಕಕಾಲಕ್ಕೆ ಎದುರಿಸುವ ಒಂದು ಮಹತ್ತರ ಸಾಮೂಹಿಕ ಜನಾಂದೋಲನವದು. ಈ ಹೋರಾಟಗಳೆಲ್ಲ ಒಟ್ಟು ಸಮುದಾಯದಲ್ಲಿ ನೊಂದವರಲ್ಲಿ ವರ್ಗ ಪ್ರಜ್ಞೆಯನ್ನು ಹುಟ್ಟು ಹಾಕಿದವು. ಹೋರಾಟದ ಪರಂಪರೆಯನ್ನು ಕಟ್ಟಿ ಕೊಟ್ಟವು. ಮತ್ತು ರಾಷ್ಟ್ರೀಯ ವಿಮೋಚನಾ ಹೋರಾಟಕ್ಕೆ ದಾರಿ ಮಾಡಿಕೊಟ್ಟಿತು. ಇದರ ಭಾಗವಾಗಿಯೇ ಭಾರತದ ಅನೇಕ ಸಮಾಜ ಸುಧಾರಕರು ಮಹಿಳಾ ಶಿಕ್ಷಣಕ್ಕಾಗಿ ಚಳುವಳಿ ಕಟ್ಟಿದರು. ಇದೇ ಹೊತ್ತಿನಲ್ಲಿ ಮಹಿಳೆಯರು ಈ ಎಲ್ಲ ಚಳುವಳಿಗಳಲ್ಲಿ ತಮ್ಮನ್ನು ತಾವು

ತೊಡಗಿಸಿಕೊಳ್ಳತೊಡಗಿದರು. ಕ್ರಿಶ್ಚಿಯನ್ ಮಶಿನರಿಗಳು ಶೈಕ್ಷಣಿಕ ಕೆಲಸ ಮಾಡತೊಡಗಿದವು. ಅದರಲ್ಲಿಯೂ ಪಶ್ಚಿಮ ಬಂಗಾಲದಲ್ಲಿ ರಾಜಾರಾಂ ಮೋಹನರಾಯ್ ನೇತೃತ್ವದಲ್ಲಿ ಸತಿ ವಿರುದ್ಧ ಬಾಲ್ಯ ವಿವಾಹದ ವಿರುದ್ಧ ವಿಧವಾ ವಿವಾಹಕ್ಕಾಗಿ ನಿರಂತರ ಪ್ರಯತ್ನಗಳು ನಡೆಯುತ್ತಿದ್ದವು. ಬಹುಪತ್ನಿತ್ವ ವರದಕ್ಷಿಣೆ ಮಹಿಳೆಯರ ಮಾರಾಟದ ವಿರುದ್ಧ ಆಂದೋಲನ ಸಂಘಟಿಸಿದರು. 'ಆತ್ಮಿಯ ಸಭಾ' ಸಂಘಟನೆಯ ಮುಖಾಂತರ ಬಂಗಾಲದ ಸಮಾಜದ ಬದಲಾವಣೆಗೆ ಬೇಕಾದ ಕರಡನ್ನು ಅವರು ಸಿದ್ಧಪಡಿಸಿದ್ದರು. 'ಮಾಸಿಕ ಪತ್ರ' ಎಂಬ ಸರಳ ಬಂಗಾಲಿ ಪತ್ರಿಕೆಯನ್ನು ಎಲ್ಲ ಗೃಹಿಣಿಯರ ಕೈ ಸೇರುವಂತೆ ಮಾಡಿದ್ದರು. ಮೈಕೆಲ್ ಮಧುಸೂಧನ್ ದತ್, ರವೀಂದ್ರನಾಥ ಟ್ಯಾಗೋರ್, ಬಂಕೀಮ್‌ಚಂದ್ರ ಚಟರ್ಜಿ ಮುಂತಾದವರು ತಮ್ಮ ಸಾಹಿತ್ಯಿಕ ಆಂದೋಲನದ ಮೂಲಕವೂ ಮಹಿಳಾಪರ ದನಿ ಎತ್ತಿದರು. ಹೀಗೆ ಅಸಂಖ್ಯಾತ ಪುರುಷರು ಮಹಿಳಾ ಸಮಾನತೆಗಾಗಿ ಅವಿರತ ಶ್ರಮಿಸಿರುವುದು ಇತಿಹಾಸದ ಪುಟಗಳಲ್ಲಿ ಅಜರಾಮರವಾಗಿದೆ. ಅನೇಕ ಮಧ್ಯಮ ವರ್ಗದ ಮಹಿಳೆಯರು ಸಹ ಚಳುವಳಿಗೆ ಧುಮುಕಿದರು.

ಚಳುವಳಿಯ ಎಳೆಯನ್ನು ಹಿಡಿದು ಸಂಘಟನೆಯನ್ನು ಹೆಣೆಯುತ್ತಾ

ರಾಷ್ಟ್ರೀಯ ಆಂದೋಲನದಲ್ಲಿಯೂ ಮಹಿಳೆಯರು ಪಾಲ್ಗೊಂಡರು. ಮಹಿಳೆಯ ಹಕ್ಕುಗಳಿಗಾಗಿ ಆ್ಯನಿಬೆಸೆಂಟ್, ಸರೋಜನಿ ನಾಯ್ಡು ದನಿ ಎತ್ತಿದರು. ಮುಂದೆ ಹಿಟ್ಲರ್‌ನ ಫ್ಯಾಸಿಸ್ಟ್ ಧಾಳಿಯ ವಿರುದ್ಧ ಪ್ರಜಾಸತ್ತಾತ್ಮಕ ಆಂದೋಲನಗಳು ಬೆಳೆದು ಬಂದವು. ಸ್ವಾತಂತ್ರ್ಯ ಚಳುವಳಿಯಲ್ಲಿ ಅಸಂಖ್ಯಾತ ಮಹಿಳೆಯರು ಭಾಗವಹಿಸಿದರು.



ವಿದೇಶದಲ್ಲಿ ಮೇಡಂ ಕಾಮಾ ಬಾರತದ ಸ್ವಾತಂತ್ರ್ಯಕ್ಕಾಗಿ ಕ್ರಾಂತಿಕಾರಿ ಚಟುವಟಿಕೆಯಲ್ಲಿ ತೊಡಗಿದ್ದರು. ಕಮ್ಯುನಿಸ್ಟ್ ಆಂದೋಲನದಲ್ಲಿ ತೊಡಗಿದ ಅಸಂಖ್ಯಾತ ಮಹಿಳೆಯರು ಮಹಿಳಾ ಅಸ್ತಿತ್ವದ ಪ್ರಶ್ನೆಗಳನ್ನು ಎತ್ತಿ ಸಂಘಟಿತರಾಗತೊಡಗಿದರು. ತನ್ಮೂಲಕ ಬಂಗಾಲದಲ್ಲಿ ಆತ್ಮರಕ್ಷಾ ಸಮಿತಿ, ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವುಮೆನ್ ಹಾಗೂ ಇನ್ನೂ ಅನೇಕ ಮಹಿಳಾ ಸಂಘಟನೆಗಳು ಕೆಲಸ ಮಾಡತೊಡಗಿದವು. ಈ ಸಂಘಟನೆಗಳು ನಿರ್ವಹಿಸಿದ ಪಾತ್ರವು ಭವಿಷ್ಯದ ಆಂದೋಲನಗಳಿಗೆ ಗಟ್ಟಿ ಬುನಾದಿ ಒದಗಿಸಿತು. ಮಹಿಳೆಯರು ರೈತಾಪಿ ಮತ್ತು ಕಾರ್ಮಿಕ ಚಳುವಳಿಯಲ್ಲಿ ಸಮರಧೀರ ಪಾತ್ರ ವಹಿಸಿದರು. ಅದರಲ್ಲೂ ತೇಭಾಗ ಚಳುವಳಿ, ಮಲಬಾರ್ ಹೋರಾಟ, ತೆಲಂಗಾಣ ಹೋರಾಟಗಳಲ್ಲಿ ಮಹಿಳೆಯರು ವೀರಾಗ್ರಣಿಯರಾಗಿ ದುಡಿದರು. ಆಂಧ್ರ, ಬಂಗಾಲ, ಕೇರಳ, ತ್ರಿಪುರ, ತಮಿಳುನಾಡು ಹೀಗೆ ಎಲ್ಲೆಡೆಯ ಪ್ರಜಾಸತ್ತಾತ್ಮಕ ನೆಲೆಯ ಮಹಿಳಾ ಸಂಘಟನೆಗಳು ಒಟ್ಟಾಗಿ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯಾಗಿ ದೇಶವ್ಯಾಂತ ಕಾರ್ಯನಿರ್ವಹಿಸತೊಡಗಿದವು. ಈಗ ಈ ಸಂಘಟನೆಯು ಒಂದೂವರೆ ಕೋಟಿ ಸದಸ್ಯತ್ವ ಹೊಂದಿ ಒಟ್ಟೂ ಮಹಿಳೆಯ ಹಕ್ಕುಗಳ ದನಿಯಾಗಿ ಕೆಲಸ ಮಾಡುತ್ತಿದೆ.

ಸ್ವಾತಂತ್ರ್ಯನಂತರ

ದೇಶವು ರಾಜಕೀಯ ಸ್ವಾತಂತ್ರ್ಯ ಕಂಡು ಆರು ದಶಕಗಳು ಸಂದಿವೆ. ಸ್ವಾತಂತ್ರ್ಯಾನಂತರವೂ ಭಾರತ ಕಂಡ ಸರಕಾರಗಳು ಬಹುತೇಕ ಭೂಮಾಲಕ ಬಂಡವಾಳಶಾಹಿ ಪ್ರತಿನಿಧಿಗಳೇ ಆಗಿರುವುದರಿಂದ ಇಂದಿಗೂ ಮಹಿಳೆಯರು ದ್ವಿತೀಯದರ್ಜೆಯ ಪ್ರಜೆಗಳಾಗಿಯೇ ಬದುಕುವ ಪರಿಸ್ಥಿತಿ ಇದೆ. ಆದ್ದರಿಂದಲೇ ಪಂಚವಾರ್ಷಿಕ ಯೋಜನೆಗಳಲ್ಲಿ ಮಹಿಳೆಯ ಸಮಗ್ರ ಅಭಿವೃದ್ಧಿಗಾಗಿ ಸ್ಪಷ್ಟ ಯೋಜನೆಗಳನ್ನು ರೂಪಿಸುವಲ್ಲಿಯೇ ವಿಳಂಬವಾಗಿರುವುದನ್ನು ಗಮನಿಸಬೇಕು. ಐದನೇ-ಆರನೇ ಪಂಚವಾರ್ಷಿಕ ಯೋಜನೆಗಳಿಂದ ಕೆಲವು ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಎಷ್ಟೆಲ್ಲ ಯೋಜನೆಗಳನ್ನು ರೂಪಿಸಿದರೂ ಜಾರಿ ಮಾಡುವಲ್ಲಿ ಸರಕಾರಗಳು ಸಹಜವಾಗಿಯೇ ತಮ್ಮ ವರ್ಗದ ದೃಷ್ಟಿ-ಧೋರಣೆಯಿಂದ ನಿರ್ವಹಿಸಿರುದರಿಂದ ಮಹಿಳೆಯರ ಜೀವನದ ಸ್ಥಿತಿ-ಗತಿಯಲ್ಲಿ ಗಂಭೀರ ಬದಲಾವಣೆ ಕಾಣಲಿಲ್ಲ.

ಇಂದಿಗೂ ಹೆಣ್ಣು ಭ್ರೂಣಹತ್ಯೆ ವ್ಯಾಪಕವಾಗಿದೆ. ದೇಶದ ಲಿಂಗಾನುಪಾತ ಸಾವಿರ ಜನ ಗಂಡುಮಕ್ಕಳಿಗೆ 924 ಹೆಣ್ಣುಮಕ್ಕಳು. ಪಂಜಾಬ್ ಹರ್‍ಯಾಣ, ರಾಜಸ್ತಾನ, ದೆಹಲಿ ಯಂತಹ ರಾಜ್ಯಗಳಲ್ಲಿ ಹೆಣ್ಣು ಕೂಸುಗಳ ಸಂಖ್ಯೆಯಲ್ಲಿ ಆತಂಕಕಾರಿ ಇಳಿಕೆ ಕಾಣುತ್ತೇವೆ. ಇದೇ ಸಮಯದಲ್ಲಿ ಹೆಣ್ಣುಮಕ್ಕಳ ಮಾರಾಟ, ಹೆಣ್ಣುಕೂಸುಗಳ ಮಾರಾಟ, ವೇಶ್ಯಾವೃತ್ತಿಗೆ ಬಲವಂತದಿಂದ ತಳ್ಳುವುದು ಇತ್ಯಾದಿ ಪ್ರಕರಣಗಳು ಹೆಚ್ಚುತ್ತಿವೆ. ವರದಕ್ಷಿಣೆ ಸಾವುಗಳು, ಬಲತ್ಕಾರ, ದೌರ್ಜನ್ಯಗಳು ಹಾಗೂ ಮರ್ಯಾದಾ ಹತ್ಯೆಗಳು ಸಮಾಜದಲ್ಲಿ ತಲ್ಲಣ ಹುಟ್ಟಿಸುತ್ತಿವೆ. ಆಸ್ತಿಯ ಹಕ್ಕು ದೊರೆಯದಂತೆ ಮಾಡುವುದಲ್ಲದೆ ಸ್ವಂತ ಆಯ್ಕೆಯಿಂದ ವಿವಾಹವಾದಲ್ಲಿ ಮರ್ಯಾದಾ ಹತ್ಯೆಗಳ ಹೆಸರಲ್ಲಿ ಕೊಲೆಗಳು ನಡೆಯುತ್ತಿವೆ. ಬಡತನದ ಹಾಗೂ ಲಿಂಗಭೇದ ನೀತಿಯ ಕಾರಣದಿಂದ ಶಿಕ್ಷಣದಿಂದ ಮಹಿಳೆಯರನ್ನು ದೂರವಿಡುವ ಪರಿಸ್ಥಿತಿಯಲ್ಲಿ ಸಮಗ್ರ ಬದಲಾವಣೆಯಾಗಿಲ್ಲ. ಶೇಕಡ 50 ಕ್ಕೂ ಹೆಚ್ಚು ಮಹಿಳೆಯರು ಅನಕ್ಷರತೆಯಿಂದ ನರಳುತ್ತಿದ್ದಾರೆ. ಗ್ರಾಮೀಣ ಪ್ರದೇಶದ ಬಹುತೇಕ ಕೃಷಿ-ಕೂಲಿ ಕಾರ್ಮಿಕ ಮತ್ತು ರೈತಾಪಿ ಮಹಿಳೆಯರು ಅತ್ಯಂತ ಕಡಿಮೆ ಕೂಲಿಗೆ ದುಡಿಯುವ ಪರಿಸ್ಥಿತಿ ಇನ್ನೂ ಬದಲಾಗಿಲ್ಲ. ದಲಿತ ಮಹಿಳೆಯರು ದುಪ್ಪಟ್ಟು ಅನ್ಯಾಯ ಮತ್ತು ಅಪಮಾನಕ್ಕೆ ಬಲಿಯಾಗುತ್ತಿದ್ದಾರೆ. ಅಲ್ಲದೆ ಕರ್ನಾಟಕದಲ್ಲಿ ದೇವದಾಸಿ ಪದ್ಧತಿಯ ಹೆಸರಿನಲ್ಲಿ ದಲಿತ ಮಹಿಳೆಯರನ್ನು ಲೈಂಗಿಕ ಶೋಷಣೆಗೆ ತಳ್ಳಲಾಗಿದೆ. ಸ್ಥಳೀಯ ಪಾಳೆಗಾರಿ ಪಟ್ಟಭದ್ರ ಪುರೋಹಿತಶಾಹಿ ಹೆಣೆದ ಷಡ್ಯಂತ್ರ ಇದು. ಮಹಿಳಾ ಚಳುವಳಿಗಳ ಅನವರತ ಹೋರಾಟ ಮತ್ತು ಪರಿಶ್ರಮದ ಪ್ರಯತ್ನದಿಂದ ಬಂದ ಮಹಿಳಾ ಪರ ಕಾನೂನುಗಳ ಜಾರಿಗೆ ಅನೇಕ ಅಡ್ಡಿಗಳು ಎದುರಿಸಲಾಗುತ್ತಿದೆ.

ಕೋಮುದಂಗೆಗಳಲ್ಲಿ ಮಹಿಳೆಯರನ್ನು ಗುರಿಯಾಗಿಸಿ ದಂಗೆಗಳು ಚಾಚಿಕೊಳ್ಳುತ್ತಿವೆ. ಅಲ್ಪಸಂಖ್ಯಾತ ಮಹಿಳೆಯರು ಒಳ-ಹೊರಗಿನ ದೌರ್ಜನ್ಯಗಳಿಂದ ತತ್ತರಿಸುವಂತಾಗಿದೆ. ನಾಗರೀಕ ಸಮಾಜ ತಲೆ ತಗ್ಗಿಸುವಂತೆ ಗುಜರಾತ್ ಗೋದ್ರಾ ಹತ್ಯಾ ಕಾಂಡದಲ್ಲಿ ಮುಸ್ಲಿಂ ಗರ್ಭಿಣಿ ಮಹಿಳೆಯ ಹೊಟ್ಟೆಗೆ ಚೂರಿ ಹಾಕಿ ಪಿಂಡವನ್ನು (ಭ್ರೂಣವನ್ನು) ಬೆಂಕಿಗೆ ಹಾಕಲಾಯಿತು. ಮತ್ತು ಆನಂತರ ಅವಳನ್ನು ಸುಟ್ಟು ಹಾಕಲಾಯಿತು. ಕೋಮುಶಕ್ತಿಗಳು ಈ ಪ್ರಕರಣದ ಬರ್ಬರ ಹತ್ಯೆಗಳನ್ನು ನಡೆಸಿದಾಗ ಕೋಮು ಅಜೆಂಡಾ ಹೊಂದಿದ ಬಿಜೆಪಿಯಂತಹ ಪಕ್ಷದ ಸರಕಾರಗಳು



ನೇತೃತ್ವ ವಹಿಸಿದ ಅಮಾನವೀಯತೆ ಈ ದೇಶದಲ್ಲಿ ನಡೆದಿದೆ. ಹೀಗಾಗಿ ಮಹಿಳೆಯರು ಇಂದಿಗೂ ತಮ್ಮ ಹಕ್ಕುಗಳಿಗಾಗಿ ನಿರಂತರ ಬಡಿದಾಡಬೇಕಾದ ಪರಿಸ್ಥಿತಿ ಇದ್ದೇ ಇದೆ.

ಮಹಿಳಾ ಮೀಸಲಾತಿಗೆ ಅಡ್ಡಿ

ಮಹಿಳೆಯರು ನೀತಿನಿರೂಪಣಾ ಸ್ಥಾನಗಳಿಗೆ ಬರದಂತೆ ವ್ಯವಸ್ಥಿತವಾಗಿ ತಡೆಯೊಡ್ಡುವ ಎಲ್ಲ ರೀತಿಯ ಸಾಮಾಜಿಕ ನಿಬಂಧನೆಗಳನ್ನು ಹೇರಿರುವುದರಿಂದ, ಮಹಿಳಾ ಸಂಘಟನೆಗಳು ಮಹಿಳಾ ಮೀಸಲಾತಿಗಾಗಿ ನಿರಂತರ ಚಳುವಳಿಗಳನ್ನು ನಡೆಸುತ್ತಿವೆ. ಕಮ್ಯುನಿಸ್ಟ್ ಪಕ್ಷದ ಸಂಸದೆ ಗೀತಾ ಮುಖರ್ಜಿಯವರ ನೇತೃತ್ವದಲ್ಲಿ ಸಿದ್ಧಗೊಂಡ ಮಹಿಳಾ ಮೀಸಲಾತಿ ಮಸೂದೆಗೆ ಸಂಸತ್ತಿನಲ್ಲಿ ಬಂಡವಾಳಶಾಹಿ ಪಕ್ಷಗಳಿಂದ ತೀವ್ರ ಅಡ್ಡಿಗಳು ಬಂದಿವೆ. ಆದರೆ ದೇಶಾದ್ಯಂತ ಮಹಿಳಾ ಪ್ರಧಾನ ಹೋರಾಟಗಳು ಪ್ರಖರವಾಗಿ ಬೆಳೆದು ಬರುತ್ತಿರುವುದರಿಂದ ಮತ್ತು ಮಹಿಳೆಯರ ಮಧ್ಯದಲ್ಲಿ ರಾಜಕೀಯ ತಿಳುವಳಿಕೆ ಹೆಚ್ಚುತ್ತಿರುವುದರಿಂದ ಅನಿವಾರ್ಯವಾಗಿ ಈ ಮಸೂದೆ ಮಂಡಿಸುವ ಒತ್ತಡ ಉಂಟಾಯಿತು. ಎಡ ಪಕ್ಷಗಳು ಈಗಾಗಲೇ ಮಸೂದೆ ಬೆಂಬಲಿಸಿ ಮಂಡನೆಗೆ ಆಗ್ರಹಿಸಿ ಹೋರಾಟಕ್ಕೂ ಕರೆ ಕೊಟ್ಟಿವೆ. ಇತ್ತೀಚೆಗೆ ರಾಜ್ಯ ಸಭೆಯಲ್ಲಿ ಮಂಡಿಸಿದಾಗ ಸಮಾಜವಾದಿ ಪಕ್ಷ, ರಾಷ್ಟ್ರೀಯ ಜನತಾ ದಳ, ಬಿಎಸ್‌ಪಿ ಪಕ್ಷಗಳ ನಾಯಕರು ನಾಚಿಗೇಡಿಗಳಂತೆ, ಪ್ರಜಾಪ್ರಭುತ್ವ ಮೌಲ್ಯಗಳಿಗೆ ಅಪಮಾನವಾಗುವಂತೆ ನಡೆದುಕೊಂಡು ಸಂವಿಧಾನಕ್ಕೆ ಅಪಚಾರ ಬಗೆದಿದ್ದಾರೆ. ಕುಂಟು ನೆಪಗಳನ್ನು ಮುಂದೆ ಮಾಡಿ ಮಹಿಳೆಯರನ್ನು ಶಾಸನ ಸಂಸತ್ತುಗಳಿಗೆ ಬರದಂತೆ ನೀತಿ ನಿರೂಪಣಾ ಸ್ಥಾನಗಳಿಗೆ ಬರದಂತೆ ತಡೆ ಒಡ್ಡುವ ಕುತಂತ್ರವೇ ಇದಾಗಿದೆ. ಎಲ್ಲ ವಿರೋಧಗಳ ನಡುವೆಯೂ ಮಹಿಳಾ ಮೀಸಲಾತಿ ಮಸೂದೆಗೆ ರಾಜ್ಯ ಸಭೆಯಲ್ಲಿ ಬೆಂಬಲ ದೊರೆತಿದೆ. ಲೋಕ ಸಭೆಗೆ ಬರಬೇಕಷ್ಟೆ.

ಚಾರಿತ್ರಿಕ ಘಟ್ಟದ ಈ ಹೊತ್ತಲ್ಲಿ ನಮ್ಮ ಮುಂದಿರುವ ಸವಾಲುಗಳು ತುಂಬ ಗಂಭೀರವಾದವುಗಳೇ ಆಗಿವೆ. ಲಿಂಗ ಸಮಾನತೆಗಾಗಿ ಆರೋಗ್ಯ-ಶಿಕ್ಷಣ-ಉದ್ಯೋಗ, ಆಸ್ತಿ ಹಕ್ಕುಗಳಿಗಾಗಿ, ಆಹಾರದ ಹಕ್ಕಿಗಾಗಿ ಹಾಗೂ ಹತ್ತು ಹಲವು ಸಾಮಾಜಿಕ ಅನಿಷ್ಠಗಳ ವಿರುದ್ಧ ನಿರಂತರ ಚಳುವಳಿ ಸಂಘಟಿಸುವ ಹೊಣೆ ಹೊರುವಾಗಲೇ ಕೋಮುವಾದ ಮೂಲಭೂತವಾದದ ವಿರುದ್ಧವು ಮಹಿಳೆಯರನ್ನು ಅಣಿ ನೆರೆಸಬೇಕಾಗುತ್ತದೆ. ಜಾತಿ ಅಸಮಾನತೆಯನ್ನು ನಿವಾರಿಸಲು ತುಂಬ ಪರಿಣಾಮಕಾರಿ ಸಮರಧೀರ ಚಳುವಳಿಗೆ ಮುನ್ನುಗ್ಗಲೇಬೇಕಾಗುತ್ತದೆ. ಘನತೆಯ ಬದುಕಿಗಾಗಿ ಸಂಘರ್ಷ ಮಾಡಲೇಬೇಕಾಗುತ್ತದೆ. ಎಲ್ಲ ರೀತಿಯ ದೌರ್ಜನ್ಯಗಳನ್ನು ಹಿಮ್ಮೆಟ್ಟಿಸಲು ಒಟ್ಟೂ ಮಹಿಳೆಯರನ್ನು ಸಂಘಟಿಸಲೇಬೇಕಿದೆ.

ಈ ಎಲ್ಲ ಅನಿಷ್ಟಗಳನ್ನು ತಡೆಗಟ್ಟಿ ದೇಶವನ್ನು ಲಿಂಗ ಸಮಾನತೆಯತ್ತ ಮುನ್ನಡೆಸಲು ತನ್ಮೂಲಕ ಸಮಗ್ರ ಅಭಿವೃದ್ಧಿ ಹೊಂದಲು ಮಹಿಳೆಯರು ರಾಜಕೀಯ ರಂಗದತ್ತ ಹೆಜ್ಜೆ ಹಾಕಬೇಕಾಗುತ್ತದೆ. ಕೋಮವಾದದ ಕ್ರಿಮಿನಲ್ ರಾಜಕಾರಣದ ಮೂಲಕ ದೇಶದ ಐಕ್ಯತೆಗೆ ಧಕ್ಕೆ ತರುತ್ತಿರುವ ಭೂಮಾಲಕ ಪಾಳೇಗಾರಿ ಬಂಡವಾಳಶಾಹಿ ಶಕ್ತಿಗಳ ವಿರುದ್ಧ ಮಹಿಳೆಯರು ರಾಜಕೀಯ ಕ್ಷೇತ್ರ ಪ್ರವೇಶಿಸಬೇಕಾದ ಸವಾಲು ಸ್ವೀಕರಿಸಬೇಕಾಗುತ್ತದೆ. ಮಹಿಳೆಯರ



ಸಮಾನತೆಗೆ ಅಡ್ಡಿಯಾಗಿರುವ ಅಂಶಗಳನ್ನು ಕಿತ್ತೊಗೆಯಲು ನೀತಿ ನಿರೂಪಣಾ ಸ್ಥಾನಗಳಿಗೆ ಮಹಿಳೆಯು ಮುನ್ನಡೆಯಬೇಕಾಗಿದೆ. ಈ ಸವಾಲೂ ಸಹ ಅಸಂಖ್ಯಾತ ಮಹಿಳೆಯರ ಕಣ್ಣೀರು ತೊಡೆಯಲು ಪ್ರಯೋಗಿಸಲ್ಪಡುವ ಆಯುಧವಾಗಬೇಕಾಗುತ್ತದೆ. ಹೊರಗಡೆ ಮಹಿಳೆಯರ ಸ್ವಾಭಿಮಾನಿ ಆಂದೋಲನ ಒಳಗಡೆ ಮಹಿಳೆಯರ ಬದುಕು ಹಸನುಗೊಳಿಸುವ ಘನತೆ ಗೌರವದಿಂದ ಬದುಕಲು ಬೇಕಾದ ನೀತಿ ನಿಯಮಗಳನ್ನು ರೂಪಿಸುವ ಪ್ರಯತ್ನಗಳು ನಡೆದಲ್ಲಿ ಭಾರತವು ನಿಜವಾದ ಅಭಿವೃದ್ಧಿ ಹಾಗೂ ಐಕ್ಯತೆಯತ್ತ ಸಾಗಲು ಸಾಧ್ಯವಾಗುತ್ತದೆ.

ನಮ್ಮ ಬದುಕು ದುಡಿ, ದುಡಿದು ಧೂಳಾದವರು

'ನಮ್ಮ ಮನೆಯಲ್ಲಿ ಅನ್ನಕ್ಕೆ ಅಕ್ಕಿ ಇಲ್ಲ, ಬರಿ ನುಚ್ಚು'

ಇಟ್ಟಿಗೆ, ಸಿಮೆಂಟ್ ಹೊರುವ, ಕಾಂಕ್ರಿಟ್ ಕಲಸುವ ಕಟ್ಟಡ ಕಾರ್ಮಿಕ ಮಹಿಳೆಯರ ಬದುಕಿನ ಚಿತ್ರ

ಎಸ್. ಶಂಕರ್



ಇಂದು ಮಹಿಳಾ ದಿನದ ಶತಮಾನೋತ್ಸವ. ಶಕ್ತಿಸೌಧಕ್ಕೆ ಮಣ್ಣು ಹೊರುತ್ತಿರುವ ಮಹಿಳೆ.

ಯಾದಗಿರಿ ಜಿಲ್ಲೆಯ ಕೊಂಕೆಲದಿಂದ ವಲಸೆ ಬಂದು ಬೆಂಗಳೂರಿನ ಬಿಳೇಕಳಿಯ ಕೋಡಿಚಿಕ್ಕನಹಳ್ಳಿ ರಸ್ತೆಯಲ್ಲಿರುವ ಕಾಂಕ್ರಿಟ್ ಗ್ಯಾಂಗ್‌ನಲ್ಲಿ ದುಡಿಯುತ್ತಿರುವ ಕಬೀರ ಜಾತಿಗೆ ಸೇರಿದ 38 ವರ್ಷದ ತಾಯಮ್ಮ ಮತ್ತು 35 ವರ್ಷದ ಸೌಖಮ್ಮ ಹೇಳಿದ ಮಾತು 'ಅಕ್ಕಿ ತರುವುದೇ ಇಲ್ಲ, ನುಚ್ಚು ತಂದುಊಟ ಮಾಡುತ್ತೇವೆ. ಜೋಳದ ರೊಟ್ಟಿ ತರಕಾರಿ ಇಲ್ಲದ ಬೇಳೆಯ ನೀರು ಸಾರೇ ಪ್ರತಿದಿನ ನಮಗೆ ಊಟ'.

ದುರ್ಬರ ಬದುಕು

ತಾಯಮ್ಮ ಪತಿ ನರಸಪ್ಪ ಒಂದು ಹೆಣ್ಣು, ಒಂದು ಗಂಡು ಮಗುವನ್ನು ಕೊಟ್ಟು ಕುಡಿತದಿಂದ ಮೃತನಾದ. ಊರಿನಲ್ಲಿ 20 ಕುಂಟೆ ಬಂಜರುಭೂಮಿ ಇದ್ದು, ಸರಿಯಾಗಿ ಏನನ್ನೂ ಬೆಳೆಯಲು ಆಗುವುದಿಲ್ಲ. ಕೂಲಿಗೆ ಹೋದರೆ ದಿನಕ್ಕೆ 30 ರೂ. ಕೂಲಿ. ಮಳೆಗಾಲದಲ್ಲಿ ಮಾತ್ರ ಕೆಲಸ, ಬೇಸಿಗೆಯಲ್ಲಿ ಕೆಲಸವೇ ಇಲ್ಲ. ಊರಿನಲ್ಲಿ ಇರುವುದೆಂದರೆ ಜೀವನ ತುಂಬ ಕಷ್ಟ. ಅಲ್ಲಿಂದ ಬೆಂಗಳೂರಿಗೆ ಬಂದು ಅದೇ ಊರಿನವರ ಕಾಂಕ್ರೀಟ್ ಗ್ಯಾಂಗ್‌ನ ಜೊತೆ ದುಡಿಯಲು ಹೋಗುತ್ತಾರೆ. ದಿನಕ್ಕೆ 120 ರೂ. ಕೂಲಿ, ವಾರದಲ್ಲಿ 3 ರಿಂದ 4 ದಿನ ಮಾತ್ರ ಕೆಲಸ. ವಾರದ ಸರಾಸರಿ ಆದಾಯ 400 ರೂ.ಗಳಲ್ಲಿ ತಿಂಗಳಿಗೆ 200 ರೂ. ಗುಡಿಸಲಿಗೆ ಬಾಡಿಗೆ ನೀಡಿ ಶಾಲೆಗೆ ಹೋಗುವ ಇಬ್ಬರು ಮಕ್ಕಳನ್ನು ಸಾಕಬೇಕಾಗಿದೆ. ಊರಿನ ಪಂಚಾಯತಿಯಿಂದ ಬಂದಿದ್ದ ಜನತಾಮನೆಯನ್ನು ಪಂಚಾಯತಿ ಕಾರ್ಯದರ್ಶಿ ಕೊಡದೆ ಅವನೇ ವಾಸವಾಗಿದ್ದಾನೆ.

ಗಂಡ ಸತ್ತನೆಂಬುದೆ ನೆಮ್ಮದಿ

ಸಾಕಮ್ಮನಿಗೆ 5 ವರ್ಷದ ಹೆಣ್ಣುಮಗು ಇದೆ. ಊರಿನಲ್ಲಿ ಎರಡು ಎಕರೆ ಬಂಜರು ಭೂಮಿಯಲ್ಲಿ ಏನನ್ನೂ ಬೆಳೆಯುವುದಿಲ್ಲ. ಕೆಲಸಕ್ಕೆ ಹೋಗುವಾಗ ಮಗಳನ್ನು ಜೊತೆಯಲ್ಲಿಯೇ ಕರೆದುಕೊಂಡು ಹೋಗುತ್ತಾರೆ. ಕುಡಿತದಿಂದ ಪತಿ ಹನುಮಂತಪ್ಪ ಮೃತನಾಗಿದ್ದಾನೆ. 'ಗಂಡ ಬದುಕಿದ್ದಾಗ ದುಡಿದು, ದುಡಿದು ಆತನ ಕುಡಿತಕ್ಕೆ ಕೊಡಬೇಕಾಗಿತ್ತು. ಸತ್ತನೆಂದು ನೆಮ್ಮದಿಯಾದರೂ, ಜೀವನದಲ್ಲಿ ಹೇಳಲಾಗದಷ್ಟು ಕಷ್ಟದಲ್ಲಿದ್ದೇವೆ' ಎಂದರು.

ಒಂಭತ್ತು ಮಕ್ಕಳು..... ಯಾರೂ ಶಾಲೆಗೆ ಹೋಗುವುದಿಲ್ಲ

ಇದೇ ಜಿಲ್ಲೆಯ ಗೋಪಾಲಪುರದಲ್ಲಿ ಮೂರು ಎಕರೆ ಬಂಜರು ಭೂಮಿಯಿದ್ದು ಏನನ್ನೂ ಬೆಳೆಯಲಾಗದೆ ಬೆಂಗಳೂರಿಗೆ ಬಂದಿರುವ 60 ವರ್ಷದ ನರಸಿಂಹಪ್ಪನ ಪತ್ನಿ 30 ವರ್ಷದ ಅನಂತಮ್ಮನಿಗೆ ಏಳು ಗಂಡು, 2 ಹೆಣ್ಣು, ಒಟ್ಟು 9 ಜನ ಮಕ್ಕಳು. ಒಬ್ಬ ಮಗಳಿಗೆ ಮದುವೆಯಾಗಿದೆ. ಗಾರೆ ಕೆಲಸದ ಸಹಾಯಕಿಯಾಗಿ ಕೆಲಸ ಮಾಡುವ ಈಕೆಯ ಜೊತೆಗೆ 14 ವರ್ಷದ ಒಳಗಿನ ಇಬ್ಬರು ಗಂಡು ಮಕ್ಕಳೂ ದುಡಿಯುತ್ತಿದ್ದು ದಿನಕ್ಕೆ ಒಬ್ಬರಿಗೂ 120 ರೂ. ಕೂಲಿ. 9 ಗಂಟೆ ದುಡಿಯಬೇಕು. ದುಡಿದು ಬರುವ ಹಣದಲ್ಲಿ ಯಾವುದೇ ಕೆಲಸ ಮಾಡದೆ ಮನೆಯಲ್ಲಿರುವ ಗಂಡನಿಗೆ ಪ್ರತಿದಿನ ಕುಡಿಯಲು ಹಣ ನೀಡಬೇಕು. ಮನೆಯಲ್ಲಿರುವ ಸಣ್ಣ ಮಕ್ಕಳನ್ನು 13 ವರ್ಷದ ಜಗನ್ನಾಥ ನೋಡಿಕೊಳ್ಳುತ್ತಾನೆ. ಮಕ್ಕಳು ಯಾರೂ ಶಾಲೆಗೆ ಹೋಗುವುದಿಲ್ಲ. ವಾಸಿಸುವ ಶೆಡ್‌ಗೆ 200 ರೂ. ಬಾಡಿಗೆ. ಕಳೆದ ಒಂದು ತಿಂಗಳು ಕೆಲಸವೇ ಇರಲಿಲ್ಲ. ವಯಸ್ಸು 30 ವರ್ಷ ವಾಗಿದ್ದರೂ ಅನಂತಮ್ಮ 65 ವರ್ಷದವಳಂತೆ ಕಾಣುತ್ತಿದ್ದಳು. ರೇಷನ್ ಕಾರ್ಡ್, ಮತದಾನ ಚೀಟಿ ಯಾವುದೂ ಇಲ್ಲ. ಇವರ ಜೊತೆಗೆ ದುಡಿಯುತ್ತಿದ್ದ ಹುಸೇನಮ್ಮ ನವರದ್ದೂ ಇದೇ ಸ್ಥಿತಿ.

ಗಾಯವಾಗಿದೆ. ಚಿಕಿತ್ಸೆಯಿಲ್ಲ

ತಮಿಳುನಾಡಿನ ವೇಲುಪುರಿಯ ತಿರುಕೋಯಿಲ್‌ನಿಂದ ಬಂದಿರುವ 45 ವರ್ಷದ ಉತ್ತರನ್ - 38 ವರ್ಷದ ವೆನಿಲ ದಂಪತಿಗಳಿಗೆ 4 ಮಕ್ಕಳು., 12 ವರ್ಷದ ಒಬ್ಬ ಮಗ ಊರಿನಲ್ಲಿ ಅಜ್ಜಿಯ ಆಶ್ರಯದಲ್ಲಿ ಶಾಲೆಗೆ ಹೋಗುತ್ತಿದ್ದಾನೆ. ಉಳಿದ ಪೂರ್ಣ ಕುಟುಂಬ ಗಾರೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದಾರೆ. ಮೊದಲ ಮಗಳಿಗೆ ಮದುವೆಯಾಗಿದೆ. ಅಳಿಯ ಕೂಡಾ ಇವರ ಜೊತೆಯಲ್ಲಿಯೇ ದುಡಿಯುತ್ತಿದ್ದಾನೆ. ಮಹಿಳೆಯರಿಗೆ 120 ರೂ. ಕೂಲಿ. ಮಗಳ ಮದುವೆಗೆ ಒಂದು ಲಕ್ಷ ರೂ. ಸಾಲವಾಗಿದ್ದು, ಎಲ್ಲರ ದುಡಿಮೆಯ ದೊಡ್ಡ ಭಾಗ ಸಾಲಕ್ಕೆ ಹೋಗುತ್ತದೆ. ಉತ್ತರನ್‌ರವರು ಕಳೆದ

ಪುಟ 43 ಕ್ಕೆ

ಕಣ್ಣಲ್ಲಿ ಕನಸು ಕೈಯಲ್ಲಿ ದುಡಿಮೆ ಬೀಡಿ ಮಹಿಳೆಯರ ದಿನಚರಿ

ಬೀಡಿ ಕಟ್ಟುವ ಮಹಿಳೆಗೆ ಉದ್ಯಮಿಗಳು ವಂಚಿಸುವ ಒಂದೊಂದು ಪೈಸೆಯಲ್ಲೂ ಕೋಟ್ಯಂತರ ರೂಪಾಯಿ ಆದಾಯ ಮಾಡುತ್ತಾರೆ.

ಇದೆಲ್ಲದರ ನಡುವೆಯು ಮಹಿಳೆಯರು ಜೀವನದ ಅಗತ್ಯಗಳು, ಕನಸುಗಳ ಈಡೇರಿಕೆಗಾಗಿ ದುಡಿಯುತ್ತಲೇ ಬರುತ್ತಿದ್ದಾರೆ.

ಸಿಪ್ಪಿಸಿ

ಮನಸ್ಸುಗಳಲ್ಲಿ ಭವ್ಯ ಭವಿಷ್ಯದ ಕನಸು... ಇಡೀ ಸಂಸಾರದ ನೊಗಕ್ಕೆ ಹೆಗಲು ಕೊಟ್ಟ ಛಾತಿ.. ಕಣ್ಣುಗಳಲ್ಲಿ ಸುಂದರ ಬದುಕಿನ ಕಲ್ಪನೆ... ಇದು ದಕ್ಷಿಣ ಕನ್ನಡದ ಬೀಡಿ ಕಟ್ಟುವ ಮಹಿಳೆಯರ ಸ್ಥಿತಿಗತಿ.

ಮಡಿಲಲ್ಲಿ ಗೆರಸೆ ಇಟ್ಟು ದಿನವಿಡೀ ಗೋಣು ಬಗ್ಗಿಸಿ ಬೀಡಿ ಕಟ್ಟುವ ಮಹಿಳೆಯರ ಮನದೊಳಗಿನ ಆ ನೋವು, ಬಯಕೆಗಳು... ಮೌನಕ್ಕೂ ಅರ್ಥ ಕಲ್ಪಿಸುವ ನೋಟ.. ಯಾರ ಮನವನ್ನಾದರೂ ಕಲಕದೇ ಇರದು. ಬೀಡಿ ಕಟ್ಟುವ ಮಹಿಳೆಯವರಿಗೆ ತಮ್ಮ ದುಃಖವನ್ನು ಹಂಚಿಕೊಳ್ಳಲು ಇದೇ ಗೆರಸೆ ಬಿಟ್ಟರೆ ಬೇರಾವುದೂ ಇಲ್ಲ.



ತಲೆ ಬಗ್ಗಿಸಿ ದಿನವಿಡೀ ಏಕಾಗ್ರತೆಯಿಂದ ಬೀಡಿ ಸುತ್ತಿದರೂ ವಾರಾಂತ್ಯಕ್ಕೆ ಸಿಗುವುದು ಒಂದಿಷ್ಟು ಪುಡಿಗಾಸು. ಮನೆಯ ಖರ್ಚಿಗೇ ಇದು ಸಾಕಾಗುವುದಿಲ್ಲ. ಇದರಿಂದ ಇತರ ಖರ್ಚುಗಳನ್ನು ಹೇಗೆ ಸರಿದೂಗಿಸಲಿ ಎಂದು ನೋವಿನಿಂದ ನುಡಿಯುತ್ತಾರೆ ಬೀಡಿ ಕಟ್ಟುವ ಮಹಿಳೆ ಭಾರತಿ.

ಹೌದು, ಹಳ್ಳಿಯ ಮಹಿಳೆಯರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಿದ ಕೀರ್ತಿ ಬೀಡಿ ಉದ್ಯಮಕ್ಕೆ ಸಲ್ಲಬೇಕು. ಬೀಡಿ ಕಟ್ಟಿ ಗಂಡ-ಮಕ್ಕಳನ್ನು ಪೊರೆಯುವ ಅದೆಷ್ಟೋ ಕುಟುಂಬಗಳು ಕರಾವಳಿಯಲ್ಲಿವೆ.

ಆರ್ಥಿಕ ಜೀವನಾಡಿಯಾಗಿ

ಬೀಡಿ ಉದ್ಯಮ ಕರಾವಳಿಯ ಆರ್ಥಿಕ ಹಾಗೂ ಸಾಮಾಜಿಕ ಬದುಕಿಗೆ ಅಮೂಲ್ಯ ಕೊಡುಗೆಯನ್ನೇ ನೀಡಿದೆ. ಬೀಡಿ ಕಟ್ಟುವ ಮೂಲಕ ಸಂಸಾರ ಭಾರ ಹಂಚಿಕೊಳ್ಳುವ ಮಹಿಳೆ, ಮನೆಯ ನಿರ್ವಹಣೆಯಲ್ಲೂ ಮುಂಚೂಣಿ ಪಾತ್ರ ವಹಿಸುತ್ತಾಳೆ. ಜೀವನ ನಿರ್ವಹಣೆ ಜೊತೆ ಮಕ್ಕಳ ಶಿಕ್ಷಣ, ಆರೋಗ್ಯದ ಖರ್ಚಿಗೂ ಬೀಡಿಯ ಆದಾಯವೇ ಹಲವು ಕುಟುಂಬಗಳ ಮುಖ್ಯ ಆಧಾರ. ಬಹುತೇಕ ಕುಟುಂಬಗಳು ಬೀಡಿ ಉದ್ಯಮದ ಆದಾಯವನ್ನೇ ನೆಚ್ಚಿಕೊಂಡಿವೆ. ಬೀಡಿ ಕಾರ್ಮಿಕರ ಸ್ಕಾಲರ್‌ಶಿಪ್ ಪಡೆದು ವಿದ್ಯಾಭ್ಯಾಸ ಪಡೆದವರು ಅಸಂಖ್ಯ. ಶೋಷಣೆಯ ವಿರುದ್ಧ ಸದಾ ಹೋರಾಟ ನಡೆಸಿದ, ಚಿರಸ್ಮರಣೆ ಸೇರಿದಂತೆ ಹಲವು ಅಪೂರ್ವ ಕಾದಂಬರಿಗಳನ್ನು ನೀಡಿದ ನಿರಂಜನ (ಕುಳಕುಂದ ಶಿವರಾಯ) ಬೀಡಿ ಕಟ್ಟಿಯೇ ವಿದ್ಯಾಭ್ಯಾಸ ಪಡೆದವರು ಎಂಬುದು ಗಮನಾರ್ಹ.

ಸಂಘಟನೆಯಿಂದ ಅಸಂಘಟನೆಯತ್ತ

1940ರ ಸುಮಾರಿಗೆ ಆರಂಭವಾದ ಬೀಡಿ ಉದ್ಯಮ 1048 ವರೆಗೆ ಸಂಘಟಿತವಾಗಿತ್ತು. ಫ್ಯಾಕ್ಟರಿ ಎಂಬ ಒಂದೇ ಸೂರಿನಡಿ ಗಂಡಸರು ಬೀಡಿ ಸುತ್ತುತ್ತಿದ್ದರು. ಆಗ ಬೀಡಿ ಉದ್ಯಮ ಜಿಲ್ಲೆಯ ಪ್ರಧಾನ ಉದ್ಯೋಗವೂ ಆಗಿತ್ತು, ಆರ್ಥಿಕ ಮೂಲವೂ ಆಗಿತ್ತು. ಕೇರಳದ ಕಮ್ಯುನಿಸ್ಟ್ ಚಳವಳಿಯ ಪ್ರಭಾವ ಕರ್ನಾಟಕದ ಕರಾವಳಿ ವರೆಗೂ ಹಬ್ಬಿತ್ತು. 48 ರಲ್ಲಿ ಕಮ್ಯುನಿಸ್ಟ್ ಪಕ್ಷಕ್ಕೆ ನಿಷೇಧ ಹಾಕಿದ ಸಂದರ್ಭದಲ್ಲಿ ಹಲವು ನಾಯಕರನ್ನು ಬಂಧಿಸಲಾಯಿತು. ಇನ್ನು ಕೆಲವರು ಭೂಗತರಾದರು. ಆಡಳಿತ, ಪೊಲೀಸ್ ಈ ಸಂದರ್ಭವನ್ನು ಬಳಸಿ ಪಕ್ಷ, ಸಂಘಟನೆಯ ಕಚೇರಿಗೆ ನುಗ್ಗಿ ಸರ್ವನಾಶ ಮಾಡಿದರು. ಆಗ ಉದ್ಯಮಿಗಳು ಕೆಲವರಿಗೆ ಎಲೆ ತಂಬಾಕು ನೀಡಿ ಬೀಡಿ ಕಟ್ಟಲು ಕಾಂಟ್ರ್ಯಾಕ್ಟ್ ನೀಡಿದರು. ಇದರಿಂದ ಪುರುಷ ಪ್ರಧಾನ ಉದ್ಯಮ ಗೃಹ ಕೈಗಾರಿಕೆಯಾಗಿ ಬದಲಾಯಿತು. ಮಹಿಳೆಯರೂ ಸಕ್ರಿಯವಾಗಿ ಪಾಲುಪಡೆದರು. ಆದರೆ, ಕಾರ್ಮಿಕರು ಅಸಂಘಟಿತರಾದರು. ಕೂಲಿ, ಸೌಲಭ್ಯ ನೀಡಿಕೆಯಲ್ಲಿ ವಂಚನೆ ನಡೆಯಿತು.

ವಂಚನೆಯ ವಿರುದ್ಧ ಹೋರಾಟ

ಇಷ್ಟಾದರೂ ಕರಾವಳಿಯಲ್ಲಿ ಬೀಡಿ ಕಟ್ಟುವ ಮಹಿಳೆಯರನ್ನು ಸಂಘಟಿಸಿ ಅವರಿಗೆ ರಾಜಕೀಯ ಪ್ರಜ್ಞೆ ಮೂಡಿಸಿದ ಖ್ಯಾತಿ ಕಮ್ಯುನಿಸ್ಟ್ ಪಕ್ಷಕ್ಕೆ ಸಲ್ಲಬೇಕು. ಕನಿಷ್ಠ ಕೂಲಿಗಾಗಿ ಅದೆಷ್ಟೋ ದೊಡ್ಡ ದೊಡ್ಡ ಹೋರಾಟಗಳನ್ನು ಸಂಘಟಿಸಿ ನೇತೃತ್ವ ನೀಡಿದವರು ದುಡಿಯುವ ವರ್ಗದ ಮಹಾನ್ ನಾಯಕರು. ಮಾಲಕರ ವಿರುದ್ಧ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸಿ ರಾತ್ರಿ ಹಗಲೆನ್ನದೆ ಸಂಘಟನೆಯಲ್ಲಿ ತೊಡಗಿಸಿಕೊಂಡ ನಾಯಕರನ್ನು ಮಟ್ಟಹಾಕಲು ಅತ್ಯಂತ ಕ್ರೂರ ಹಾಗೂ ಪಾಶವೀ ಕೃತ್ಯಕ್ಕೂ ಉದ್ಯಮಪತಿಗಳು ಮುಂದಾಗಿದ್ದರು. ಕಾರ್ಮಿಕ ನಾಯಕರ ನಿಸ್ವಾರ್ಥದ

ಓವರ್ ಟೈಂ ದುಡಿಮೆಯ ಭಾರ -ಕಿರುಕುಳಗಳೋ ನಿರಂತರ....

ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಪರಿಸ್ಥಿತಿ

ಟಿ.ಲೀಲಾವತಿ




ದೇಶ, ವಿದೇಶಗಳ ಜನರಿಗೆ ತೊಡಲು, ಬಗೆ ಬಗೆಯ, ಬಣ್ಣಬಣ್ಣದ ಉಡುಪುಗಳನ್ನು ಹೊಲಿಯುವ ಗಾರ್ಮೆಂಟ್ಸ್ ಮಹಿಳೆಯರ ಬದುಕು ಮಾತ್ರ ಚಿಂದಿ ಕೌದಿಯಂತಿದೆಯಲ್ಲ !!

ಉದ್ಯಾನಗರಿ ಬೆಂಗಳೂರು, ಗಾರ್ಡನ್ ಸಿಟಿ ಬೆಂಗಳೂರು, ಐಟಿ-ಬಿಟಿ ನಗರ ಬೆಂಗಳೂರು ಎಂದೆಲ್ಲಾ ಕರೆಯಿಸಿಕೊಳ್ಳುವ ಈ ಊರಿನಲ್ಲಿ ಸಿದ್ದ ಉಡುಪುಗಳನ್ನು ತಯಾರು ಮಾಡುವ ಕಾರ್ಖಾನೆಗಳು ಸಾವಿರಾರು ಇವೆ. ಸುಮಾರು 5 ಲಕ್ಷ ಕಾರ್ಮಿಕರು ದುಡಿಯುತ್ತಿದ್ದಾರೆ. ಇವರಲ್ಲಿ ಶೇ. 95 ಮಹಿಳೆಯರೇ. ಗಾರ್ಮೆಂಟಲ್ಲಿ ಉದ್ಯೋಗ ಮಾಡುತ್ತಾ ಸಣ್ಣಪುಟ್ಟ ಮನೆ ಮಾಡಿಕೊಂಡು ದೂರದ ಊರಿನಲ್ಲಿರುವ ತಮ್ಮ ಕುಟುಂಬಗಳನ್ನು ಸಾಕುತ್ತಿರುವವರು ಹಲವಾರು ಮಂದಿ. ಇದು ಅವರ ಜೀವನಾಧಾರವೂ ಸಹ. ಜವಾಬ್ದಾರಿ ಇಲ್ಲದ ಕುಡುಕ ಗಂಡನನ್ನು ಕಟ್ಟಿಕೊಂಡು, ಅವರ ಕಿರುಕುಳಗಳನ್ನು ಸಹಿಸಿಕೊಂಡು ಇಡೀ ಕುಟುಂಬವನ್ನು ಸಲಹುವವರು ಇವರು. ಇನ್ನೊಂದೆಡೆ ತಾನು ಕೆಲಸ ಕಾರ್ಖಾನೆಗಳಲ್ಲಿ ಮೇಲ್ವಿಚಾರಕರ ಕಿರುಕುಳ, ಕೆಲಸದ ಒತ್ತಡ, ರಜೆ ಕೊಡದಿರುವುದು, ಇವುಗಳನ್ನು ಸಹಿಸಿಕೊಂಡು ತನ್ನ ಸಂಸಾರದ ಅಭ್ಯುದಯಕ್ಕಾಗಿ ಹಗಲಿರುಳು ದುಡಿಯುವ ಮಹಿಳೆಯರ ಬದುಕು ಹಸನಾಗುವುದಾದರೂ ಎಂದು? ಹಲವಾರು ಕಾರ್ಖಾನೆಗಳಲ್ಲಿ ಪ್ರತಿದಿನವೂ ಓವರ್ ಟೈಂ, ಪ್ರತಿ ಭಾನುವಾರವೂ ಓವರ್ ಟೈಂ. ಅಕಸ್ಮಾತ್ ಒಂದು ದಿನ ಭಾನುವಾರ ಕೆಲಸಕ್ಕೆ ಬರಲಾಗದಿದ್ದರೆ ಮಾರನೆ ದಿನ ಗೇಟಿನಲ್ಲಿ 2-3 ಗಂಟೆಗಳ ಕಾಲ ನಿಲ್ಲಿಸಿ ನಂತರ ಪ್ರೊಡಕ್ಷನ್ ಮ್ಯಾನೇಜರ್ ಕರೆದು ವಿಚಾರಣೆ ಮಾಡಿ, ಬಳಿಕ ಒಂದು ದಿನದ ವೇತನ ಕಡಿತ ಮಾಡಿ ನಂತರ ಕೆಲಸಕ್ಕೆ ಕರೆದುಕೊಳ್ಳುವುದು. ನಂತರದಲ್ಲಿ ಸಾಯಂಕಾಲ ದುಡಿಮೆಯ ಅವಧಿ ಮುಗಿದ ನಂತರವೂ ಅವರು ಕೊಟ್ಟ ಟಾರ್ಗೆಟ್ ರೀಚ್ ಆಗದಿದ್ದರೆ ಅಂದರೆ ಒಂದು ಗಂಟೆಗೆ ಎಷ್ಟು ಪೀಸ್‌ಗಳನ್ನು ಕೊಡಬೇಕೆಂದು ಗುರಿ ನಿಗದಿ ಮಾಡಿ ಇಟ್ಟಿರುತ್ತಾರೆ-ಸಂಜೆ 5 ಗಂಟೆಗೆ ಹೊತ್ತಿಗೆ ಆ ಗುರಿ ತಲುಪದಿದ್ದರೆ ಕನಿಷ್ಟ ಒಂದೆರೆಡು ಗಂಟೆಗಳಾದರೂ ಕೆಲಸ ಮಾಡಿ ಆ ದಿನದ ಟಾರ್ಗೆಟ್ ಮುಗಿಸಿ ನಂತರವೇ ಮನೆಗೆ ಹೋಗಬೇಕು. ಈ ಕೆಲಸಕ್ಕೆ ಯಾವುದೇ ರೀತಿಯ ವೇತನ ಇರುವುದಿಲ್ಲ. ಇಷ್ಟೆಲ್ಲಾ ಕೆಲಸ ಮಾಡಿದರೂ ಕೈ ತುಂಬಾ ಸಂಬಳ ಇಲ್ಲ, ಹೊಟ್ಟೆಗಾದರೆ ಬಟ್ಟೆಗಿಲ್ಲ, ಬಟ್ಟೆಗಾದರೆ ಹೊಟ್ಟೆಗಿಲ್ಲ ಎನ್ನುವಂತಹ ಸ್ಥಿತಿ.

ಬೆಂಗಳೂರಿನ ಹಲವಾರು ಕಾರ್ಖಾನೆಗಳಲ್ಲಿ ಇಎಸ್‌ಐ ಸೌಲಭ್ಯ ಇಲ್ಲ, ಪಿಎಫ್ ಇಲ್ಲ, ಬೋನಸ್ ಅಂತೂ ಇಲ್ಲವೇ ಇಲ್ಲ. ಬಹುತೇಕ ಎಲ್ಲಾ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲೂ 4 ವರ್ಷಗಳ ಕಾಲ ಕೆಲಸ ಮಾಡಿದ ನಂತರ ಕಾರ್ಮಿಕರಿಂದ ರಾಜಿನಾಮೆ ತೆಗೆದುಕೊಳ್ಳುವುದು ನಂತರ ಅವರನ್ನು ಕೆಲಸಕ್ಕೆ ಪುನರ್ ನೇಮಕ ಮಾಡಿಕೊಳ್ಳುವುದು ಇವು ಅವ್ಯಾಹತವಾಗಿ ನಡದೇ ಇರುತ್ತವೆ.

ನಮ್ಮ ದೇಶದಲ್ಲಿ ತಯಾರಾಗುವ ಗಾರ್ಮೆಂಟ್ಸ್ ಬಟ್ಟೆಗಳು ಹೆಚ್ಚಾಗಿ ಅಮೆರಿಕಾಗೆ ಮಾರಾಟವಾಗುತ್ತವೆ. ಕಳೆದ ವರ್ಷ ಅಮೆರಿಕಾದ ಆರ್ಥಿಕ ಪರಿಸ್ಥಿತಿಯಿಂದಾಗಿ ಸಿದ್ದ ಉಡುಪುಗಳ ದರಗಳನ್ನು ಇಳಿಸಲಾಗಿದೆ ಮತ್ತು ಬಾಂಗ್ಲಾ, ವಿಯೆಟ್ನಾಂ, ಚೈನಾ, ಶ್ರೀಲಂಕಾ, ಕಾಂಬೋಡಿಯಾ ದೇಶಗಳು ಪೈಪೋಟಿ ಒಡ್ಡಿ ಮುಂದೆ ಬಂದ ಪರಿಣಾಮ ಭಾರತ ದರವನ್ನು ಕಡಿಮೆ ಮಾಡಿದ್ದರ ಫಲವಾಗಿ ಬೆಂಗಳೂರಿನ ಅನೇಕ ಗಾರ್ಮೆಂಟ್ಸ್ ಕಾರ್ಖಾನೆಗಳು ಮುಚ್ಚುವ ಪರಿಸ್ಥಿತಿ ಬಂದಿತ್ತು. ಇದರ ಪರಿಣಾಮ ಸಾವಿರಾರು ಜನ ಕೆಲಸ ಕಳೆದುಕೊಳ್ಳಬೇಕಾಯಿತು. ಜಾಗತಿಕ ಬಿಕ್ಕಟ್ಟಿನ ಪರಿಣಾಮದ ಅರಿವಿಲ್ಲದ ಈ ಮಹಿಳೆಯರು ಯಾವುದೇ ಪರಿಹಾರವಿಲ್ಲದೆ ಕೆಲಸವೂ ಇಲ್ಲದೆ ಇರುವಂತಹ ಪರಿಸ್ಥಿತಿ ಎದುರಾಗಿದೆ. ಇಂದು ನಗರದ ನಾನಾ ಕಡೆಗಳಲ್ಲಿ ಬೆಳಗಿನ ಹೊತ್ತು ಸಾವಿರಗಟ್ಟಲೆ ಮಹಿಳಾ ಕಾರ್ಮಿಕರು ದುಡು ದುಡು ಎಂದು ಓಡುತ್ತಾ ಬಸ್ಸುಗಳನ್ನು ಹತ್ತಿ ಫ್ಯಾಕ್ಟರಿಗೆ ಓಡುವುದನ್ನು ನಾವು ನೋಡುತ್ತಿರುತ್ತೇವೆ. ಒಂದೆರೆಡು ನಿಮಿಷ ತಡವಾದರೆ ಸಂಬಳ ಕಡಿತದ ಭಯ. ಸೂಪರ್‌ವೈಸರ್‌ನ ಬೈಗುಳ, ಇವೆಲ್ಲವನ್ನು ಎದುರಿಸಬೇಕಲ್ಲ ಎನ್ನುವ ಆತಂಕ ಮುಖದಲ್ಲಿ ಕಾಣುತ್ತಿರುತ್ತದೆ. ಇವೆಲ್ಲವನ್ನು ಸಹಿಸಿ ದುಡಿದು ಹಣ್ಣಾಗುವ ಈ ಮಹಿಳೆಯರು ಮನೆಯಲ್ಲಿ ಸಹ ನೆಮ್ಮದಿಯನ್ನು ಕಾಣದಂತಹ ಜನ.

ಪೀಣ್ಯ ಕೈಗಾರಿಕಾ ಪ್ರದೇಶ, ತುಮಕೂರು ರಸ್ತೆ, ಬನ್ನೇರು ಘಟ್ಟ ರಸ್ತೆ, ಮೈಸೂರು ರಸ್ತೆ, ಹೊಸೂರು ರಸ್ತೆ, ಬೆಂಗಳೂರಿನ ಎಲ್ಲ ಭಾಗಗಳಲ್ಲಿಯೂ ಗಾರ್ಮೆಂಟ್ಸ್ ಕಾರ್ಖಾನೆಗಳಿವೆ. ಮಹಿಳಾ ಕಾರ್ಮಿಕರ ಅಪಾರ ಶ್ರಮ ಹಾಗೂ ಕೌಶಲ್ಯದಿಂದ ಸಿದ್ಧವಾದ ಈ ಸಿದ್ಧ ಉಡುಪುಗಳನ್ನು ಮಾಲೀಕರು ವಿದೇಶಗಳಿಗೆ ರಫ್ತು ಮಾಡಿ ಅಪಾರ ಲಾಭ ಗಳಿಸುತ್ತಿದ್ದಾರೆ. ಅದೇ ಕೇಂದ್ರ ರಾಜ್ಯ ಸರ್ಕಾರಗಳಿಗೂ ಈ ಕಾರ್ಮಿಕರ ಶ್ರಮ ಅಪಾರವಾದ ಲಾಭವನ್ನು ತರುತ್ತಿದೆ. ಖಜಾನೆಯನ್ನು ತುಂಬುತ್ತಿದೆ. ಆದರೆ ತನ್ನ ಕಾರ್ಖಾನೆಯಲ್ಲಿಯೂ ಕೆಲಸ ಮಾಡುವ ಕಾರ್ಮಿಕರ ಬಗ್ಗೆ ಕನಿಷ್ಟ ಕಾಳಜಿಯೂ ಇಲ್ಲದೆ ಅವರನ್ನು ಹೊರ ಹಾಕುವಂತಹ ಅಮಾನವೀಯ ಪರಿಸ್ಥಿತಿ ಇದೆ. ಇದಕ್ಕೆ ಪರಿಹಾರ ಏನು? ಇದು ಜನಸಾಮಾನ್ಯರನ್ನು ಕಾಡುವ ಪ್ರಶ್ನೆ.



ಅಂಗನವಾಡಿ ತಾಯಿಯ ಒಡಲಾಳದ ಬೇಗುದಿ

ಯಮುನಾ ಗಾಂವ್ಕರ್
ಕಾರವಾರ

ಏನೆಂದು ವಿವರಿಸುವುದು ಅಂಗನವಾಡಿ ತಾಯಿಯ ಒಡಲಾಳದ ನೋವುಗಳನ್ನು. ತಾಯಿ ಮಗುವಿನ ಆರೈಕೆಯ ಜೊತೆಗೆ ಹತ್ತೆಂಟು ಇಲಾಖೆಗಳ ಕೆಲಸದ ಹೊರೆ, ಗ್ರಾಮೀಣ ಪಟ್ಟಭದ್ರರಿಂದ ಕಿರುಕುಳಗಳು, ಸಾಲದ ವೇತನ ಸೌಲಭ್ಯಗಳು. ಒಂದೇ, ಎರಡೇ? ಆದರೆ ಎದೆಗುಂದಿಲ್ಲ ಈ ಅಂಗನವಾಡಿ ಬಾಯಿ.. ಇಲ್ಲಿವೆ ಕೆಲವು ತುಣುಕುಗಳು. ಅಂಗನವಾಡಿಗಳನ್ನು ನಿರ್ವಹಿಸುತ್ತಾ, ಅಂಗನವಾಡಿ ನೌಕರರ ಚಳುವಳಿಯನ್ನು ಕಟ್ಟುತ್ತಾ, ತಮ್ಮ ಬದುಕನ್ನು ಕಟ್ಟಿಕೊಳ್ಳಲು ಬಂದಿರುವ ದಿಟ್ಟ ಕಾರ್ಯಕರ್ತೆಯರ ಬದುಕಿನ ಕೆಲವೊಂದು ಚಿತ್ರಗಳು



ನಾನು ಹುಟ್ಟಿದ ವರ್ಷವೇ ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ICDS) ಪ್ರಾರಂಭವಾಗಿದ್ದುದು.ಆದರೆ ನನಗೆ ಅಂಗನವಾಡಿಗೆ ಸೇರಲಾಗಲಿಲ್ಲ. ಆದ್ರೆ ಚಿಕ್ಕವಳಿದ್ದಾಗ ಊರಲ್ಲಿ ಹೊಸ ಅಂಗನವಾಡಿಗೆ ಒಬ್ಬಳು 'ಚಿಕ್ಕಮ್ಮ' ಬಂದ್ರು. ಆಗ ಅಂಗನವಾಡಿ ಕೆಲಸ ಅಂದ್ರೆ ಬಿಟ್ಟಿ ಚಾಕ್ರಿ ಕೆಲಸ ಅಂತಿದ್ರು. ಹೆಂಗಸೊಬ್ಬಳು ಮನೆ-ಮನೆ ತಿರುಗಾಡಿ ಸಮುದಾಯದ ದೇಖರೇಕೆ ನೋಡಿಕೊಂಡು ಬರುವಾಗ ನೂರೆಂಟು ಕಣ್ಣುಗಳು ಎದುರಾಗುತ್ತಿದ್ದುವು. ವಿವಿಧ ದೃಷ್ಟಿ-ಬರೀ ಸಂಶಯದ ದೃಷ್ಟಿ. ಕೆಲವರಂತೂ ಒಂದು ಹೆಜ್ಜೆ ಮುಂದೆ ಹೋಗಿ ವೇಶ್ಯೆಯ ಪಟ್ಟವನ್ನೂ ಘೋಷಿಸುತ್ತಿದ್ದರು. ಪುಂಡರು ಅಡ್ಡಗಟ್ಟಿ ಮಾನಭಂಗಕ್ಕೂ ಯತ್ನಿಸುತ್ತಿದ್ದರು. ಆ ಚಿಕ್ಕಮ್ಮ ತನ್ನ ಸಂಬಂಧಿಕರ ಮನೆಯಲ್ಲಿ ಉಳಿದುಕೊಂಡಿದ್ದಳು. ಬೆಳಿಗ್ಗೆ 5ಕ್ಕೆ ಎದ್ದು ಕೊಟ್ಟಿಗೆ ಸೆಗಣಿ ತೆಗೆದು, ಗೊಬ್ಬ ಗುಂಡಿಗೆ ಸೊಪ್ಪು ಹಾಕಿ, ಹಾಲು ಕರೆದು, ಮನೆ ಜನರಿಗೆ ತಿಂಡಿ ಹಾಕಿ, ಎದ್ದು ಬಿದ್ದು ಹುಳುಕಲು ಸೀರೆಯುಟ್ಟು ಅಂಗನವಾಡಿಗೆ ಓಡಿಹೋಗುತ್ತಿದ್ದ ನೆನಪು ಇನ್ನೂ ಹಸಿಯಾಗಿದೆ.

75 ರೂ. ಸಂಬಳದಿಂದ

ಅಂದು ಕೇವಲ 75 ರೂ. ಸಂಬಳಕ್ಕೆ ನನ್ನೂರಲ್ಲಿ ಮೊದಲ ಕೇಂದ್ರ ಸ್ಥಾಪಿಸಿದಾಗ ಹಲವು ರೀತಿಯ ತೊಯ್ದಾಟ. 'ಕುಗ್ರಾಮಕ್ಕೊಂದು ಅಂಗನವಾಡಿ; ಅದಕ್ಕೊಂದು ಹೆಂಗಸು ಶಿಕ್ಷಕಿ! ಬಡವ-ಬಲ್ಲಿದ, ಜಾತಿ-ಭೀತಿ ಇಲ್ಲದೇ ಉಪ್ಪಿಟ್ಟು-ಚಿತ್ರಾನ್ನ ತಿನ್ನೋದು. ಆಟ ಆಡೋದು' ಎನ್ನುವ ಸುದ್ದಿ ಕೇಳುತ್ತಲೇ, ತನ್ನ ಮಕ್ಕಳು ಎಲ್ಲರೊಳಗೊಂದಾಗಿ ಕಲೆಯುವುದನ್ನು ನೋಡಿ ಸಿಟ್ಟಿಗೆದ್ದ ಪುರೋಹಿತನೊಬ್ಬ... 'ನೀತಿಗೆಟ್ಟವಳೇ! ಅಂಗನವಾಡಿ ಮಾಡನ್ನು ಸುಟ್ಟು ಹಾಕಿಬಿಡುವೆ, ನನ್ನ ಮಗನನ್ನ ಎಲ್ಲರ ಜೊತೆ ಕುಳ್ಳಿರಿಸಿದ್ದೀಯಾ? ' ಎನ್ನುವ ಧಮಕಿ. 'ಇಲ್ಲಾ ಮಾರಾಯ್ರೆ... ಕಾಲಿಗೆ ಬೀಳ್ತೆ. ಎನ್ಗೆ ಈ ಅಂಗನವಾಡಿಂದೇನೇ ಹೊಟ್ಟೆ ತುಂಬೋದು. ಕೆಲ್ಸ ಒಂದ್ ಬಿಡ್ಸಡಿ' ಎಂದು ಕೂಗಿದ್ದನ್ನು ಕನ್ನಡ ಶಾಲೆಯ ಕಿಟಕಿಯಿಂದಲೇ ನೋಡಿದ್ದೆ.

ಇದನ್ನೆಲ್ಲ ಸಹಿಸಿ ಕೆಲಸ ಮಾಡಿದ ಆ ಶಿಕ್ಷಕಿಯ ರೀತಿಯಲ್ಲೇ ನಮ್ಮ ನಾಡಿನಲ್ಲಿ ಹಲವಾರು ಅಂಗನವಾಡಿ ತಾಯಂದಿರು ಐಸಿಡಿಎಸ್ ಗೋಸ್ಕರ ಜೀವ ತೇಯ್ದಿದ್ದಾರೆ, ಊರ ಕಾಮುಕರ, ಸ್ಥಳೀಯ ಹಿತಾಸಕ್ತ ರಾಜಕಾರಣಿಗಳ,ಅಧಿಕಾರಿಗಳ ದರ್ಪದ ವಿರುದ್ಧ ತಮ್ಮ ಉತ್ತಮ ಕೆಲಸದ ಮೂಲಕವೇ ಪ್ರತೀಕಾರ ತೀರಿಸಿಕೊಂಡಿದ್ದಾರೆ. ಇಂದು ಐಸಿಡಿಎಸ್ ಗೊಂದು ಉನ್ನತ ಸ್ಥಾನ, ಒಳ್ಳೆ ಹೆಸರು ಬಂದಿದ್ದಲ್ಲಿ ಅದಕ್ಕೆ ಕಾರಣ ಅಹರ್ನಿಶಿ ದುಡಿತದ ಅಂಗನವಾಡಿ ತಾಯಂದಿರು. ಅಷ್ಟೇ ಅಲ್ಲ, ಅಂಗನವಾಡಿ ಶಿಕ್ಷಕಿಯರಿಗೆ ಸಮಾಜದಲ್ಲಿ ಗೌರವವಿರಲು, ತಲೆ ಎತ್ತಿ ನಡೆಯಲು, ಕುಟುಂಬದಲ್ಲಿ ಮರ್ಯಾದೆಯಿಂದ ಕಾಣುವಂತಾಗಲು ಕಾರಣ ಹತ್ತಾರು ವರ್ಷಗಳ ಪ್ರಜ್ವಲವಂತ ಹೋರಾಟಗಳು, ಅವರ ಜೀವನಕ್ಕೊಂದು ಹೊಸ ಆಯಾಮ ನೀಡಲು, ಬೆಲೆ ಏರಿಕೆಯಿಂದ ತತ್ತರಿಸಿದ ಕುಟುಂಬವು ಒಬ್ಬನ ಆದಾಯದಲ್ಲಿ ಬದುಕಲಾರದಂತಹ ಸಂದರ್ಭದಲ್ಲಿ ಸಿಐಟಿಯುದಂಥ ಕ್ರಾಂತಿಕಾರಿ ಮುಂಚೂಣಿ ಸಂಘಟನೆಯಡಿಯಲ್ಲಿ ಸಂಘಟಿತರಾದುದೇ ಕಾರಣ ಎಂದು 34 ವರ್ಷದ ನಂತರ ಇಂದು ಸ್ಪಷ್ಟ ಚಿತ್ರಣ ನಮ್ಮೆದುರು ಇದೆ.

ಒಂದು ಸ್ಪಷ್ಟ ಉದ್ದೇಶಕ್ಕಾಗಿ ಕೆಲವು ಜಿಲ್ಲೆಗಳ ಅಂಗನವಾಡಿ ನೌಕರರ ಮುಂದಾಳುಗಳ ಜೀವನ ಪರಿಸ್ಥಿತಿ ಕೆಣಕಿದೆ. ಹೌದು, ಜೀವನದ ಅತ್ಯಂತ ಕೆಟ್ಟ ಅನುಭವದ ಮೂಸೆಯಲ್ಲಿ ಬೆಳೆದು ಬಂದುದರಿಂದಲೇ ಅವರು ತಮ್ಮ ತಮ್ಮ ಭಾಗದಲ್ಲಿ ಶೋಷಣೆಗೊಳಗಾದ ಸಮುದಾಯುವನ್ನು ಸಂಘಟಿಸುತ್ತಿದ್ದಾರೆ ಎಂಬುದು ಅರ್ಥವಾಗುತ್ತದೆ.

ಅವರದೇ ಮಾತಿ ನಲ್ಲಿ ಕೇಳುವುದಾದರೆ ಇನ್ನೂ ಉತ್ತಮ ಅಲ್ಲವೇ?

ವಲಸೆ ಕುಟುಂಬದ ಮಗಳು ಮಹಾರಾಷ್ಟ್ರದ ಅಕ್ಕಲಕೋಟದಲ್ಲಿ ಕೂಲಿ ಕಾರ್ಮಿಕನೊಬ್ಬನ 7ಜನ ಮಕ್ಕಳಲ್ಲಿ ಶಾಂತಾ ಒಬ್ಬಳು. ಕಿತ್ತು ತಿನ್ನುವ ಬಡತನದ ಬೇಗೆ ತಾಳಲಾರದೇ ಬಿಸಿಲ ನಾಡು ಗುಲ್ಬರ್ಗದ ಅಪ್ಜಲಪುರಕ್ಕೆ ಬಂದಾಗ 17 ವರ್ಷ. ತನ್ನ ಜೀವನ ನಿರ್ವಹಣೆಗಾಗಿ ಸಂಬಂಧಿಕರ ನೆರವಿನೊಂದಿಗೆ '175 ರೂ. ಸಂಬಳದ ನೌಕರಿ' ಅಂಗನವಾಡಿಬಾಯಿಯಾಗಿ 27 ವರ್ಷದ ಹಿಂದೆ ಸೇರಿದ್ರು. ಭಾಗ್ಯ ಬಂದಂಗಾಯ್ತು ಅವರಿಗೆ. ಜೋಪಡಿಪಟ್ಟಿಯೇ ಅರಮನೆಯಾಗಿತ್ತು. ಹಾಗೇ ಜೀವನ ಸ್ವತಂತ್ರವಾಗಿ ನಡೆಸಲು ಕಲಿಸಿದ್ದು ಕೂಡ ಈ ನೌಕರಿನೇ. ನಂತರ ಸುತ್ತಲಿನ ಅಂಗನವಾಡಿ ಬಾಯಿಯರ ಪರಿಸ್ಥಿತಿಗೂ ತನಗೂ ವ್ಯತ್ಯಾಸವಿಲ್ಲ

ಎಂಬ ಅರಿವಿನೊಡನೆ ಬದುಕಲು ಬೇಕಾದ ಕೂಲಿ, ಸೌಲಭ್ಯಗಳಿಗಾಗಿ ಚಳುವಳಿ ಸೇರಿಕೊಂಡರು. ಇಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ(ಸಿಐಟಿಯು)ದ ರಾಜ್ಯ ಅಧ್ಯಕ್ಷರು ಇವರೇ. ತನ್ನ ಕುಟುಂಬದ ಜವಾಬ್ದಾರಿ ಕೂಡ ಇವರಿಗಿದೆ. ಕನಿಷ್ಟ ಕೂಲಿಗಾಗಿ ಹೋರಾಡುತ್ತಾ ಇತರೇ ಸಂಗಾತಿಗಳೊಂದಿಗೆ ಜೈಲಿಗೂ ಹೋಗಿ ಬಂದರು.

ಗಟ್ಟಿಧ್ವನಿ

ಬೀದರ ಜಿಲ್ಲೆಯ ಅಂಗನವಾಡಿ ನೌಕರರ ಗಟ್ಟಿ ಧ್ವನಿ ಬಕುಲಾ. ಇಡೀ ಮನೆ ನಿರ್ವಹಿಸಿದ್ದೇ ಈ ಕೆಲಸದಿಂದ. ಹಾಗೇ ಬೆಳಗಾವಿಯ ಹುಕ್ಕೇರಿಯ ಚೆನ್ನಮ್ಮ ಮದುವೆಯಾಗಿ ತಿಂಗಳೂ ಕೂಡ ಗಂಡನೊಡನೆ ಜೀವನಮಾಡಲು ಅಸಾಧ್ಯವಾದಷ್ಟು ಪೆಟ್ಟು ತಿಂದರು. ದೂರದ ಬಾಂಬೆಯಿಂದ ತವರು ಮನೆಗೆ ಬಂದರೆ ಬಡತನದ ಬೇಗುದಿ. ತವರು ಮನೆಗೆ ಆಶ್ರಯವಾಗಿ ಇಂದಿಗೂ ಕೆಲಸ ಮಾಡುತ್ತಿದ್ದಾರೆ.

ಬೀಡಿ ಕಾರ್ಮಿಕನ ಮಗಳು

43 ವರ್ಷದ ರವಿಕಲಾ ಮಂಗಳೂರಿನ ಪುದು ಗ್ರಾಮದ ಬೀಡಿ ಕಾರ್ಮಿಕನ ಮಗಳು. ಶಾಲೆಯಲ್ಲಿ ಬಡಮಕ್ಕಳಿಗೆ ಊಟ ಕೊಟ್ಟಿದ್ದರಿಂದ, ಬೀಡಿ ಸ್ಕಾಲರ್ ಶಿಪ್ ಬಂದಿದ್ದರಿಂದ ಬಿಎ ತನಕ ಕಲಿತರು. ಇಂದು ಆರ್ಥಿಕ ಆದಾಯದ ಕೆಲಸವಲ್ಲದಿದ್ದರು ಊಟಕ್ಕೆ ಕೊರತೆಯಿಲ್ಲ. ಕೆಲ ಒಳ್ಳೆದಿದೆ ಮಾರಾಯ್ರೆ ಆದ್ರೆ ಕೂಲಿ ಕಡಿಮೆ! ಹಾಗಾಗಿ ಎಷ್ಟು ದುಡಿದರು ಕಷ್ಟದಲ್ಲೇ ಜೀವನ ಸಾಗಬೇಕು ಅಂತಾರೆ.

ಆಕಾಶ ಕಾಣುವ ಮಾಡು

ಮುಂಡಗೋಡಿನ ಅಮಿನಾಬಿಗೆ ಸ್ವಂತ ವಯಸ್ಸು ಗೊತ್ತಿಲ್ಲ. ಸಹಾಯಕಿಯಾಗಿ ಕೆಲಸ. ಗಂಡ ಡ್ರೈವರ್. ಸಂಬಂಧ ಕಡಿತಮಾಡಿದ್ದರಿಂದ ಕುಟುಂಬ ನಿರ್ವಹಣೆ ಈಕೆಯದ್ದೇ. ಹರುಕು ತೆಂಗಿನ ಮನೆಮಾಡುಗಳ ಮಧ್ಯೆ ಆಕಾಶ ಕಾಣುತ್ತದೆ. ಊಹಿಸಿ ಬಡತನವನ್ನು!

ಗಂಡ ಓಡಿಹೋದ.... ರಂಗಮ್ಮ...?

ಸುಡುಬಿಸಿಲ ಊರಿನ ಚಮ್ಮಾರನ ಮಗಳು ರಂಗಮ್ಮಂದು ತೀರಾ ವಿಶಿಷ್ಟವಾದ ಜೀವನ. ಪುರುಷನ ದಬ್ಬಾಳಿಕೆಯ ಪರಮಾವಧಿ ಹೇಗಿದೆಯೆಂದು ಸ್ವತ: ಅನುಭವಿಸಿದವರು. 14 ನೇ ವರ್ಷಕ್ಕೇ ಮದುವೆಯಾಗಿ 1ತಿಂಗಳ ಶಿಶುವಿನ ತಾಯಿಯಾಗುವಷ್ಟರಲ್ಲಿ ಗಂಡ ತೀರಿದ. ಕೂಲಿ ಮಾಡಿ ಮತ್ತೊಂದು ಹೊಸ ಸಂಸಾರ ಕಟ್ಟಿಕೊಂಡರು. 'ಆದಾಗಿ 5ತಿಂಗಳ ಗರ್ಭಿಣಿ ಇರುವಾಗಲೇ ಆತನು ಓಡಿ ಹೋದ. 8ನೇ ತರಗತಿ ಮುಗಿಸಿದ್ದ ನಾನು ಮತ್ತೆ ಹಠ ಹಿಡಿದು 10 ನೆ ತರಗತಿ ಮುಗಿಸಿ ಅಂಗನವಾಡಿ ಶಿಕ್ಷಕಿಯಾದೆ. ಇದೇ ನನ್ನನ್ನು ಉಳಿಸಿದ್ದು. ಜೀವನವೇ ಇದಾಗಿದೆ. ಮೊದಲು ಕೃಷಿ ಕೂಲಿ ಮಾಡುವಾಗ 50-60 ರೂ. ಸಿಗ್ತಿರಲಿಲ್ಲ. ಈಗ ಈಭಾಗ ನೀರಾವರಿ ಆಗಿದ್ದರಿಂದ 60-70 ರೂ. ಸಿಗ್ತಿದೆ. ಅದಕ್ಕಿಂತ ನನಗೆ ಧೈರ್ಯದ ಜೀವನಕ್ಕೆ ಜೊತೆಗೆ ನಾಲ್ಕು ಜನರಿಗೆ ಸಹಾಯ ಮಾಡಲು ಅಂಗನವಾಡಿನೇ ಮಿಗಿಲು' ಎನ್ನುತ್ತಾರೆ ರಾಯಚೂರು ಜಿಲ್ಲೆಯ ಅಂಗನವಾಡಿ ನೌಕರರ ಅಧ್ಯಕ್ಷೆಯೂ ಆದ ರಂಗಮ್ಮ.

ಕುಲಕ್ಕೆ ಹೊರಗಾದ 'ಮುಕ್ತಾ'

ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡಿನ ಮುಕ್ತಾ ತನ್ನ ಹಾಲುಗಲ್ಲದ ಹಸುಳೆಯನ್ನು ಮಡಿಲಲ್ಲಿಟ್ಟು ಜೀವನಕ್ಕೇ ಮುಕ್ತಾಯ ಹಾಕಲು ಹೊರಟಿದ್ದರು. 15 ವರ್ಷಕ್ಕೆ ಮದುವೆಯಾಗಿ ತಿಂಗಳ ಗರ್ಭಿಣಿ ಇರುವಾಗಲೇ ಗಂಡನಿಂದ 'ಪರಿತ್ಯಕ್ತೆ'ಯಾದಳು. ಸಂಪ್ರದಾಯವಾದಿಗಳಿಗೆ ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ! ತವರು ಮನೆಯಿಂದಲೂ ಹೊರಹಾಕಿದರು. ಓಣಿಯಲ್ಲಿ 5-10 ರೂ ಸಂಗ್ರಹಿಸಿ ಜೀವನ ಪ್ರಾರಂಭಿಸಲು ಡಾಕ್ಟರ ಒಬ್ಬರ ಸಹಾಯ. ಕೂಲಿಕಾರ್ಮಿಕರ ಮಕ್ಕಳನ್ನು ಕೆಲವು ವರ್ಷಗಳಕಾಲ ಶಿಶು ಪಾಲನಾ ಕೇಂದ್ರದಲ್ಲಿ ನೋಡಿಕೊಂಡು ಮಗನನ್ನು ಸಾಕಿದರು. 1995ರಲ್ಲಿ ಅಂಗನವಾಡಿ ಕಾರ್ಯಕರ್ತೆಯಾಗಿ ಆಯ್ಕೆಯಾದ ಮೇಲೆ ಮಗನ್ನು ಓದಿಸಿ, ಆಶ್ರಯ ಯೋಜನೆ ಮನೆಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಸಂಘಟನೆಯ ತಾಲೂಕು ಕಾರ್ಯದರ್ಶಿ ಕೂಡ.

ತಲೆ ಮೇಲೆ ಕೈ ಹೊರುವ ಸಮಯವಲ್ಲ


ಹೀಗೆ ಹೇಳುತ್ತ ಹೋದರೆ ತಲೆ ಮೇಲೆ ಕೈ ಹೊತ್ತುಕೊಳ್ಳುವ ಸಮಯವಲ್ಲ ಇದು ಎಂದೆನಿಸದಿರದು. ಶೋಷಣೆ, ಅನ್ಯಾಯ, ಅತ್ಯಾಚಾರ, ಅವಮಾನ, ನಿರಾಶ್ರಯ, ಸಂಶಯ, ಕಿರುಕುಳಗಳನ್ನೆದುರಿಸಿಯೂ ಕುಟುಂಬ ನಿರ್ವಹಿಸುವ ಈ ತಾಯಂದಿರು ಇಡೀ ಸಮುದಾಯದ ಅಭಿವೃದ್ದಿಗಾಗಿಯೂ ದುಡಿಯಬಲ್ಲೆವೆಂದು ತೋರಿಸಿಕೊಟ್ಟಿದ್ದಾರೆ. ಅಂದರೆ ಈಗಿನ ಸ್ಥಿತಿಯು ಅಂತಿಮವಲ್ಲ. ಪ್ರಾರಂಭ ಮಾತ್ರ. ಈವರೆಗಿನ ಇಷ್ಟು ಚಿಕ್ಕ ಹೋರಾಟಗಳೇ ಇಷ್ಟೆಲ್ಲ ಆತ್ಮವಿಶ್ವಾಸ ತುಂಬಲು ಸಾಧ್ಯವಾದರೆ ಹೋರಾಟಗಳು ಇನ್ನಷ್ಟು ಬಲಗೊಂಡರೆ ಮುಂದಿನ ದಾರಿ ಸ್ಪಷ್ಟವಾಗಿ ಗೋಚರಿಸುತ್ತದೆ.

ತಾವು ಜೀವನದಲ್ಲಿ ಎದುರಿಸಿದ ಸಮಸ್ಯೆಗಳೇ ಇಂದು ಸಮುದಾಯವನ್ನು ಕಾಡುವ ಸಮಸ್ಯೆಗಳಾಗಿವೆ. ಅದರ ವಿರುದ್ಧ ಸೆಣಸಾಡಲು ಅಂಗನವಾಡಿಯೊಂದು ಆಶ್ರಯವಾದರೆ, ತಾನು ಅನುಭವಿಸಿದ ಶೋಷಣೆಯು ಸಾರ್ವತ್ರಿಕವಾಗಿದ್ದರಿಂದ ಅದನ್ನು ಕೊನೆಗಾಣಿಸಲು ಸಂಘರ್ಷ ಹೂಡಲು ಕ್ರಾಂತಿಕಾರಿ ಪ್ರಜ್ಞೆಯೊಡಗೂಡಿದ ಸಿಐಟಿಯುನ ಹೋರಾಟವೊಂದೇ ಅಂತಿಮ ಗುರಿ ಎಂದು ಇವರೆಲ್ಲರೂ ಕಂಡುಕೊಳ್ಳುತ್ತಿದ್ದಾರೆ.

ಹೇಳತೀನಿ ಕೇಳಿ,

ಹೀಗೆ ನಾನು ಒಬ್ಬೊಬ್ಬರ ಬಗ್ಗೆಯೂ ಹೇಳುತ್ತ ಹೋದರೆ ಇದು ಮುಗಿಯದ ಕಥೆ. ಆದಾಗ್ಯೂ ಹೊರಗಿನಿಂದ ನೋಡುವ ನಮಗೆ ಕಿಂಚಿತ್ತಾದರೂ ಆಕೆಯ ಒಳ ಬೇಗುದಿ ಅರ್ಥವಾಗಲಿ ಎಂಬ ಕಾರಣಕ್ಕೆ (ಹೆಸರು ಹೆಚ್ಚು ಉಲ್ಲೇಖಿಸದೇ) ಚುಟುಕಾಗಿ ಹೇಳುತ್ತೇನೆ. ಕೇಳಿ, ಒಡನಾಡಿಗಳೇ!

ಸಾಕ್ಷಿ ರಹಿತ, ನ್ಯಾಯರಹಿತ



ಕೆಲಸಕ್ಕೆ ಹೋಗುವಾಗ ಹಲವಾರು ಪ್ರದೇಶಗಳಲ್ಲಿ ಒಬ್ಬರೇ ದಟ್ಟ ಕಾಡು ಮೇಡು ಅಲೆದು ಹೋಗ ಬೇಕಾಗುತ್ತದೆ. ಇದನ್ನೇ ಬಂಡವಾಳ ಮಾಡಿಕೊಂಡು ರಾಯಭಾಗದಲ್ಲಿ ಓರ್ವ ಕಾರ್ಯಕರ್ತೆಯನ್ನು ರೇಪ್ ಮಾಡಿದ. ಕೇಸ್‌ಗೆ ಅರಣ್ಯ ಸಾಕ್ಷಿಯಾಯಿತು! ಸಿಐಟಿಯು ದೀರ್ಘ ಹೋರಾಟ ನಡೆಸಿತು. ಇತ್ತೀಚೆಗೆ ಹಾಸನದ ವರ್ಕರ್ ಓರ್ವಳು ಬಯಲು ಮಲ ವಿಸರ್ಜನೆಗೆ ಹೋದಾಗ ಕಾಮುಕ ಪೂಜಾರಿ ಬಲಾತ್ಕಾರಕ್ಕೆ ಯತ್ನಿಸಿದ.

ನೌಕರಿ ಕಳಕೊಂಡ ಅನಸೂಯಾ

ಅವಳೇ ಮನೆಯಲ್ಲಿ ಹಿರಿಯಳಾದ್ದರಿಂದ ದುಡಿಮೆ ಅನಿವಾರ್ಯವಾಯಿತು. ಸಿದ್ದಾಪುರದ ಕಾವಚೂರಿನಲ್ಲಿ ಫೆರೋ ಅಲಾಯ್ಸ ಕಂಪನಿ ರೋಗಗ್ರಸ್ತವಾದ್ದರಿಂದ ಊರಲ್ಲಿ ಬೇರೇನಿರಲಿಲ್ಲ. ಅಲ್ಲಿವರೆಗೆ ತಮ್ಮ -ತಂಗಿಯರ ಸೇವೆ ಮಾಡಿಕೊಂಡಿದ್ದ ಈಕೆಗೆ ಸಮುದಾಯದ ಮಕ್ಕಳ ಸೇವೆ ಮಾಡಲು ಅಂಗನವಾಡಿ ನೌಕರಿ ಸಿಕ್ತು. ಅದೊಂದು ದಿನ ಅಂಗವಿಕಲರ ಸರ್ವೆಗೆ ಹೋದಾಗ ಪುಂಡ ಯುವಕನೋರ್ವ ಚಾಕುವಿನಿಂದ ಮಾರಣಾಂತಿಕ ಹಲ್ಲೆಗೈದು, ಈಕೆಯನ್ನು ಅಂಗವಿಕಲಗೊಳಿಸಿ ಪರಾರಿಯಾದ. ಆರೋಪಿಗೆ ಪೋಲೀಸರಿಂದ, ರಾಜಕೀಯ ಹಿತಾಸಕ್ತಿಗಳಿಂದ ರಾಜಾಶ್ರಯ ಸಿಕ್ಕಿ ಈಕೆಗೆ ಮೋಸ, ಅನ್ಯಾಯ ಎರಡೂ ಏಕಕಾಲದಲ್ಲಾಯಿತು. ಅರ್ಜಂಟಾಗಿ ಬೇರೊಬ್ಬನ ಜೊತೆಗೆ ಮದುವೆ ಮಾಡಿಸಿದರು. ಕೆಲಸವೂ ಹೋಯ್ತು!

ಹೋರಾಟ ಕಾರ್ಯಕ್ರಮಕ್ಕೆ ಹೋದಾಗ

ತಿಪಟೂರಿನ ಸಂಗಾತಿ ತಪ್ಪದೇ ಹೋರಾಟಕ್ಕೆ ಹೋಗುತ್ತಿದ್ದಳು. ಕಳೆದ ವರ್ಷ ಹೋರಾಟದಿಂದ ಮನೆಗೆ ಹೋಗುತ್ತಲೇ ಗಂಡ ಹೊಡೆ-ಬಡೆ ಮಾಡಿ ಹೊರಗಟ್ಟಿದ. ಸಿಐಟಿಯು ಆಕೆಗೆ ಆಶ್ರಯ ಕೊಟ್ಟು ಸಮಸ್ಯೆ ಬಗೆಹರಿಸಿತು. ದೆಹಲಿಯಲ್ಲಿ ಖಾಯಮಾತಿಗೆ ಹೋರಾಟ ನಡೆಯುತಿತ್ತು. ಅಂಕೋಲಾದ ಲಲಿತಾ ಅಲ್ಲಿಂದ ವಾಪಸ್ ಬರುತ್ತಲೇ ಅವಳ ಗಂಡ ಸಂಬಂಧಿಸಿದ ರಜಿಸ್ಟರ್‌ಗಳನ್ನೆಲ್ಲ ಸುಟ್ಟು ಹಾಕಿದ! ಕೆಲವು ಗಂಡಂದಿರು ಸಂಘಟನೆಯವರಿಗೆ ಫೋನ್ ಮಾಡಿ 'ನನ್ನ ಹೆಂಡತಿನೇ ನಿಮಗೆ ಬೇಕಾ? ಹಾಗೆಲ್ಲ ಹೋರಾಟಕ್ಕೆ ಕಳಿಸೋಕಾಗಲ್ಲ' ಎಂದು ಧಮಕಿ ಹಾಕುತ್ತಾರೆ. ಕೊಪ್ಪಳದ ಪಳ್ಳಿಕೇರಿ ಅಂಗನವಾಡಿ ಕೇಂದ್ರ ಪ್ರಾಥಮಿಕ ಶಾಲೆಯ ಪಕ್ಕ. ಕೆಲಸ ಮುಗಿಸಿ ಬೇಗ ಬಂದಿಲ್ಲ ಎನ್ನುವ ಕಾರಣಕ್ಕೆ ಅವಳ ಗಂಡ ಅಮಾನುಷವಾಗಿ ಹೊಡೆದು ಕೊಲೆಗೈದುಬಿಟ್ಟ!

ಜಾತಿ ಕಾರಣ

ಇಂದಿಗೂ ಜಾತಿ ಅಸ್ಪೃಶ್ಯತೆಯಿಂದ ತಮ್ಮ ಮಕ್ಕಳಿಗೆ ದಲಿತ ಕಾರ್ಯಕರ್ತೆಯಿಂದ ಪಾಠ- ಊಟ- ತಿಂಡಿ ಕೊಡಿಸುವುದಿಲ್ಲ. ಎಚ್ ಡಿ ಕೋಟೆಯ ಹೈರಿಗೆಯ ದಲಿತ ಕಾರ್ಯಕರ್ತೆಗೆ ಊರಲ್ಲಿ ಬಹಿಷ್ಕಾರ ಹಾಕಿದರು. ಆಶ್ರಯವಿಲ್ಲದೆ ಆಕೆ ಆತ್ಮಹತ್ಯೆಗೆ ಯತ್ನಿಸಿದಳು. ಗುಬ್ಬಿ ತಾಲೂಕಿನಲ್ಲಿ ದಲಿತಳೋರ್ವಳಿಗೆ ಅಂಗನವಾಡಿ ಕೆಲಸ ಸಿಕ್ತು ಅಂತ ಇನ್ನೋರ್ವ ಉದ್ಯೋಗಾಕಾಂಕ್ಷಿ ತಾನು ಗ್ರಾಮಪಂಚಾಯ್ತಿ ಸದಸ್ಯೆ ಆದ ನಂತರ ಸೇಡು ತೀರಿಸಿಕೊಳ್ಳಲು ಆ ಭಾಗದ ಎಮ್ ಎಲ್ ಏ ಹೆಂಡತಿಯನ್ನು ಮತ್ತು ಸ್ತ್ರೀಶಕ್ತಿ ಸಂಘದವರನ್ನು ಎತ್ತಿಕಟ್ಟಿ ಅಪಮಾನ ಮಾಡಿದರು. ಆಡಳಿತಶಾಹಿಯೂ ಈಕೆಯ ವಿರುದ್ಧವಾಗಿತ್ತು. ಅಂತಿಮವಾಗಿ ವಿಷ ಸೇವಿಸಿದ ಆಕೆಯ ಪ್ರಾಣ ಉಳಿಸಿದ್ದು, ಅವಳ ಬದುಕನ್ನು-ಕೆಲಸವನ್ನು ಉಳಿಸಿದ್ದು ಸಂಘಟನೆಯ ಹೋರಾಟ ಮಾತ್ರ.

ಅಧಿಕಾರದ ದರ್ಪಕ್ಕೆ ಬಲಿ

ಗುಲಬುರ್ಗದ ಬಿಜೆಪಿ ಕೌನ್ಸಿಲರಳ ಗಂಡ ತಾನು ದಲಿತ ಎಂಬುದನ್ನು ದುರುಪಯೋಗ ಪಡಿಸಿಕೊಂಡು ದರ್ಪದಿಂದ ಕಾರ್ಯಕರ್ತೆಯನ್ನು ತನ್ನ ಮನೆಗೆ ಕರೆದ. ಅನಿವಾರ್ಯ ಕಾರಣದಿಂದ 3 ದಿನ ತಡವಾಗಿ ಹೋದ ಆಕೆಗೆ 'ರಂಡೆ, ಸೂಳೆ, ಬೋಸುಡಿ' ಎಂದೆಲ್ಲ ಬೈದು ಮತ್ತೆ ಮಹಾನಗರ ಪಾಲಿಕೆಗೆ ಕರೆದು ಎಲ್ಲರೆದುರು ದೈಹಿಕ ಹಲ್ಲೆ ನಡೆಸಿ ಸ್ಟೇಷನ್‌ನಲ್ಲಿ ಕಾರ್ಯಕರ್ತೆಯ ವಿರುದ್ಧವೇ ದೂರು ದಾಖಲಿಸಿದ ಭೂಪ! ಸಿಡಿಪಿಓ ರಲ್ಲಿ ಕಾರ್ಯಕರ್ತೆ ರಕ್ಷಣೆ ಕೇಳಿದರೆ ಸಂಘಟನೆಯವರೇ ಬಗೆಹರಿಸಲಿ ಎಂದು ಜಾರಿ ಕೊಂಡರು. (ಅಟ್ರಾಸಿಟಿ ಕೇಸ್ ತನ್ನ ಮೇಲೆ ಬರಬಹುದೆಂಬ ಭಯದಿಂದ) ಅಂಗನವಾಡಿಯನ್ನು ಗ್ರಾಮಪಂಚಾಯತಿಗೆ ವಹಿಸಿದಾಗ ಗ್ರಾಮ ಪಂಚಾಯ್ತಿ ಅಧ್ಯಕ್ಷನ ಮನೆಗೆ ತೆರಳಿದ ಕುಮಟಾದ ಶಾಲಿನಿಯವರ ಕೈ ಮುರಿಯಿತು.

ದೇಶದಲ್ಲಿ ಲಕ್ಷಗಟ್ಟಲೆ ಅಂಗನವಾಡಿ ನೌಕರರು ಈ ರೀತಿಯ ದುರ್ಘಟನೆಯನ್ನು ಸಾಮಾಜಿಕವಾಗಿ, ಕೌಟುಂಬಿಕವಾಗಿ ಎದುರಿಸುತ್ತಲೇ ಬಂದಿದ್ದಾರೆ. ಅಂತಿಮವಾಗಿ ಹೆಣ್ಣಿನ ನಡತೆಯನ್ನೇ ಸಂಶಯಿಸುವ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ನಾವಿದ್ದೇವೆ.

ಮೀಸಲು ಪಡೆಯ ಮೀಸಲು ಸೇವೆ

ಸ್ತ್ರೀಶಕ್ತಿ- ಸ್ವಸಹಾಯ ಗುಂಪಿನ ಕೆಲಸ, ಮತದಾರರ ಪಟ್ಟಿ ತಯಾರಿಸುವಿಕೆ, ಜನಗಣತಿ, ಜಾನುವಾರು ಗಣತಿ, ಜಾತಿವಾರು ಗಣತಿ, ದನಕರು, ಕೋಳಿ ಗಣತಿ, ಬಡತನದ ಕೆಳಗಿರುವವರ ಗಣತಿ, ಪೈಲೇರಿಯಾ ಸಮೀಕ್ಷೆ, ಕುಷ್ಟ ರೋಗ, ಏಡ್ಸ್ ತಿಳಿವಳಿಕೆ, ಪಲ್ಸ್ ಪೋಲಿಯೋ, ಡಿಪಿಈಪಿ, ಅಸಾಂಪ್ರದಾಯಿಕ ಶಿಕ್ಷಣ, ಸಣ್ಣ ಉಳಿತಾಯ-ಸಮೂಹ ವಿಮೆ ತಿಳಿವಳಿಕೆ, ಓಆರ್ ಎಸ್, ಶ್ವಾಸನಾಳದ ಸೋಂಕು, ಕ್ಷಯರೋಗವನ್ನು ಗಮನಿಸಿ ಚಿಕಿತ್ಸೆ ನೀಡುವುದು, ಸಂತಾನ ನಿಯಂತ್ರಣ ಕ್ರಮಕ್ಕೆ ಪ್ರೇರೇಪಿಸುವುದು, ಇವರ ಸೇವೆ ಮೀಸಲು.

ಈ ಕಾರ್ಯಕರ್ತೆ- ಸಹಾಯಕಿಯರಲ್ಲಿ ಬಹುತೇಕ ಜನರಿಗೆ ಸ್ವಂತ ಮನೆ ನಿವೇಶನವಿಲ್ಲ. ಬೇರೆಯವರ ಮಕ್ಕಳ ಹೇಲು- ಉಚ್ಚು ತೆಗೆದರೂ ಸ್ವಂತ ಮಕ್ಕಳ ಆರೋಗ್ಯ, ಶಿಕ್ಷಣ, ಆಹಾರಕ್ಕೆ ಸಂಬಳ ಸಾಲದು. 34 ವರ್ಷಗಳಿಂದ ದುಡಿದು-ದುಡಿದು ಹೈರಾಣಾದ ಜೀವಕ್ಕೆ ಪೂರ್ಣ ಪ್ರಮಾಣದ ಪಿಂಚಣಿಯೂ ಘೋಷಣೆಯಾಗಿಲ್ಲ. ಹೋರಾಟದಿಂದಾಗಿ ಹಲವಾರು ಸೌಲಭ್ಯ ಪಡೆಯಲು ಸಾಧ್ಯವಾದರೂ ಕ್ರಮಿಸಬೇಕಾದ ದಾರಿ ಇನ್ನೂ ಇದೆ. ಅದು ಸುಲಭ ಮಾರ್ಗವಲ್ಲ. ಆಳುವವರ ವಿರುದ್ಧದ ಹೋರಾಟದಲ್ಲಿ ನಿಜವಾಗಿಯೂ ಇವರು ಮುಂಚೂಣಿಯಲ್ಲಿದ್ದಾರೆ.

ಸರ್ಕಾರ ಏನು ಮಾಡುತ್ತಿದೆ?

ಮತ್ತಷ್ಟು ಕೆಲಸದ ಹೊರೆ ಹಾಕುತ್ತಿದೆ. ತನ್ನ ಭ್ರಷ್ಟ ಆರ್ಥಿಕ ನೀತಿಗಳಿಂದಾಗಿ ಐಸಿಡಿಎಸ್ ಮೇಲೆ ಬಂಡೆಗಲ್ಲು. ಐಸಿಡಿಎಸ್ ಯೋಜನೆಯ ಮೂಲ 6 ಅಂಶಗಳ ಉದ್ದೇಶ ಏನೇ ಇದ್ದರೂ ಆರೋಗ್ಯ, ಕಂದಾಯ, ಶಿಕ್ಷಣ, ಪಂಚಾಯತ್ ರಾಜ್, ಸಾಕ್ಷರತಾ, ಸಮಾಜ ಕಲ್ಯಾಣ ಇಲಾಖೆಗಳ ಕೆಲಸಗಳಿಗೆ, ಯಾವುದೇ ಸರ್ಕಾರಗಳ ಜನಪ್ರಿಯ ಯೋಜನೆಗಳ ಜಾರಿಗೆ, ಹೆಚ್ಚುವರಿ ಗೌರವಧನ ರಹಿತ ಬಿಟ್ಟಿ ಕೆಲಸಗಳಿಗೆ ಉಚಿತ ಸೇವೆ ಅಂಗನವಾಡಿ ನೌಕರರದ್ದೇ. ಸಮಾಜೋಪಯೋಗಿ ಕೆಲಸ ಇಷ್ಟೆಲ್ಲ ಇದ್ದರೂ ಸರ್ಕಾರ ಮಾತ್ರ ಖಾಸಗಿಗೆ ವಹಿಸಲು ತುದಿಗಾಲಲ್ಲಿ ನಿಂತಿದೆ. ಮುಷ್ಟಿ ಅನ್ನದಲ್ಲೂ ಲಾಭ ಅರಸುತ್ತಿದೆ. ಖಾಸಗಿ ಸಾರ್ವಜನಿಕ ಸಹಭಾಗಿತ್ವಕ್ಕೆ ಅಂದರೆ ದತ್ತಕಕ್ಕೆ, ತಾಯಂದಿರ ಸಮಿತಿಗೆ, ಗ್ರಾಮಪಂಚಾಯ್ತಿಗೆ, ಕಾರ್ಪೊರೇಟ್ ಹೌಸ್ ಗಳಿಗೆ ವಹಿಸಲು ವಿಶ್ವಬ್ಯಾಂಕ್‌ನಿಂದ 'ಆಶೀರ್ವಾದ' ಪಡೆದಿದೆ. ಇರುವ ಸೌಲಭ್ಯಗಳನ್ನು ವಾಪಸ್ ಪಡೆಯಲು ಹವಣಿಸುತ್ತಿದೆ. ಬಡ ನೌಕರರನ್ನು ಬೀದಿಪಾಲಾಗಿಸಲು ಬಲೆ ಹೆಣೆಯುತ್ತಿದೆ. ಇವರಿಗೆ ಹೋರಾಟದ ವಿನಃ ಬೇರೆ ಹಣೆ ಬರಹವಿಲ್ಲ.

ನೆರೆ-ಬರದ ಸವಾಲಿನಂಗಳದಲ್ಲಿ

ಡಾ. ಮೀನಾಕ್ಷಿ ಬಾಳಿ

ಸಾಮಾನ್ಯವಾಗಿ ಮನೆಯ ಸಾಮಾನು ಸರಂಜಾಮುಗಳನ್ನು ಜತನ ಮಾಡುವವಳು ಮಹಿಳೆ. ಮಕ್ಕಳು ಮುದುಕರನ್ನು ನೋಡಿಕೊಳ್ಳುವವಳು ಅವಳೇ. ಅವಳು ಹೇಗೆ ಅವರನ್ನು ಸಾಮಾನುಗಳನ್ನು ಬಿಟ್ಟು ಪಾರಾಗಲು ಸಾಧ್ಯ.

ಪ್ರಪಂಚದ ಎಲ್ಲ ಅವಘಡಗಳಿಗೆ ಮೊದಲ ಬಲಿ ಮಹಿಳೆ ಮತ್ತು ಮಕ್ಕಳು. ನಿಸರ್ಗಕ್ಕೆ ಖಂಡಿತ ಸ್ತ್ರೀ ಪುರುಷ ಎಂಬ ಭೇದ ಇಲ್ಲ. ಸುಡುವ ಬೆಂಕಿ ಸೂಸುವ ಗಾಳಿ ಹರಿಯುವ ನೀರು ನಡೆದಾಡುವ ಭೂಮಿ ಮತ್ತು ವಿಶಾಲ ಆಕಾಶಕ್ಕೆ ಲಿಂಗಭೇದ ಇಲ್ಲ. ಅಂತೆಯೇ ಭೂಕಂಪ, ನೆರೆಹಾವಳಿ, ಅನಾವೃಷ್ಟಿ, ಅತಿವೃಷ್ಟಿ ಅಥವಾ ಬರಗಾಲಗಳು ಕಾಣಿಸಿಕೊಂಡಾಗ ಸ್ತ್ರೀ ಪುರುಷರೆನ್ನದೆ ಎಲ್ಲರ ಮೇಲೆಯೂ ಇವುಗಳ ದುಷ್ಪರಿಣಾಮ ಸಮಾನವಾಗಿ ಇರುತ್ತದೆ ಎಂಬುದು ನಿಜ. ಆದರೆ ತಾತ್ವಿಕವಾಗಿ ವಸ್ತು ಸ್ಥಿತಿ ಬೇರೆಯೇ ಆಗಿರುತ್ತದೆ. ಇಂಥ ಅವಘಡಗಳು ಸಂಭವಿಸಿದಾಗ ಸಮಾಜದ ಕೆಳ ಅಂಚಿನಲ್ಲಿರುವ ಮಹಿಳೆಯರು ದಲಿತರು ಮತ್ತು ಮಕ್ಕಳ ಮೇಲೆ ಅವುಗಳ ಪರಿಣಾಮ ತೀರ ಗಂಭೀರವಾಗಿರುತ್ತದೆ. ಸಾಮಾನ್ಯ ಪುರುಷರು ಮತ್ತು ಮೇಲ್ವರ್ಗದವರಿಗಿಂತ ಸ್ತ್ರೀಯರು ದುಪ್ಪಟ್ಟು ತಿಪ್ಪಟ್ಟು ಸಂಕಷ್ಟಕ್ಕೆ ಸಿಲುಕುತ್ತಾರೆ. ಅದರಂತೆಯೇ ಜನಾಂಗೀಯ ದ್ವೇಷ ಮತ್ತು ಕೋಮುದಳ್ಳುರಿಗಳು ಘಟಿಸಿದಾಗಲೂ ಆಯಾ ಸಮಾಜದ ಮಹಿಳೆಯರು ಬಲಿಪಶುವಾಗುತ್ತಾರೆ. ಈ ಕುರಿತು ಕಾನ್‌ಪುರ ದಂಗೆ, ಗುಜರಾತ್-ಗೋದ್ರಾ ದಂಗೆ, ಭಾರತ ಪಾಕಿಸ್ತಾನ ವಿಭಜನೆಯ ಸಂದರ್ಭದಲ್ಲಿ ನಡೆಸಲಾದ ಸಮೀಕ್ಷೆಗಳಲ್ಲಿ ಸತ್ಯ ಕಣ್ಣಿಗೆ ಢಾಳಾಗಿ ಎದ್ದು ಕಾಣುವಷ್ಟು ಗೋಚರವಾಗಿದೆ.

ಅಂತೆಯೇ ಉತ್ತರ ಕರ್ನಾಟಕದ 15 ಜಿಲ್ಲೆಗಳಲ್ಲಿ ಮೊನ್ನೆ ಅಂದರೆ ಸೆಪ್ಟೆಂಬರ್ 29 ರಿಂದ ಅಕ್ಟೋಬರ್ 3ನೇ ತಾರೀಕಿನವರೆಗೆ ಐದು ದಿನಗಳಲ್ಲಿ ಸುರಿದ ಮುಸಲಧಾರಾ ಮಳೆಯಿಂದಾಗಿ ಸಂಭವಿಸಿದ ನೆರೆಹಾವಳಿಯಲ್ಲಿ ಮಹಿಳೆಯರು ಮತ್ತು ದಲಿತರು ಎದುರಿಸಿದ ಸಂಕಷ್ಟಗಳು ಶಬ್ದಾತೀತವಾಗಿವೆ. ನೆರೆ ಸಂತ್ರಸ್ಥರ ಬದುಕು ಈಕ್ಷಣದವರೆಗೂ ಯಾತನಾಮಯವಾಗಿಯೇ ಮುಂದುವರೆದಿದೆ.

ರಾತ್ರೋರಾತ್ರಿ ನುಗ್ಗಿತು ನೀರು

ಆಗಸ್ಟ್ ಸೆಪ್ಟೆಂಬರ್ ತಿಂಗಳಲ್ಲಿ ಮಳೆಯ ಸುಳುವು ಕಾಣದೆ ಜನ ಕಂಗಾಲಾಗಿದ್ದರು. ಮುಂಗಾರು ಕೈಕೊಟ್ಟು ನೆಲದಲ್ಲಿ ಬಿತ್ತಿದ ಬೀಜ ಮೊಳಕೆಯೊಡೆದೆ ಭೂಮಿಯೇ ನುಂಗಿ ಹಾಕಿತ್ತು. ಬಡರೈತರ ಕೂಲಿಕಾರ್ಮಿಕರು ಗುಳೆ ಹೋಗತೊಡಗಿದ್ದರು. ಬರಗಾಲಪೀಡಿತ ಪ್ರದೇಶವೆಂದು ಘೋಷಿಸಲು ಚಳುವಳಿಗಳು ನಡೆಯತೊಡಗಿದವು. ಹಾಗೆ ನಡೆದ ಹೋರಾಟಗಳಲ್ಲಿಯೂ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದು ಮಹಿಳೆಯರು. ಆನಂತರ ಸೆಪ್ಟೆಂಬರ್ ಕೊನೆಯ ದಿನಗಳಲ್ಲಿ ಧೋಗರೆದ ಮಳೆಗೆ ಹಳ್ಳಿಗಳು ಜಲಾವೃತಗೊಂಡವು. ಗ್ರಾಮಗಳನ್ನು ಯೋಜನಾಬದ್ಧವಾಗಿ ಕಟ್ಟಿದ್ದೆಲ್ಲಿ? ಕಡೆಪಕ್ಷ ಸುರಿದ ಮಳೆ ನೀರನ್ನು ಹಿಡಿದಿಟ್ಟುಕೊಳ್ಳಲು ಏನೇನೂ ವ್ಯವಸ್ಥೆ ಇಲ್ಲದ ನಮ್ಮ ಹಳ್ಳಿಗಳು ತತ್ತರಿಸಿದವು. ನೀರು ನುಗ್ಗಿ ಅಲ್ಲ, ನೀರು ಹಿನ್ನೀರಾಗಿ ನುಗ್ಗಿ ಜಲಾವೃತಗೊಂಡ ಹಳ್ಳಿಗಳು ಹರಿವಿನ ಹೊಡೆತಕ್ಕೆ ತಲ್ಲಣಿಸಿದವು. ರಾತ್ರೋ ರಾತ್ರಿ ನುಗ್ಗುತ ಬಂದ ನೀರಿನಿಂದ ತಪ್ಪಿಸಿಕೊಳ್ಳಲು ಮಹಿಳೆಯರು ಪಟ್ಟ ಪಾಡು ಎದೆ ನಡುಗಿಸುವಂತಹದ್ದು. ಸಾಮಾನ್ಯವಾಗಿ ಮನೆಯ ಸಾಮಾನು



ಸರಂಜಾಮುಗಳನ್ನು ಜತನ ಮಾಡುವವಳು ಮಹಿಳೆ. ಮಕ್ಕಳು ಮುದುಕರನ್ನು ನೋಡಿಕೊಳ್ಳುವವಳು ಅವಳೇ. ಅವಳು ಹೇಗೆ ಅವರನ್ನು ಸಾಮಾನುಗಳನ್ನು ಬಿಟ್ಟು ಪಾರಾಗಲು ಸಾಧ್ಯ. ಅದರಲ್ಲಿಯೂ ಬಸುರಿ ಬಾಣಂತಿಯರು ತೀವ್ರ ಸಂಕಟಕ್ಕೆ ಒಳಗಾಗಿರುವರು. ವಿಭೂತಿಹಳ್ಳಿಯ ಬಸುರಿ ಹೆಂಗಸನ್ನು ಕೈ ಹಿಡಿದುಕೊಂಡು ನಡೆಸುತ ನಡೆಸುತ ಪಾರಾಗಿ ಅಲಮೇಲ ತಲುಪಿ ಅಲ್ಲೊಂದು ಹೊಲದ ಕೊಂಪೆಯಲ್ಲಿ ಬಾಣಂತನವಾಗಿದೆ. ಅದೇ ಊರಿನ ದಲಿತ ಹೆಣ್ಣುಮಗಳು ತಿಂಗಳ ಮಗುವನ್ನು ಮಡಿಲಲ್ಲಿಟ್ಟುಕೊಂಡು ಪ್ರವಾಹ ಎದುರಿಸಿರುವಳು. ಅದೇ ಊರಿನ ಕುಟುಂಬವೊಂದರ ಮಹಿಳೆಯರು ಹಗಲು ರಾತ್ರಿ ಸರಿ ಮಾಡಿ ಮಕ್ಕಳಿಗೆ ಮುದುಕರಿಗೆ ಆಸರೆಯಾಗಿ ನಿಂತೇ ಹೊತ್ತುಗಳೆದಿರುವರು. ಸಾಮಾನ್ಯವಾಗಿ ಎಲ್ಲ ಹಳ್ಳಿಗಳಲ್ಲಿ ಮಹಿಳೆಯರು ಹರಿದು ಹೋಗುವ ಸಾಮಾನುಗಳನ್ನು ಹಿಡಿದಿಟ್ಟುಕೊಳ್ಳಲು ಸಾಹಸಕ್ಕೆ ಇಳಿದಿರುವರು. ಎಂದೆಂದೂ ತಮ್ಮ ಹಳ್ಳಿಗೆ ನೀರು ನುಗ್ಗಲು ಸಾಧ್ಯವೇ ಇಲ್ಲ ಎಂದುಕೊಂಡ ಮಹಿಳೆಯರು ಇದ್ದಕ್ಕಿದ್ದಂಗೆ ನುಗ್ಗಿದ ಪ್ರವಾಹಕ್ಕೆ ತಕ್ಷಣ ತಮ್ಮ ದನ ಕರುಗಳ ಕೊರಳು ಬಿಚ್ಚಿರುವರು. ಇದರಿಂದ ದನಕರು ಕುರಿಗಳು ಎತ್ತರ ದಿಬ್ಬಿನತ್ತ ಹೋಗಿ ಕೆಲವು ಬಚಾವಾಗಿವೆ. ಪ್ರವಾಹದಿಂದ ಬಚಾವಾಗಲು ಮಹಿಳೆಯರು ಪಟ್ಟ ಪಾಡು ಕಲ್ಪನಾತೀತ. ನಮ್ಮ ಪರಂಪರಾಗತ ಸಮಾಜವು ಮಹಿಳೆಯರಿಗೆ ಈಜು, ವಾಹನ ಓಡಿಸುವುದು ಕುದುರೆ ಸವಾರಿ ಮುಂತಾದ ಕಲಿಕೆಯಿಂದ ದೂರವೇ ಇಟ್ಟ ಪರಿಣಾಮ ನೀರಧಾಳಿಗೆ ಭಯ ಬಿದ್ದಿದ್ದು ಹೌದು. ಆದರೆ ಅದೇ ಹೊತ್ತಲ್ಲಿ ಎದೆಗುಂದದೆ ಮನೆ ಮಂದಿ ಮಕ್ಕಳನ್ನು ಎತ್ತರದ ಗುಡ್ಡ ದಿಬ್ಬಗಳತ್ತ ಕರೆದುಕೊಂಡು ಹೋಗಿದ್ದಾರೆ. ಹುಲಗುಂಚಿ ಎಂಬ ಗ್ರಾಮದಲ್ಲಿ 22 ಜನರು ಪ್ರವಾಹ ಬಂದ ರಾತ್ರಿ ಊರಲ್ಲಿರುವ ಎತ್ತರದಲ್ಲಿರುವ ಆರ್‌ಸಿಸಿ ಛಾವಣಿ ಹತ್ತಿದ್ದಾರೆ. ಒಬ್ಬ ಯುವಕ ಹಗ್ಗದ ಸಹಾಯದಿಂದ 18 ಮಹಿಳೆಯರನ್ನು ನಾಲ್ಕು ಪುರುಷರನ್ನು ಮೇಲೆ ಹತ್ತಿಸಿದ್ದಾನೆ. ಮೇಲೆ ಸುರಿಯುವ ಮಳೆ ಕೆಳಗೆ ಭೋರ್ಗರೆಯುವ ಹೊಳೆ. ಒಟ್ಟು ಮೂವತ್ತಾರು ತಾಸು. ಊಟವಿಲ್ಲ ನಿದ್ದೆಯಿಲ್ಲ. ಬಹಿರ್ದೆಸೆಗಂತೂ ಅವಕಾಶವೇ ಇಲ್ಲ. ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಹಳ್ಳಿಯೊಂದರಲ್ಲಿ ಎಲ್ಲರೂ ಪ್ರವಾಹಕ್ಕೆ ತಲ್ಲಣಿಸಿ ಓಡಿ ಹೋಗಿರುವಾಗ ವಯಸ್ಸಾದ ವೃದ್ಧೆಯೊಬ್ಬಳು ಎದೆ ಒಡೆದು ಸತ್ತೇ ಹೋಗಿರುವಳು.

ಪ್ರವಾಹಕ್ಕೆ ಎದುರಿಸಿ ರಾತ್ರೋ ರಾತ್ರಿ ಗ್ರಾಮಗಳನ್ನು ತೊರೆದು ಗಟ್ಟಿಮುಟ್ಟಾದ ಶಾಲೆ, ಸಮುದಾಯ ಭವನ, ಗಡಂಗು, ದೇವಸ್ಥಾನಗಳಲ್ಲಿ ಆಶ್ರಯ ಪಡೆದಾಗ ಮಹಿಳೆಯರು ಶಾರೀರಿಕ ಮಾನಸಿಕ ಹಿಂಸೆಯೂ

ಅನುಭವಿಸಿದ್ದಾರೆ. ಪುರುಷ ಮತ್ತು ಮಹಿಳೆಯರು ಒಂದೇ ಕಡೆ ಇರುವುದರಿಂದ ಮುಟ್ಟು ಬಹಿರ್ದೆಸೆ ಅವಳನ್ನು ಇನ್ನಿಲ್ಲದಂತೆ ಮಾನಸಿಕವಾಗಿ ಕುಗ್ಗಿಸಿವೆ. ತಲಮಾರಿಯ ಹೆಂಗಸೊಬ್ಬಳು ಎಲ್ಲವೂ ಕಳೆದುಕೊಂಡು ಅಕ್ಷರಶಃ ಹುಚ್ಚಿಯೇ ಆಗಿರುವಳು. ವಿಭೂತಿ ಹಳ್ಳಿಯ ಸರಸಾಬಾಯಿ ಗುಂಡ್ಲೂರು ಗ್ರಾಮದ ಮಕ್ತೂಂಬಿ ಎಂಬ ಮಹಿಳೆಯರು ಹೆರಿಗೆ ಕಾಲದ ಅನುಭವಗಳನ್ನು ಹೇಳುವಾಗ ಮಾತೇ ಆಡಲಿಲ್ಲ. ಕಣ್ಣೀರು ಮಾತ್ರ ಸುರಿಸಿದರು. ಪ್ರತಿ ಹನಿಯೂ ಸಂಕಟಗಳ ಆಗರವಾಗಿತ್ತು. ಭಾಷೆ ಬೇಕಿರಲಿಲ್ಲ. ಅವರು ತಮ್ಮ ಆ ಹೊತ್ತಿನ ನೋವುಗಳನ್ನು ತೋಡಿಕೊಳ್ಳುವಾಗ ಹೇಳಿದ್ದಿಷ್ಟು, ?ನಮ್ ಮುಟ್ಟು ಮೈಲಿಗಿ, ನಮ್ ಸ್ನಾನ ಸಂಡಾಸು ಇವೆಲ್ಲ ನೀವು ಕೇಳಬಾರದ್ರೀ. ನಾವು ಹೇಳಬಾರದ್ರಿ.? ಎಂದು ಅವರು ನತಮಸ್ತಕರಾದರು. ಯಾರ ಕಣ್ಣಲ್ಲಿ ನೀರು ಬರುವುದಿಲ್ಲ ಹೇಳಿ?. ಗೌಡೂರು ಎಂಬ ಗ್ರಾಮದ ಮೂವರು ಅಂಬಿಗರು ಪ್ರವಾಹಕ್ಕೆ ಎದುರಾಗಿ ದೋಣಿಗೆ ಹುಟ್ಟು ಹಾಕಿ ಹಿಮ್ಮತ್ತಿನಿಂದ ಜೀವದ ಹಂಗು ತೊರೆದು ಒಟ್ಟು ನಾಲ್ಕು ನೂರು ಜನರನ್ನು ಉಳಿಸಿರುವರು. ಹಾಗೆ ಬಂದ ಮಹಿಳೆಯರು ಊರಿನ ಸಾಹುಕಾರರೊಬ್ಬರ ಗೋದಾಮಿನ ಬಯಲಂಗಳದಲ್ಲಿ ಬಂದು ನಿಂತರು. ಬಯಲಿನಲ್ಲಿ ಸಾಲಾಗಿ ಒಲೆಗಳು. ಪಾಳಿಯಂತೆ ಕೆಲಸ ಮಾಡಿಕೊಳ್ಳುವರು. ಪಾಳಿಯಲ್ಲಿ ರಾತ್ರಿ ಎಚ್ಚರಿದ್ದು ಗಂಡಸರು ಸಾಮಾನುಗಳನ್ನು ನೋಡಿಕೊಳ್ಳುತ್ತಿದ್ದರು. ಆದರೆ ಹರೆಯದ ಹುಡುಗಿಯರ ತಾಯಂದಿರರು ಮಾತ್ರ ರಾತ್ರಿ ಪೂರ್ತಿ ಎಚ್ಚರ ಇರುತ್ತಿದ್ದರು. ಯಾಕೆಂದು ಕೇಳಿದರೆ, 'ಯಾವ ಟೈಮು ಹೆಂಗ ಬರ್ತದೋ ಏನೋ?. ಯಾರ ಮನಸ್ನಾಗ ಯಾರ ಹೊಕ್ಕು ನೋಡ್ಯಾರರೀ'. ನಮ್ಮ ಎಚ್ಚರದಾಗ ನಾವಿರಬೇಕು. ಹರ್‍ಯಾದ ಮಕ್ಕಳಿಗಿ ಬಯಲ್ನಾಗ ಬಿಟ್ಟು ಹ್ಯಾಂಗ ಇರಬೇಕು?' ಹೆಣ್ಣು ಹೆತ್ತ ತಾಯಂದಿರ ಒಡಲ ತಳಮಳದ ಆಳ ಬಲ್ಲವರಿಗೆ ಇದರ ಮರ್ಮ ಅರಿವಾಗದಿರದು. ಹರೆಯದ ಹುಡುಗಿಯರು ಕಣ್ಣಲ್ಲಿ ನೀರು ತಂದು ನಮ್ಮ ಎದೆಯಲ್ಲಿ ನೋವಿನ ಬೀಜ ನೆಟ್ಟರು. ಅವರು ಎರಡು ದಿನ ಊಟವೇ ಮಾಡಲಿಲ್ಲ. ಬಂದವರು ಕರುಣೆಯಿಂದ ಕೊಟ್ಟಿದ್ದನ್ನು ಯಾಕೆ ತಿನ್ನಲಿಲ್ಲ? ಎಂದು ಕೇಳಿದರೆ, 'ಅಕ್ಕಾರೇ ತಿಂದ್ರ ಬಯಲ ಕಡಿಗಿ ಹೋಗಬೇಕಾಗ್ತದ. ಎಲ್ಲರ ಮುಂದೇ ಎಲ್ಲಿ ಹೋಗಬೇಕ್ರೀ?' ಎಲ್ಲ ಕಡಿಗಿ ನೀರೇ ನೀರು?' ಅವಳ ಕಣ್ಣಲ್ಲೂ ನೀರಿತ್ತು. ಪ್ರವಾಹ ಇಳಿದು ಹೋಯ್ತು. ಆದರೆ ಹೆಂಗೆಳೆಯರ ಕಣ್ಣಲ್ಲಿ ನೋವಾಗಿ ನಿಂತು ಬಿಟ್ಟಿತು.

10 ಫೀಟು ಟಿಣ್ಣು ಶೀಟಿನ ಶೆಡ್ಡಿನಲ್ಲಿ

ಬಿಜಾಪುರ ಸ್ಲಂ ಜನರ ಗೋಳು ನಮ್ಮ ಕಣ್ಣ ಮುಂದೆ ಕಟ್ಟಿದಂತಿದೆ. ಪ್ರವಾಹದ ನೆವದಲ್ಲಿ ನಾಲ್ಕು ನೂರಕ್ಕೂ ಕುಟುಂಬಗಳನ್ನು ಊರ ಹೊರಗೆ ಹತ್ತು ಕಿಲೋ ಮೀಟರ್ ಆಚೆಗೆ ಎತ್ತಂಗಡಿ ಮಾಡಿದರು. ಹೇಳಲಿಲ್ಲ ಕೇಳಲಿಲ್ಲ. ಒಬ್ಬ ಮಹಿಳೆ ಜೀವನದ ತುಂಬ ದುಡಿದು ಕೂಡಿಟ್ಟ ಹಣದಿಂದ ಸಾಲವೂ ಸೇರಿಸಿ ಒಂದು ಪುಟ್ಟ ಮನೆ ಕಟ್ಟಿದ ಮರುದಿನವೇ ಅವರನ್ನು ಹೊರಹಾಕಿ ನೆಲಸಮಗೊಳಿಸಿರುವರು. ಅವಳ ದುಡಿಮೆ ಹೀಗೆ ಅವಳ ಕಣ್ಣ ಮುಂದೆಯೇ ಯಂತ್ರದ ಹಲ್ಲುಗಳಿಗೆ ಸಿಕ್ಕು ಉರುಳುವಾಗ ಅವಳು ಭೋರ್‍ಯಾಡಿ ಅತ್ತಳು. ಜಿಂದಗಾಣಿಯನ್ನು ಚೆಂದ ಹೊಂದಿಸಲು ಕೂಡಿಟ್ಟ ಎಲ್ಲ ಎಲ್ಲವೂ ಕೊಚ್ಚಿ ಹೋಯಿತು. ಹಳ್ಳಿಗಳಲ್ಲಿ ಪ್ರವಾಹ ಬಂದರೆ ಬಿಜಾಪುರ ನಗರದಲ್ಲಿ ಪ್ರವಾಹದ ನೆಪ ಮಾಡಿ ಸ್ಲಂ ಮನೆಗಳನ್ನು ಇಸ್ಪಿಟು ಎಲೆಯಂತೆ ಉದುರಿಸಿದರು. ಊರ ಹೊರಗಿನ ಗಾಂಧೀನಗರ ಅಕ್ಷರಶಃ ಬತ್ತಲೆಯೇ ಆಗಿತ್ತು. 10 ಫೀಟು ಉದ್ದ ಅಗಲದ ಟಿಣ್ಣಿನ ಶೆಡ್ಡಿನಲ್ಲಿ ತಂದು ಜನರನ್ನು ಒಟ್ಟಿದರು. ಬಚ್ಚಲು ಇಲ್ಲ, ಶೌಚಾಲಯ ಇಲ್ಲ, ಕಡೇ ಪಕ್ಷ ನೀರಿನ ಸೌಲಭ್ಯ ಇಲ್ಲ, ನಗರದಲ್ಲಿ ದುಡಿದುಣ್ಣುವವರಿಗೆ ಹೋಗಿ ಬರಲು ಬಸ್ ವ್ಯವಸ್ಥೆ ಇಲ್ಲ. ನಾಲ್ಕು ಮನೆಯ ತುಂಬಿದ ಬಸುರಿಯರು ಕಣ್ಣೀರು ಹಾಕುತ ರಾಶಿ ಸಾಮಾನುಗಳ ನಡುವಿಗೆ ಕೂತಿದ್ದರು. ಅವರ ಕುಟುಂಬದ ಹಿರಿಯರು ದಿಕ್‌ತೋಚದೆ ಬಂದವರ ಎದುರು ತಮ್ಮ ಗೋಳನ್ನು ತೋಡಿಕೊಳ್ಳುತ್ತಿದ್ದರು. ಅದೊಂದು ಬಟಾ ಬಯಲು. ಕನಿಷ್ಠ ನಾಗರೀಕ ಸೌಲಭ್ಯಗಳಿಲ್ಲ. ಗಂಡಸರು ಹೇಗಾದರೂ ದಿನ ದೂಡಬಹುದು. ಮಹಿಳೆಯರು?! ಬಸುರಿಯರು, ಬಾಣಂತಿಯರು? ಸಹಜ ರುತುಚಕ್ರ ಬಂದಾಗ ಹೇಗೆ ನಿರ್ವಹಿಸುವದು? ಕಡೇ ಪಕ್ಷ ನೀರು, ಶೌಚಾಲಯ ಬಚ್ಚಲು ವ್ಯವಸ್ಥೆ ಬೇಡವೆ? ಆ ಹೆಂಗಸರ ಪಡಿಪಾಟಲು ನಮಗೆ ನೋಡಲಾಗಲಿಲ್ಲ.

ಇನ್ನೂ ಕುಟುಂಬದ ನಿರ್ವಹಣೆ ತಾವೇ ಹೊತ್ತ ಮಹಿಳೆಯರು ಮತ್ತು ಒಂಟಿ ಮಹಿಳೆಯರು ಈ ಪ್ರವಾಹದಲ್ಲಿ ತತ್ತರಿಸಿ ಹೋಗಿರುವರು. ಹೇಗೆ ಹೊಂದಿಸುವುದು ಎಲ್ಲವೂ?. ಬಡ ದಲಿತ ಮಹಿಳೆಯರಂತೂ ದಿಕ್‌ತೋಚದೆ ಕಂಗಾಲಾಗಿರುವರು. ಅನುಕೂಲಸ್ಥ ಮಹಿಳೆಯರಿಗೆ ನೆರವಾಗುವವರು ಒಂದಿಷ್ಟು ನೆಂಟರು ಅವರಿವರು ಇದ್ದಾರು. ಆದರೆ ಒಂಟಿ ಮಹಿಳೆಯರ ಬದುಕು ಕೊಚ್ಚಿ ಹೋಗಿದೆ. ಆರ್ಥಿಕವಾಗಿಯೂ ಮಾನಸಿಕವಾಗಿಯೂ ಬಾರ್ಬರಿಕ ಧಾಳಿಗೆ ಅವಳು ಒಳಗಾಗಿದ್ದಾಳೆ. ಅವಳೇ ನಡೆಸುವ ಸಣ್ಣ ಅಂಗಡಿಗಳು ಹರಿದು ಹೋಗಿವೆ. ಇದ್ದ ಒಂದೆರಡು ಹೈನದ ದನಗಳು ಇಲ್ಲವಾಗಿವೆ. ಈಗ ಯಾರತ್ತ ನೆರವಿಗಾಗಿ ಕೈ ಚಾಚುವುದು?

ಉಳಿದದ್ದೊಂದು ಉಸಿರು


ಇದೇ ಹೊತ್ತಲ್ಲಿ ಆಳುವ ಸರಕಾರ ತಾತ್ಕಾಲಿಕ ಕಣ್ಣೊರೆಸುವ ಪರಿಹಾರ ಮಾತ್ರ ಕೊಟ್ಟಿತು. ಆದರೆ ಮುರಿದು ಹೋದ ಮನೆ, ಹರಿದು ಹೋದ ಸಾಮಾನು ಸರಂಜಾಮು, ದನ ಕರು ಕೋಳಿ, ಕೂಡಿಟ್ಟ ಅಲ್ಪ ಮೊತ್ತದ್ದಾದರೂ ಹಣ, ಕೊಚ್ಚಿ ಹೋದ ತಿಪ್ಪೆ ? ! ಉಳಿದದ್ದೇನು? ಅವಳ ಉಸಿರೊಂದು. ಆದರೂ ಮಹಿಳೆಯರು ಪ್ರವಾಹಕ್ಕೆ ಎದುರಾಗಿ ಜೀವನ ಜೈಸಲು ಬಡಿದಾಡಿದ ಪರಿ ಹೆಮ್ಮೆಯ ಸಂಗತಿಯೇ ಹೌದು.ದೂರ ದೂರ ನಡೆದು ತನ್ನ ತೋಳ ತೆಕ್ಕೆಯಲ್ಲಿ ಮಕ್ಕಳು ಮರಿ ಕುರಿ ಕೋಳಿಯಾದಿಯಾಗಿ ಎಲ್ಲವನ್ನೂ ರಕ್ಷಿಸಲು ಹೆಣಗಾಡಿದ್ದಾಳೆ. ರಾತ್ರಿ ಹಗಲು ರೆಪ್ಪೆ ಮುಚ್ಚದೆ ಸಂಸಾರವನ್ನೇ ಕಾಯ್ದಿದ್ದಾಳೆ. ಕಳೆದು ಹೋಗಿದ್ದಾವುದು ಮರಳಿ ಸಿಗಲಿಲ್ಲ.

ಇಷ್ಟೆಲ್ಲ ಹೈರಾಣಾದ ಮಹಿಳೆಯರ ನೋವನ್ನು ಅರ್ಥೈಕೊಳ್ಳುವ ಕನಿಷ್ಠ ಕಾಳಜಿಯೂ ಸರಕಾರ ವ್ಯಕ್ತ ಮಾಡಲಿಲ್ಲ. ಮೂಲಭೂತ ಸೌಲಭ್ಯಗಳು ಮಹಿಳೆಗೆ ಅನಿವಾರ್ಯ ಅವಶ್ಯಕತೆ. ಅವುಗಳ ವ್ಯವಸ್ಥೆ ಮಾಡಲೇಬೇಕಾಗುತ್ತದೆ ಎಂಬ ಕಣ್ಣೋಟವಿಲ್ಲದ ಸರಕಾರ ಮತ್ತು ಸರಕಾರದ ಅಧಿಕಾರಿಗಳು ಮಹಿಳಾ ಸಂಬಂಧಿ ಪ್ರಶ್ನೆಗಳು ಎತ್ತುವುದೇ ತಪ್ಪು ಎನ್ನುವಂತೆ ವರ್ತಿಸಿದೆ. ಕರ್ನಾಟಕದ ಅಕಾಡೆಮಿಕ್ ಲೋಕ ಮೌನ ತಾಳಿದ ಹೊತ್ತಿನಲ್ಲಿ ಹಂಪಿ ವಿಶ್ವ ವಿದ್ಯಾಲಯವು ಲಿಂಗಸಂವೇದನಾ ನೆಲೆಯಲ್ಲಿ ಪ್ರವಾಹ ಪೀಡಿತ ಪ್ರದೇಶದಾದ್ಯಂತ ಸಮೀಕ್ಷೆ ಕಾರ್ಯವನ್ನು ನಡೆಸಿ ವರದಿಯೊಂದನ್ನು ಸಿದ್ಧಪಡಿಸಿ ಶಿಫಾರಸ್ಸುಗಳನ್ನು ಮಂಡಿಸಿದ್ದು ಶ್ಲಾಘನೀಯವಾದದ್ದು. ಜನವಾದಿ ಮಹಿಳಾ ಸಂಘಟನೆಯು ಈ ದಿಕ್ಕಿನಲ್ಲಿ ಗಂಭೀರ ಕೆಲಸ ಮಾಡಿದೆ. ಆದರೆ ಆಳುವ ಸರಕಾರ ಮಾತ್ರ ಲಿಂಗಸಂವೇದನಾಶೀಲ ದೃಷ್ಟಿಕೋನವಿಲ್ಲದ ಕಾರಣ ಮಹಿಳಾ ವಿರೋಧಿಯಾಗಿ ವರ್ತಿಸಿದೆ. ಯಾರ ಆಸರೆ ಇಲ್ಲದಾಗಲೂ ಮಹಿಳೆ ಧೀರತೆಯಿಂದ ಮತ್ತೆ ಬದುಕು ಹೊಂದಿಸಿಕೊಳ್ಳಲು ತನ್ನೆರಡು ರಟ್ಟೆಗಳನ್ನು ಬಳಸಿ ದುಡಿಯುತ್ತಿದ್ದಾಳೆ. ಮಾಯದ ಗಾಯವನ್ನು ಹೊತ್ತೇ ಸವಾಲುಗಳನ್ನು ಎದುರಿಸುತ್ತಿದ್ದಾಳೆ. ಅವಳ ದುಡಿಮೆಯ ಫಲಾನುಭವಿಗಳಾದವರು ಮಾತ್ರ ಅವಳ ಅಸ್ಮಿತತೆ ಅಸ್ತಿತ್ವವನ್ನು ಗೌರವಿಸುವ ಸಂಸ್ಕಾರ ಪಡೆಯುವ ಜರೂರಿ ಇದೆ. ಪ್ರಜ್ಞಾವಂತರು ಆಳುವ ಸರಕಾರದ ದೃಷ್ಟಿ ಧೋರಣೆ ಬದಲಿಸುವಂತೆ ಒತ್ತಡ ಹೇರಬೇಕಾಗುತ್ತದೆ. ಒಟ್ಟಾರೆ ಒಟ್ಟೂ ಸಮಾಜವನ್ನು ಲಿಂಗಸಂವೇದನಾಶೀಲತೆ ಮನೋಭೂಮಿಕೆಯತ್ತ ಕೊಂಡೊಯ್ಯುವ ಹೊಣೆ ಎಲ್ಲರ ಮೇಲೆ ಇದೆ.

ಐ.ಟಿ.ಮಹಿಳೆಯರ ದು:ಖ ದುಮ್ಮಾನ

ಸೌಜನ್ಯ

ಅದೊಂದು ಮಧ್ಯಾಹ್ನ, ಆ ಮಹಿಳೆಯೊಬ್ಬರು ಮರುದಿನ ಕೊಡಬೇಕಾದ ಪ್ರಾಜೆಕ್ಟ್ ಕೆಲಸದಲ್ಲಿ ಮಗ್ನರಾಗಿದ್ದಳು. ಮಾನವ ಸಂಪನ್ಮೂಲ ವಿಭಾಗದಿಂದ ಕರೆ ಮಾಡಿದ ಆ ಅಧಿಕಾರಿ ಹೇಳಿದರು "ಈ ದಿನ ಕಛೇರಿಯಲ್ಲಿ ನಿಮ್ಮದು ಕೊನೆಯ ದಿನ. ನಾವು ನಿಮಗೆ ಎರಡು ತಿಂಗಳ ನೋಟೀಸ್ ಅವಧಿಯನ್ನು ಕೊಟ್ಟಿದ್ದೇವೆ. ಅಂದರೆ ನೀವು ಕೆಲಸಕ್ಕೆ ಬರಬೇಕಾದ ಅಗತ್ಯವಿಲ್ಲ, ಎರಡು ತಿಂಗಳ ನಂತರ ನೀವು ನಿಮ್ಮ ಅನುಭವ ಪತ್ರ ಮತ್ತು ಬಿಡುಗಡೆ ಪತ್ರವನ್ನು ಪಡೆದುಕೊಳ್ಳಿ. ಹೊರಜಗತ್ತಿಗೆ ಮಾತ್ರ ನೀವು ಈ ಕಂಪನಿಗೆ ಎರಡು ತಿಂಗಳವರೆಗೆ ನೌಕರರಾಗಿರುತ್ತೀರಿ. ಕಂಪನಿಯಿಂದ ಹೊರ ಹೋಗುವ ವ್ಯಕ್ತಿಯಾಗಿ ನೀವು ಎಲ್ಲಾ ನಿಯಮಗಳನ್ನು ಪೂರೈಸಿಕೊಳ್ಳಿ" ಇಷ್ಟು ಹೇಳಿ ಆ ವ್ಯಕ್ತಿ ಸುಮ್ಮನಾದರು. ಆ ಮಹಿಳೆಗೆ



ಆಘಾತವಾಯಿತು, ಹೊರ ಹೋಗುವ ನಿಯಮಗಳನ್ನು ಪೂರೈಸಿ ತಮ್ಮ ಸೀಟಿಗೆ ಬಂದು ಕುಳಿತರು. ತಂಡದ ಇತರ ಸದಸ್ಯರು ಪ್ರಾಜೆಕ್ಟ್ ಬಗ್ಗೆ ವಿಚಾರಿಸುತ್ತಿದ್ದರು. ಅವರ ಮನಸ್ಸಿಗೆ ನೋವಾಗುತ್ತಿತ್ತು. ಇದು ನನ್ನ ಕಡೆಯ ದಿನವೆಂದು ಹೇಗೆ ಹೇಳುವುದು ಎಂದು ಚಿಂತಿಸುತ್ತ, ಒತ್ತಿ ಬರುತ್ತಿದ್ದ ಅಳುವನ್ನು ತಡೆಯಲು ಪ್ರಯತ್ನಿಸುತ್ತಿದ್ದರು.

*

ಅದು ಮಧ್ಯರಾತ್ರಿ, ಆ ಮಹಿಳೆ ದೀರ್ಘ ಸಮಯದ ನಂತರ ತನ್ನ ಮನೆಗೆ ಹಿಂದಿರುಗುವ ಹಾದಿಯಲ್ಲಿದ್ದಾರೆ. ಅವರು ಕ್ಯಾಬ್‌ನಲ್ಲಿದ್ದಾರೆ. ಅವರು ಒಬ್ಬರೇ ಇದ್ದಾರೆ, ಯಾವ ಭದ್ರತೆಯೂ ಇಲ್ಲ, ಸಹೋದ್ಯೋಗಿಗಳೂ ಇಲ್ಲ. ಅಭದ್ರತೆ ಕಾಡುತ್ತಿದೆ, ಭಯ ದಿಗಿಲು ಒಮ್ಮೆಲೆ ಆವರಿಸುತ್ತಿವೆ, ಹಲವಾರು ಕೆಟ್ಟ ಯೋಚನೆಗಳ ಜೊತೆ ಹೇಗೋ ಸುರಕ್ಷಿತವಾಗಿ ಮನೆ ತಲುಪಿದ್ದಾರೆ.

*

ಅದು ಬೆಳಿಗ್ಗೆ, ಆ ಮಹಿಳೆ ಬೇಗನೆ ಎದ್ದು ಮನೆ ಕೆಲಸವನ್ನೆಲ್ಲ ಮುಗಿಸಿದ್ದಾರೆ, ಕಛೇರಿಗೆ ತಡವಾಗಿ ಹೊರಟಿದ್ದಾರೆ. ಕಛೇರಿ ಕೆಲಸದ ನಂತರ ಕ್ಲೈಂಟ್ ಕಾಲ್ ಬರುವುದಿಲ್ಲ ಅನ್ನುವ ಗ್ಯಾರಂಟಿ ಇಲ್ಲದಿರುವುದರಿಂದ ಮನೆಯ ಪ್ರತಿಯೊಂದು ಕೆಲಸವನ್ನು ಕಷ್ಟಪಟ್ಟು ನಿರ್ವಹಿಸಿದ್ದಾರೆ.

*

ಒಬ್ಬ ಮಹಿಳೆ ಹಾಸಿಗೆಯ ಮೇಲೆ ಮಲಗಿದ್ದಾರೆ, ಅವರು ವಿಶ್ರಾಂತಿಯಲ್ಲಿದ್ದಾರೆ, ಚಿಕ್ಕ ವಯಸ್ಸಿಗೇ ಅವರು ಸ್ಪಾಂಡಿಲೈಟಿಸ್ ಖಾಯಿಲೆಗೆ ತುತ್ತಾಗಿದ್ದಾರೆ. ಆಫೀಸಿಗೆ ಹೋಗಲು ಶಕ್ತರಲ್ಲದ ಕಾರಣ

ಮಾಹಿತಿ ತಂತ್ರಜ್ಞಾನ (ಐಟಿ) ಕ್ಷೇತ್ರ ಅಂದಾಕ್ಷಣ ಆ ಬಗ್ಗೆ ಪೂರ್ಣ ಪರಿಚಯವಿರದವರ ಕಲ್ಪನೆಯೇ ಬೇರೆ. ಆದರೆ ಈ ರಂಗದಲ್ಲಿ ದುಡಿಯುವ ಮಹಿಳೆಯರೂ ಹತ್ತು ಹಲವು ಬಗೆ ಸಮಸ್ಯೆ ಒತ್ತಡ, ಶೋಷಣೆ ಅನುಭವಿಸುತ್ತಿದ್ದಾರೆ. ಸಾಕ್ಷಿ, ಬೇಕೇ?... ಓದಿ.

ವೈದ್ಯಕೀಯ ರಜೆಯನ್ನು ವಿಸ್ತರಿಸುವಂತೆ ಕೇಳಲು ಅವರ ವ್ಯವಸ್ಥಾಪಕರಿಗೆ ಕರೆ ಮಾಡಿದ್ದಾರೆ. ಆ ವ್ಯವಸ್ಥಾಪಕರು ಮಹಿಳೆಯ ಆರೋಗ್ಯದ ಬಗ್ಗೆ ಏನೊಂದು ವಿಚಾರಿಸಲಿಲ್ಲ. ಅವರು ಕೇಳಿದ್ದು ನೀವು ಕೆಲಸಕ್ಕೆ ಯಾವಾಗ ಬರುತ್ತೀರೆಂದು, ಆದರೆ ಪ್ರಾಜೆಕ್ಟ್‌ನ ಆರೋಗ್ಯದ ಬಗ್ಗೆ ಸಾಧ್ಯವಿರುವ ಎಲ್ಲಾ ಪ್ರಶ್ನೆಗಳನ್ನು ಕೇಳಿದ್ದರು.

*

ಮಾಹಿತಿ ತಂತ್ರಜ್ಞಾನ ರಂಗದ ಮಹಿಳಾ ಉದ್ಯೋಗಗಳ ಪರಿಸ್ಥಿತಿಯ ಬಗ್ಗೆ ನಾವು ನೋಡಿರುವ ಹಾಗೆ ಸ್ನೇಹಿತರು ಮತ್ತು ಸಮಾಜದ ಇತರೆ ಜನರು ಹೇಳುವ ಹಾಗೆ ಮಾನಸಿಕ ಒತ್ತಡ, ದೈಹಿಕ ಶ್ರಮ, ಅಭದ್ರತೆಯ ಭಯ ಮತ್ತು ವೈಯಕ್ತಿಕ ಬದುಕಿನ ಏರುಪೇರುಗಳು ಐ.ಟಿ. ರಂಗದ ಮಹಿಳಾ ಉದ್ಯೋಗಿಗಳು ಅನಾರೋಗ್ಯಕರ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ ಎನ್ನುವುದನ್ನು ತೋರಿಸುತ್ತದೆ. ಹೊರಜಗತ್ತಿನ ಜನರ ಪ್ರಕಾರ ಅವರು 21ನೇ ವಯಸ್ಸಿಗೇ ಕೈತುಂಬಾ ಸಂಬಳದ ಜೊತೆ ಅವರ ಜೀವನವನ್ನು ರೂಪಿಸಿಕೊಳ್ಳಬಹುದು. ಹೊರ ಜಗತ್ತಿನ ಜನರು ಐ.ಟಿ. ಜನರ ಬದುಕೆಂದರೆ ಫೋರಂ, ಶಾಪಿಂಗ್ ಮಾಲ್, ರೆಸ್ಟೋರೆಂಟ್, ಕ್ರೆಡಿಟ್ ಕಾರ್ಡ್ ಎಂದು ತಿಳಿದುಕೊಂಡಿದ್ದಾರೆ. ಪ್ರಜಾಪ್ರಭುತ್ವ ಸಮಾಜದಿಂದ ದೂರವಾದಂತಹ ಅವರದೇ ಆದ ಒಂದು ಜಗತ್ತನ್ನೇ, ಕಾರ್ಪೊರೇಟ್‌ಗಳು ಸೃಷ್ಟಿಸಿದ್ದಾರೆ, ಅದಕ್ಕೆ ನಿದರ್ಶನವಾಗಿ ಹಲವಾರು ಘಟನೆಗಳು ನಮಗೆ ಸಿಗುತ್ತವೆ. ಅವುಗಳ ಬಗ್ಗೆ ಸ್ವಲ್ಪ ವಿವರವಾಗಿ ಮಾತನಾಡೋಣ.

ದೂರೇ ದಾಖಲಾಗದ 'ಭದ್ರ' ಸ್ಥಿತಿ

ಐ.ಟಿ. ಕಂಪನಿಗಳನ್ನು ವಿಶೇಷ ಆರ್ಥಿಕ ವಲಯದ ಪಕ್ಕದಲ್ಲಿ ಬಿಗಿ ಭದ್ರತೆಯಲ್ಲಿ ನಿರ್ಮಾಣ ಮಾಡುತ್ತಾರೆ. ಆದರೆ ಮಹಿಳಾ ಉದ್ಯೋಗಿಗಳ ಭದ್ರತೆ ಇಂದಿಗೂ ಪ್ರಶ್ನಾರ್ಹವಾಗಿದೆ. ಹಲವು ಸೇವಾ ಕಂಪನಿಗಳು ನಿಗದಿತ ಅವಧಿಯೊಳಗೆ ಬಹುತೇಕ ಸಾರಿಗೆ ಸೌಲಭ್ಯವನ್ನು ನೀಡುತ್ತವೆ. ಆದರೆ ಯಾರಿಗೂ ಕೂಡ ಹೊರಹೋಗಲು ನಿಗದಿತ ಅವಧಿಯೇ ಇರುವುದಿಲ್ಲ. ಕ್ಲೈಂಟ್‌ಗಳು ಆ ವೇಳೆಯಲ್ಲೂ ಕರೆ ಮಾಡುತ್ತಾರೆ. ಕೆಲಸದ ಒತ್ತಡ ಯಾವ ರೀತಿ ಇರುತ್ತದೆಂದರೆ ನಿಗದಿತ ಅವಧಿಯ ನಂತರವೂ ಉದ್ಯೋಗಿಗಳು ದೀರ್ಘ ಅವಧಿಯವರೆಗೆ ಕುಳಿತು ಕೆಲಸ ಮಾಡಬೇಕಾಗುತ್ತದೆ. ಹಲವು ಕಂಪನಿಗಳು ಹಲವು ನಗರಗಳಿಂದ ಬಹುದೂರದಲ್ಲಿರುತ್ತವೆ. ಈ ರೀತಿಯಾದ ಒಂದು ಉದಾಹರಣೆ ಹೈದರಾಬಾದ್‌ನ ಮಡಿಕೊಂಡದಲ್ಲಿದೆ. ಹೈಟೆಕ್ ಸಿಟಿಯಿಂದ 5 ಕಿ.ಮೀ. ದೂರದಲ್ಲಿ 2005 ರಲ್ಲಿ ಐ.ಟಿ. ಕಂಪನಿಗಳು ಬಂದವು. ಇಡೀ ಪ್ರದೇಶವೆಲ್ಲಾ ಈ ಕಂಪನಿಗಳೇ ಮತ್ತು ಅರೆಬರೆ ಅಭಿವೃದ್ಧಿ ಹೊಂದಿದ (ತೀರ ಇತ್ತೀಚಿನವರೆಗೂ ಅಭಿವೃದ್ಧಿ ಹೊಂದಬೇಕಾಗಿರುವ ಮತ್ತು ಈಗಲೂ ಅಭಿವೃದ್ಧಿ ಹೊಂದುತ್ತಿರುವ ಪ್ರದೇಶ) ಪ್ರದೇಶಗಳು. ಕಳೆದ ಇತ್ತೀಚಿನ ದಿನಗಳವರೆಗೂ ಅಲ್ಲಿ ಯಾವುದೇ ಸಾರ್ವಜನಿಕ ಸಾರಿಗೆ ಇರಲಿಲ್ಲ. ಆಟೋ ಸೌಲಭ್ಯ ಮಾತ್ರ ಇತ್ತು. ಮಡಿಕೊಂಡ ಮತ್ತು ಕೊತ್ತಗಡ

ಜಂಕ್ಷನ್ ಬೇರ್ಪಡುವ ಪ್ರದೇಶದ ಪ್ರಯೋಜನ ಪಡೆದುಕೊಂಡು ಹಣಕ್ಕಾಗಿ ಆಟೋ ಚಾಲಕರಿಂದ ಕಿರುಕುಳಕ್ಕೊಳಗಾದ ಹಲವು ಮಹಿಳೆಯರು ನೀಡಿದ ದೂರುಗಳು ಪೊಲೀಸ್ ಠಾಣೆಗಳಲ್ಲಿ ದಾಖಲಾಗಲೇ ಇಲ್ಲ. ಈ ಕಂಪನಿಗಳ ಸ್ವಚ್ಛತಾ ಮತ್ತು ಭದ್ರತಾ ವಿಭಾಗಗಳಲ್ಲಿ ಕೆಲಸ ಮಾಡುವ ಮಹಿಳೆಯರು ಸಾರಿಗೆ ವ್ಯವಸ್ಥೆಯಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವರ ದಿನನಿತ್ಯದ ಸಾರಿಗೆ ವ್ಯವಸ್ಥೆಗೆ ಆಟೋ ಬಾಡಿಗೆಯನ್ನು ಸರಿಯಾಗಿ ಕೊಡುತ್ತಿರಲಿಲ್ಲ. ಹೆಚ್ಚಿನ ಜನರಿಗೆ ಸಂಬಳ ಅವರ ಕೈಗೆ ಬರುವಷ್ಟರಲ್ಲಿ ಅರ್ಧದಷ್ಟು ಕಡಿತವಾಗುತ್ತಿತ್ತು. ಏಕೆಂದರೆ ಅವರಲ್ಲಿ ಹಲವರು ಮಧ್ಯವರ್ತಿ ಸಂಸ್ಥೆಗಳಾದ ಕನ್ಸಲ್ಟೆನ್ಸಿಗಳ ಮುಖಾಂತರ ನೇಮಕವಾಗಿದ್ದರು. ಅರ್ಧ ಸಂಬಳ ಕನ್ಸಲ್ಟೆನ್ಸಿಯವರಿಗೆ ಹೋಗುತ್ತಿತ್ತು. ನಿರೀಕ್ಷಿತ ಮಟ್ಟದಲ್ಲಿ ಅವರ ಹಕ್ಕುಗಳ ಬಗ್ಗೆ ಯಾವ ಹಂತದಲ್ಲೂ ಎಚ್ಚರಿಕೆಯನ್ನು ತೆಗೆದುಕೊಳ್ಳುತ್ತಿರಲಿಲ್ಲ. ಇಂತಹ ಕಂಪನಿಗಳು ಮಾನವ ಸಂಪನ್ಮೂಲದ ಬಗ್ಗೆ ನಿಗಾ ವಹಿಸುತ್ತೇವೆ ಎಂದು ಬಡಾಯಿ ಕೊಚ್ಚಿಕೊಳ್ಳುವ ರೀತಿ ಭದ್ರತಾ ನಿಯಮಗಳನ್ನು ಪಾಲಿಸುತ್ತವೆಯೇ? ಅವರು ಹೇಳುವ ಹಾಗೆ ಮಾಡುತ್ತಿದ್ದಾರೆಯೇ ಅನ್ನುವುದು ದೊಡ್ಡ ಪ್ರಶ್ನೆಯಾಗಿದೆ!

ಆರೋಗ್ಯದ ಮೇಲೆ ಪರಿಣಾಮ

ಈ ರಂಗದಲ್ಲಿ ಮಹಿಳೆಯರು ದೀರ್ಘ ಅವಧಿಯವರೆಗೆ ಕುಳಿತು ಕೆಲಸ ಮಾಡುವುದರಿಂದ ಏನಾಗುತ್ತದೆ? ಮೂಳೆ ತಜ್ಞರು ಹೇಳುವ ಪ್ರಕಾರ ಐ.ಟಿ.ಯಲ್ಲಿ ಕೆಲಸ ಮಾಡುವ 20 ರಿಂದ 30 ವರ್ಷದ ಗುಂಪಿನ ವಯೋಮಾನದವರಲ್ಲಿ ಡಿಸ್ಕ್ ಸಮಸ್ಯೆ ಸಾಮಾನ್ಯವಾಗಿದೆ. ಯು.ಎನ್. ಸಂಶೋಧನಾ ಅಧ್ಯಯನದ ಪ್ರಕಾರ ಮಹಿಳೆಯರು ದೀರ್ಘಕಾಲ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಿದರೆ ಕ್ಯಾನ್ಸರ್ ಬರುವುದು ಸಾಬೀತಾಗಿದೆ. ಐ.ಟಿ.ಯಲ್ಲಿ ಕೆಲಸ ಮಾಡುವ ಅತ್ಯಂತ ಕಡಿಮೆ ವಯಸ್ಸಿನ ಉದ್ಯೋಗಿಗಳಿಗೆ ಕತ್ತು, ಬೆನ್ನು ಮೂಳೆ ಸಮಸ್ಯೆ ಬರುವುದು ಸಾಮಾನ್ಯವಾಗಿದೆ ಮತ್ತು ಬಲವಂತವಾಗಿಯಾದರೂ ವೈದ್ಯಕೀಯ ರಜೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಯಾವುದೇ ನಿಗದಿತ ಅವಧಿಯಿಲ್ಲದೆ ಪ್ರತಿದಿನ 9 ರಿಂದ 11 ಗಂಟೆ ಸಮಯವನ್ನು ಕಛೇರಿಯಲ್ಲಿ ವ್ಯಯ ಮಾಡುವ ಮಹಿಳೆ ಅದು ಹೇಗೆ ತನ್ನ ವೈಯಕ್ತಿಕ ಬದುಕನ್ನು ಪರಿಣಾಮಕಾರಿಯಾಗಿ ಮತ್ತು ವ್ಯವಸ್ಥಿತವಾಗಿ ನಿರ್ವಹಿಸುತ್ತಾಳೆ. ಹೆಚ್ಚುವರಿ ಅವಧಿ ಕೆಲಸ ಮಾಡಬೇಕೆನ್ನುವ ಭಾವನೆಯನ್ನು ಉದ್ಯೋಗಿಗಳ ಮನಸ್ಸಿನಲ್ಲಿ ಆಳವಾಗಿ ಬೇರೂರುವಂತೆ ಕಾರ್ಪೊರೇಟ್‌ಗಳು ಮಾಡುತ್ತಾರೆ. ಇದನ್ನೇ ದುರ್ಲಾಭ ಪಡೆಯುವುದು ಅನ್ನುವುದು.

ಹೆರಿಗೆ ರಜೆ ಅನುತ್ಪಾದಕ ಅವಧಿ ?!


ದೀರ್ಘ ಅವಧಿಯ ಕೆಲಸ ಅವಧಿಯಲ್ಲದೆ ಈ ಕಂಪನಿಗಳು ಯೋಗ ತರಬೇತಿ ಮತ್ತು ಇತರ ತರಬೇತಿ ಕಲಾಪಗಳನ್ನು ಕಛೇರಿ ಕ್ಯಾಂಪಸ್‌ನಲ್ಲಿ ನಡೆಸುತ್ತವೆ. ದೀರ್ಘ ಅವಧಿ ಕಛೇರಿಯಲ್ಲಿರುವುದರಿಂದ ಪುರುಷರಿಗಿಂತ ಮಹಿಳಾ ಉದ್ಯೋಗಿಗಳ ಮೇಲೆ ಅದು ತೀವ್ರ ಪರಿಣಾಮವನ್ನು ಉಂಟುಮಾಡುತ್ತದೆ. ಗರ್ಭಿಣಿ ಅವಧಿಯ ರಜೆಯೂ ಕೂಡ ಮಹಿಳೆಯರ ಪ್ರಗತಿ ಮತ್ತು ಬಡ್ತಿಯ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ. ಒಂದು ವೇಳೆ ಮಹಿಳೆಯು ಗರ್ಭಿಣಿ ಅವಧಿಯ ರಜೆಯೂ ಕೂಡ ಮಹಿಳೆಯರ ಪ್ರಗತಿ ಮತ್ತು ಬಡ್ತಿಯ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ. ಒಂದು ವೇಳೆ ಮಹಿಳೆಯು ಗರ್ಭಿಣಿ ರಜೆಯ ಮೇಲೆ ತೆರಳಿದರೆ, ಈ ಅವಧಿಯನ್ನು ಅನುತ್ಪಾದಕ ಅವಧಿ ಎಂದು ಪರಿಗಣಿಸುತ್ತಾರೆ ಮತ್ತು ಅವರ ಪ್ರಗತಿಯ ದರ ಕುಂಠಿತವಾಗುತ್ತದೆ. 'ಬೇಸಿಗೆ ರಜೆ ತೆಗೆದುಕೊಂಡರೆ... ರಜೆ ಆಯ್ಕೆ ತೆಗೆದುಕೊಂಡರೆ' ವಿವಾಹಿತ ಮಹಿಳೆಯರು ಸಾಮಾನ್ಯವಾಗಿ ಟೀಕೆಯನ್ನು ಎದುರಿಸಬೇಕಾಗುತ್ತದೆ. ಕಛೇರಿಯಲ್ಲೂ ಹೆಚ್ಚು ದುಡಿತ.... ಇತ್ತ ಮನೆಯಲ್ಲೂ ಮನೆ ಕೆಲಸದ ಜವಾಬ್ದಾರಿ ಎರಡನ್ನೂ ನಿರ್ವಹಿಸುವುದರಿಂದ ವಿಶ್ರಾಂತಿಯೇ ಇರುವುದಿಲ್ಲ. ನೆಮ್ಮದಿಯ ಸಾಂಸಾರಿಕ ಜೀವನಕ್ಕಾಗಿ ಪುರುಷರ ಸಹಕಾರ ಅಗತ್ಯವಿದೆ. ಆದರೆ ಹಲವು ಕುಟುಂಬಗಳಲ್ಲಿ ಇವತ್ತಿಗೂ ಕೂಡ ಹೆಚ್ಚಿನ ಸಹಕಾರ ಸಿಗುತ್ತಿಲ್ಲ.

ಮನಸ್ಸಿನ ಮೇಲೆ ಒತ್ತಡ

ನಿಮ್ಹಾನ್ಸ್ ಅಧ್ಯಯನದ ಪ್ರಕಾರ ಹೇಳುವುದಾದರೆ ಐ.ಟಿ./ ಬಿ.ಪಿ.ಒ.ನಲ್ಲಿ ಕೆಲಸ ಮಾಡುವ ಬಹುತೇಕ ಉದ್ಯೋಗಿಗಳ ವೈಯಕ್ತಿಕ ಜೀವನಕ್ಕೆ ಮನೆ ಕೆಲಸದ ಒತ್ತಡದಿಂದ ಹಾನಿಯಾಗುತ್ತಿದೆ. ಹಲವಾರು ಅಧ್ಯಯನಗಳ ಪ್ರಕಾರ ಬಿ.ಪಿ.ಒ. ನಲ್ಲಿ ಕೆಲಸ ಮಾಡುವ ಹೆಚ್ಚು ಉದ್ಯೋಗಿಗಳು ಮಾದಕ ವ್ಯಸನಿಗಳಾಗಿರುತ್ತಾರೆ. ಐ.ಟಿ./ ಬಿ.ಪಿ.ಒ. ರಂಗದ 70 ರಿಂದ 80 ಮಹಿಳೆಯರು ಬೆಂಗಳೂರು ಗರ್ಭಧಾರಣೆ ಕೇಂದ್ರ (ಅಪೌಷ್ಟಿಕತೆಯ ಕೊರತೆಯಿಂದ) ಭೇಟಿ ನೀಡುತ್ತಾರೆ. ಗ್ರಾಹಕರ ಅಗತ್ಯ ಪೂರೈಸುವ ಹೆಸರಿನಲ್ಲಿ ಭಯಂಕರ ಮಾನಸಿಕ ಒತ್ತಡವನ್ನು ಅನುಭವಿಸುತ್ತಾರೆ. ಕೆಲಸದ ಒತ್ತಡದಿಂದ ಅತಿ ಹೆಚ್ಚು ಅಸ್ವಾಭಾವಿಕ ಸಾವುಗಳು ಈ ವಲಯದಲ್ಲಿ ಸಂಭವಿಸುತ್ತವೆ. ಬೆಂಗಳೂರಿನ ನೋಕಿಯಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಸೋನಿಯು ಸಾವು ಕೂಡ ಇದೇ ಉದಾಹರಣೆ. 2009 ರಲ್ಲಿ ಇದೇ ಕಾರಣಕ್ಕೆ ಎರಡು ಸಾವು ಸಂಭವಿಸಿವೆ.

ಸುರಕ್ಷತೆ ಉಂಟೇ?

ಬಿ.ಪಿ.ಒ.ಗಳು ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಅಸುರಕ್ಷಿತ ಮತ್ತು ಅನಾರೋಗ್ಯಕರ ಪರಿಸ್ಥಿತಿಯಲ್ಲಿವೆ. ಬಿ.ಪಿ.ಒ. ರಂಗದಲ್ಲಿ ಧಾರುಣವಾಗಿ ಅತ್ಯಾಚಾರಕ್ಕೀಡಾದ ಮತ್ತು ಕೊಲೆಗೀಡಾದ ಹಲವು ಮಹಿಳೆಯರ ಕಥೆಗಳು ಕರುಣಾಜನಕವಾಗಿದೆ. ಸುರಕ್ಷತೆ ನಿಯಮಗಳಲ್ಲಿ ಆಗಿರುವ ತಪ್ಪಿಗೆ ಯಾವುದೇ ಕಂಪನಿಯಾದರೂ ಜವಾಬ್ದಾರಿ ಹೊರಬೇಕು ಮತ್ತು ಮಹಿಳಾ ಉದ್ಯೋಗಿಗಳ ಸುರಕ್ಷತೆ ಮತ್ತು ಭದ್ರತೆ ವಿಷಯದಲ್ಲಿ ಕೇವಲ ಭರವಸೆ ಕೊಡುವುದನ್ನು ಬಿಟ್ಟು ಸಾರ್ವಜನಿಕವಾಗಿ ಪರಿಷ್ಕರಣಾ ನೀತಿಯನ್ನು ಅಳವಡಿಸಿಕೊಳ್ಳಬೇಕು. ಭಾರತದ ಕಾರ್ಮಿಕ ಸಂಘಟನೆಗಳು ಮಹಿಳೆಯರನ್ನು ಹಗಲು ಪಾಳಿಗೆ ನೇಮಿಸಿ ಪುರುಷರನ್ನು ರಾತ್ರಿ ಪಾಳಿಗೆ ನೇಮಿಸಬೇಕೆಂಬ ಪ್ರಶ್ನೆಯನ್ನು ಎತ್ತಿದಾಗ, ನಾಸ್ಕಾಂನ ಅಧ್ಯಕ್ಷ ಕಿರಣ್ ಕಾರ್ನಿಕ್ ಹೇಳುತ್ತಾರೆ. ಕೇವಲ ಒಬ್ಬ ಮಹಿಳೆಯ ಘಟನೆಯಿಂದ ಮಹಿಳೆಯರನ್ನು ರಾತ್ರಿ ಪಾಳಿಗೆ ನೇಮಿಸದಿರುವುದು ಒಳ್ಳೆಯದಲ್ಲ. ಒಂದು ವೇಳೆ ಮಹಿಳೆ ಬಸ್ಸಿನಲ್ಲಿ ಕಿರುಕುಳಕ್ಕೊಳಗಾದರೆ, ಬಸ್ಸಿನಲ್ಲಿ ಪ್ರಯಾಣ ಮಾಡುವುದನ್ನು ನಿಲ್ಲಿಸುತ್ತೀರ?" ಹಾಗಾದರೆ ಐ.ಟಿ. ಕೆಲಸ ಮಹಿಳೆಗೆ ಸುರಕ್ಷಿತವೆ?



ಸ್ಲಂಗೆ ಜಾರಿದ ಬದುಕು

- ಸುಶೀಲ
ನಿರೂಪಣೆ : ಗೌರಮ್ಮ

ಬಾಳಲು ಸ್ಲಂಗೆ ಹೋಗಬೇಕೆಂದು ಯಾರೂ ಬಯಸಿ ಬಯಸಿ ಹೋಗುವುದಿಲ್ಲ. ಆದರೆ ಅನಿವಾರ್ಯತೆಗಳು ಬದುಕನ್ನು ಸ್ಲಂಗೆ ದೂಡುತ್ತವೆ.



"ಹೆಸರು ಸುಶೀಲ, ನನ್ನ ವಯಸ್ಸು 66. ನಾನು ಹುಟ್ಟಿದ್ದು ಬೋರಿಂಗ್ ಆಸ್ಪತ್ರೆ. ನನ್ನ ತಂದೆ ಟೈಲರ್. ನನ್ನ ಜೊತೆಗೆ ಹುಟ್ಟಿದವರು 6 ಜನ. 3 ಗಂಡು, 3 ಹೆಣ್ಣುಮಕ್ಕಳು. ಬಡತನ.8ನೇ ತರಗತಿ ಮಾತ್ರ ಓದಿದ್ದು. ಮನೆಯ ಪರಿಸ್ಥಿತಿಯನ್ನು ನೋಡಿ ವಿದ್ಯಾಭ್ಯಾಸವನ್ನು ನಿಲ್ಲಿಸಬೇಕಾಯಿತು. ನಾವು ಸಣ್ಣಪುಟ್ಟ ದುಡಿಮೆ ಮಾಡಿ ತಂದೆಯ ಸಹಾಯಕ್ಕೆ ನಿಲ್ಲುತ್ತಿದ್ದೆ. ನಂತರ ನಾನು ಗಂಡನಾದ ರಾಮರಾವ್‌ರವರನ್ನು ಮದುವೆಯಾದೆ. ಮನೆಯವರ ಒಪ್ಪಿಗೆಯಿಂದಾದ ಮದುವೆ. ನಾನು ಅಪ್ಪನ ಮನೆಯಲ್ಲಿ ಬಡತನದಲ್ಲೇ ಬದುಕಿದೆ. ಗಂಡನ ಮನೆಗೆ ಹೋದರೆ ಸುಖ ಕಾಣಬಹುದೆಂಬ ಆಸೆಯನ್ನು ಇಟ್ಟುಕೊಂಡಿದ್ದೆ. ನನ್ನ ಗಂಡನ ಜೊತೆಗೆ ಹುಟ್ಟಿದವರು 3 ಜನ. ಇಬ್ಬರು ಕಿಲಾಡಿಗಳು. ನನ್ನ ಗಂಡ ಸಹ ಟೈಲರ್ ಕೆಲಸ ಮಾಡುತ್ತಿದ್ದರು. ಮಂಡ್ಯದಲ್ಲಿ ಮೈಸೂರು ಮುಖ್ಯರಸ್ತೆಯಲ್ಲಿ ಅಂಗಡಿ ಇಟ್ಟು ಜೀವನ ಮಾಡುತ್ತಿದ್ದರು. ಚೆನ್ನಾಗಿ ದುಡಿಮೆ ಮಾಡಿ ಹಣ ಗಳಿಸುತ್ತಿದ್ದರು. ಕಿಲಾಡಿ ಅಣ್ಣಂದಿರು ಆದಾಯ ಕಿತ್ತುಕೊಂಡು ನನ್ನನ್ನು - ನನ್ನ ಗಂಡನನ್ನು ಮನೆಯಿಂದ ಆಚೆಗೆ ತಳ್ಳಿದರು. ನಾವು ಬೇರೆ ಸ್ವಂತ ಅಂಗಡಿಯನ್ನು ಸಾಲ-ಸೋಲ ಮಾಡಿ ಇಟ್ಟೆವು. ಇದರಲ್ಲಿ ಲಾಭ ಗಳಿಸುವುದನ್ನು ಕಂಡು ಮತ್ತೆ ನನ್ನ ಭಾವಂದಿರು ಕ್ಯಾತೆ ತೆಗೆದು ನನ್ನ ಗಂಡನನ್ನು ಚರಂಡಿಗೆ ತಳ್ಳಿ ಕಾಲು ಮುರಿದರು. ಅದರಿಂದ ಸುಧಾರಿಸಿಕೊಳ್ಳುವಷ್ಟರಲ್ಲಿ ನಮ್ಮ ಅಂಗಡಿಯಲ್ಲಿ ಕಳ್ಳತನವಾಯಿತು. ಮಿಷನ್, ಇದ್ದಬದ್ದ ಬಟ್ಟೆಗಳನ್ನು ದೋಚಿಕೊಂಡು ಹೋದರು.

ಹಲಸೂರು ಬಾಡಿಗೆ ಮನೆಗೆ

ನಾನು ಆಗ ಯೋಚನೆ ಮಾಡಿದೆ. ಇಲ್ಲೇ ಇದ್ದರೆ ನಾವು ಬದುಕೋಕ್ಕೆ ಆಗೋಲ್ಲ. ಆಗ ನನಗೆ ಮೂರು ಹೆಣ್ಣುಮಕ್ಕಳು. ಅವರನ್ನು ಕರೆದುಕೊಂಡು ಗಂಟು ಮೂಟೆ ಕಟ್ಟಿಕೊಂಡು ಬೆಂಗಳೂರಿಗೆ ಹಲಸೂರಿಗೆ ಬಂದು ಸಣ್ಣ ಬಾಡಿಗೆ ಮನೆ ಮಾಡಿದೆ. ನಾನು ಹೊಲಿಗೆ ಕಲಿತಿದ್ದೆ. ದಿನಕ್ಕೆ 15 ಶರ್ಟ್ ಹೊಲಿಯುತ್ತಿದ್ದೆ. ಬಟ್ಟೆ ನಾವೇ ತಂದು ಕತ್ತರಿಸಿ ಹೊಲೆದು ಕೊಟ್ಟರೆ ಐದು ರೂಪಾಯಿ ಕೊಡುತ್ತಿದ್ದರು. ಜೀವನದಲ್ಲಿ ಮೇಲೆ ಬರಬೇಕು ಅಂತ ನಾನೊಬ್ಬಳೇ ಒಂದು ದಿನಕ್ಕೆ 15 ಶರ್ಟ್ ಹೊಲಿಯುತ್ತಿದ್ದೆ. ಹೀಗೆ ದುಡಿಯುತ್ತಲೇ ಸ್ವಂತ ಮನೆಯಿಲ್ಲದೇ ಬಾಡಿಗೆ ಮನೆಗಾಗಿ 10 ರಿಂದ 15 ಪ್ರದೇಶಗಳಲ್ಲಿ ಮಕ್ಕಳು ಗಂಡನನ್ನು ಕರೆದುಕೊಂಡು ಅಲೆಮಾರಿ ತರಹ ತಿರುಗಿದ್ದೀವಿ. ಆವತ್ತಿನ ಕಷ್ಟ ದೇವರಿಗೇ ಪ್ರೀತಿಯಾಗಬೇಕು, ಬೇರೆ ಯಾರಿಗೂ ಬೇಡ ಅಂತಾರೆ ಹಲಸೂರು, ಬಯ್ಯಪ್ಪನಹಳ್ಳಿ, ಎನ್‌ಜಿಇಎಫ್, ಚೋಳರಪಾಳ್ಯ ಹೀಗೆ ಸುತ್ತಾಡಿ ಕೊನೆಗೆ ವಿಜಿನಾಪುರದಲ್ಲಿರುವ ಎಫ್‌ಸಿಐ ಗೋಡಾನ್ ಹತ್ತಿರ ಬಾಡಿಗೆ ಮನೆ ಮಾಡಿ ಮಕ್ಕಳನ್ನು ಸಾಕಲು, ಸ್ವಂತ ಮನೆ ಮಾಡಲು ನಾನು ಇಂತಹ ಕೆಲಸ ಅಂತಿಲ್ಲ, ಎಲ್ಲ ರೀತಿಯ ಕಷ್ಟದ ಕೆಲಸವನ್ನು ಮಾಡಿದೆ.

ಕೊಂಡ ಸೈಟು ಕೈಬಿಟ್ಟಿತು

ಬಾಡಿಗೆ ಮನೆ ಇದೇ ಕೊನೆ ಆಗಲಿ ಅಂತ ಹಣ ಕೂಡಿಟ್ಟು 6 ಸಾವಿರಕ್ಕೆ ಒಂದು ಫುಲ್ ಸೈಟನ್ನು ತಗೊಂಡೆ. ಜಾಗದ ಮಾಲಿಕನಿಗೆ ರಿಜಿಸ್ಟ್ರೇಷನ್ ಮಾಡಿಕೊಡು ಅಂತ ಕೇಳಿದರೆ ಖಾಲಿ ಜಾಗಕ್ಕೆ ರಿಜಿಸ್ಟ್ರೇಷನ್ ಆಗೋಲ್ಲ, ಮನೆ ಕಟ್ಟಿಕೋ ಒಂದೇ ಸಲ ರಿಜಿಸ್ಟ್ರೇಷನ್ ಮಾಡಿಕೊಡ್ತೀನಿ ಅಂದ. ನಾನು ಸರಿ ನಿಜವಿರಬಹುದು ಅಂತ ಮನೆ ಕಟ್ಟಲು ಸಾಲಸೋಲ ಮಾಡಿ ತಯಾರಿ ನಡೆಸಿದೆ. ಅಷ್ಟರಲ್ಲೇ ಆ ಜಾಗ ಬಿಡಿಎ ಗೆ ಹೋಯಿತು ಅಂತ ಜಾಗದ ಮಾಲೀಕ ಕೈ ಎತ್ತಿದ. ಬಿಡಿಎ ನಿಂದ ಹಣ ಬಂದರೆ ನಿನ್ನ ಹಣ ಕೊಡ್ತೀನಿ ಅಂತ ಹೇಳಿದ. ಆರು ಸಾವಿರ ಸೇರಿಸಬೇಕಾದರೆ ನನ್ನ ದೇಹದಲ್ಲಿರುವ ರಕ್ತವನ್ನು ಬಸಿದಿದ್ದೆ. ಇತ್ತಕಡೆ ಜಾಗಾನೂ ಇಲ್ಲ, ಹಣವೂ ಇಲ್ಲ. ಅವರು ಬರೆದುಕೊಟ್ಟ ಖಾಲಿ ಪೇಪರ್ ಮಾತ್ರ ಇಟ್ಟುಕೊಂಡು ಇವತ್ತು - ನಾಳೆ ಕೊಡುತ್ತಾನೆ ಅಂತ ಮನೆಯಲ್ಲಿ ಬೀರು ಇಲ್ಲದ ಕಾರಣ ಹಳೆಯ ಪೆಟ್ಟಿಗೆಯಲ್ಲಿಟ್ಟಿದ್ದೆ. ಅದನ್ನು ಇಲಿ ಮತ್ತು ಜಿರಲೆಗಳು ಪೇಪರ್‌ನಲ್ಲಿ ಏನೂ ಅರ್ಥವಾಗದಂತೆ ತಿಂದು ಹಾಕಿದ್ದವು.

ಸ್ಲಂಗೆ ಜಾರಿದ ಬದುಕು

ಆಗ ನನಗೆ ಅನಿಸಿತು ಇನ್ನು ಸ್ವಂತ ಮನೆ ಮಾಡಲು ಆಗೋಲ್ಲ. ಹಣ ಕೂಡಿಡಲೂ ಆಗೋಲ್ಲ ಅಂತ ತಿಳಿದು ಯೋಚನೆ ಮಾಡ್ತಾ ಇದ್ದಾಗ ನಮ್ಮ ವಿಜಿನಾಪುರ ಕೆರೆಯಲ್ಲಿ ಮಣ್ಣುಹಾಕಿ ಜಾಗ ಹಿಡೀತಿದ್ದರು. ನಾನು ಹೋಗಿ ಜಾಗ ನೋಡಿದೆ. ಮೈನ್ ರಸ್ತೆಯಲ್ಲಿಯೇ ಜಾಗ ಇತ್ತು. 3 ಜನ ಹೆಣ್ಣು ಮಕ್ಕಳು ಇದ್ದು ಹೇಗೆ ಜೀವನ ನಡೆಸೋದು ಅಂತ ಒಳಗೆ ಜಾಗವನ್ನು ಹಿಡಿದು ಮಣ್ಣು ತಂದು ಹಾಕಿ, ಮನೆ ಕಟ್ಟಿಕೊಂಡೆವು. ಆದರೆ ಕೆರೆ ಜಾಗ ಆಗಿದ್ದಕ್ಕೆ ಮಳೆ ಬಂದರೆ ಮನೆ ಒಳಗೆ ನೀರು ಉಕ್ಕಿ ಬರುತ್ತಿತ್ತು. ಆಗ ನೀರು ಬಾಚಿ ಬಾಚಿ ಹಾಕುವುದೇ ನಮ್ಮ ಕೆಲಸ. ಮೋರಿ ಇಲ್ಲ, ರಸ್ತೆ ಇಲ್ಲ. ಕರೆಂಟ್ ಇಲ್ಲ ಏನೂ ಇಲ್ಲ. ಇದರಲ್ಲಿ ಜೀವನ ಸಾಗಿಸುತ್ತಾ ಇದ್ದೆವು. ನಂತರ ಓಟು ಕೇಳಲು ಬರುವ ಬೇರೆ ಬೇರೆ ಪಕ್ಷದವರೆಲ್ಲಾ ಹಕ್ಕುಪತ್ರ ಕೊಡುತ್ತೀವಿ, ಎಲ್ಲಾ ಸೌಲಭ್ಯ ಕೊಡಿಸ್ತೀವಿ ಅಂತ ಹೇಳಿ ಹೇಳಿ ಅವರು ಸಾಕಾದರು. ನಾವು ಕೇಳಿ ಕೇಳಿ ಸಾಕಾದೆವು. ಆಗ ನಾನು ಕಾಂಗ್ರೆಸ್ ಪಕ್ಷದ ಕಾರ್ಯಕರ್ತೆಯಾಗಿದ್ದೆ. ಅವರು ಹೇಳುವುದು ಸರಿ ಅಂತ ಅನ್ಕೊಂಡಿದ್ದೆ. ನಂತರ 1998 ರಲ್ಲಿ ಸಾಕ್ಷರತೆ ಹೇಳಿಕೊಡಕ್ಕೆ ಅಂತ ಜನವಾದಿ ಮಹಿಳಾ ಸಂಘಟನೆ ಗೌರಮ್ಮ ಬಂದರು.

ಆಗ ಅಕ್ಷರಕ್ಕಿಂತ ನಮ್ಮ ಜನರಿಗೆ ಬೇಕಾಗಿದ್ದು ಹಕ್ಕುಪತ್ರ ಅನಿಸಿತ್ತು. ಆಮೇಲೆ ಅವರು ಜನರಿಗೆ ಒಂದಷ್ಟು ತಿಳುವಳಿಕೆ ನೀಡಿದ ಮೇಲೆ ಒಗ್ಗಟ್ಟಾಗಿ ನಮ್ಮ ಹಕ್ಕು ಕೇಳಲು ಹೋರಾಟಗಳು ಪ್ರಾರಂಭವಾಯಿತು. ಹೋರಾಟಗಳಿಂದ ಹಕ್ಕುಪತ್ರ ಸಿಗದಿದ್ದರೂ ಸಾಕಷ್ಟು ಅನುಕೂಲವಾಗಿದೆ ಸ್ಲಂಗೆ.

ದುಬಾರಿ ಬದುಕು

ಆದರೆ ನನಗೆ ಮಾತ್ರ ಜೀವನ ಬೇಸರವಾಗಿದೆ. ಆಗ ಕೇವಲ 50 ಪೈಸೆಗೆ ಅಕ್ಕಿ, ಬೇಳೆ, ತರಕಾರಿ, ಹಣ್ಣು ತರುತ್ತಿದ್ದೆವು. ನಮಗೆ ಜೀವನ ಕಷ್ಟ ಅಂತ ಅನ್ನಿಸುತ್ತಿರಲಿಲ್ಲ. ಈಗ ದಿನಕ್ಕೆ 100 ಖರ್ಚು ಮಾಡಬೇಕಿದೆ. ನಮ್ಮಂತಹ ಕೂಲಿ ಮಾಡುವವರಿಗೆ 100 ರೂ. ಎಲ್ಲಿಂದ ಸಿಗುತ್ತದೆ. ಜೀವನ ಸಾಗಿಸುವುದೇ ಭಾರಿ ಕಷ್ಟ. ಮತ್ತೆ ಮೂರು ಜನ ಹೆಣ್ಣು ಮಕ್ಕಳು ಅವರನ್ನು ಸಾಕಿ, ಮದುವೆ ಮಾಡಬೇಕಾದರೆ ಎಷ್ಟು ಕಷ್ಟ ಅಂತ ಹೇಳಲು ಅಸಾಧ್ಯ. ಆದರೆ ಮೂರು ಜನ ಹೆಣ್ಣುಮಕ್ಕಳಲ್ಲಿ ಯಾರೂ ಸಹ ಈಗಲೂ ನನ್ನ ಕಷ್ಟುಸುಖ ಕೇಳುವವರಿಲ್ಲ. 68-69 ವರ್ಷದ ನನ್ನ ಗಂಡನಿಗೆ ನಾನು, ನನಗೆ ಅವರು ಅಷ್ಟೆ. ಸಣ್ಣಪುಟ್ಟ ಬಟ್ಟೆ ಹೊಲಿದು ಜೀವನ ಮಾಡುತ್ತಿದ್ದೇವೆ. ನನಗೆ ಅನಿಸುತ್ತೆ ಮಕ್ಕಳೇಇಲ್ಲ ಅಂತ ಹೇಳುವವರೇ ಪುಣ್ಯ ಮಾಡಿದವರು. ನನ್ನ ಸಾಕು ತಾಯಿಗೆ ಮಕ್ಕಳಿಲ್ಲ. ಅವರಿಗೆ 105 ವರ್ಷ. ಗುಂಡುಕಲ್ಲು ಇದ್ದಾಂಗೆ ಇದ್ದಾರೆ. ನಾವು ಅಪ್ಪನ ಮನೆ, ಗಂಡನ ಮನೆಯಲ್ಲಿ ವಯಸ್ಸಾದ ಮೇಲೂ ದುಡಿದೇ ತಿನ್ನಬೇಕಾದ ಪರಿಸ್ಥಿತಿ. ಇದು ಯಾವ ಹೆಣ್ಣುಮಕ್ಕಳಿಗೂ ಬೇಡ ಅನ್ನಿಸುತ್ತೆ....."

ಇವಿಷ್ಟು ಸುಶೀಲಮ್ಮನ ಮನದಾಳದ, ನೋವಿನ ಮಾತುಗಳು. ಹೀಗೆ ಈ ಸ್ಲಂನ ಪ್ರತಿ ಮಹಿಳೆಯರ ಬದುಕಿನಲ್ಲೂ ನೋವಿನ ಘಟನೆಗಳಿವೆ. ನಮ್ಮ ಅಕ್ಕ-ತಂಗಿಯರು ಹೋರಾಟ ಮಾಡಿ ಪಡೆದ ಹಕ್ಕುಗಳಿಗೆ 100 ವರ್ಷವಾದರೂ ಹಕ್ಕುಗಳು ಮಾತ್ರ ಮರೀಚಿಕೆಯಾಗಿಯೇ ಉಳಿದಿವೆ. ಸುಶೀಲಮ್ಮನಂತಹ ತಾಯಿಯರು ಈಗಲೂ ಆಶಾಭಾವನೆಯಿಂದಲೇ ಬದುಕು ಎದುರಿಸಬೇಕಾಗಿದೆ.



ಅನ್ನಕ್ಕೆ ಅಕ್ಕಿ ಇಲ್ಲ, ಬರಿ ನುಚ್ಚು'

ಪುಟ 31 ರಿಂದ



ಒಂದು ವಾರದ ಹಿಂದೆ ಕೆಲಸ ಮಾಡುವಾಗ ಬೆರಳ ಮೇಲೆ ದೊಡ್ಡ ಕಲ್ಲು ಬಿದ್ದು ಗಾಯವಾಗಿದೆ. ಮಾಲಿಕ ಯಾವುದೇ ಚಿಕಿತ್ಸೆ ಮಾಡಿಸಿಲ್ಲ. ಹಣವನ್ನೂ ನೀಡಿಲ್ಲ, ಈಗ ಕೆಲಸವಿಲ್ಲದೆ ನಿರ್ಮಾಣ ನಡೆಯುವ ಪಕ್ಕದಲ್ಲಿ ನಿರ್ಮಿಸಿರುವ ಶೆಡ್‌ನಲ್ಲಿ ವಾಸಿಸುತ್ತಿದ್ದಾರೆ. ಶೆಡ್‌ಗೆ ಬಾಡಿಗೆ ಇಲ್ಲ. 7 ವರ್ಷಗಳಿಂದ ಇದೇ ರೀತಿ ಯಾವುದೇ ಊರಿನಲ್ಲಿ ನಿರ್ಮಾಣ ಕೆಲಸ ನಡೆದರು ಅಲ್ಲಿ ಹೋಗಿ ಕೆಲಸ ಮಾಡುತ್ತಾರೆ. ಇವರ ಬದುಕು ಪೂರ್ಣ ವಲಸೆಯಾಗಿದೆ.

ಬೆಂಗಳೂರಿನ ಕಮಲನಗರದಲ್ಲಿ ಶೇ. 70 ಮನೆಗಳಿಗೆ ಪೇಂಟಿಂಗ್ ಕೆಲಸ ಮಾಡಿರುವ ಕೇರಳ ಮೂಲದವರು ತಮಿಳು ನಾಡಿನ ಈರೋಡ್ ನಲ್ಲಿ ವಾಸವಾಗಿದ್ದು ಕಳೆದ 12 ವರ್ಷಗಳ ಹಿಂದೆ ಬೆಂಗಳೂರಿಗೆ ಬಂದು 9 ವರ್ಷಗಳಿಂದ ಪೇಂಟಿಂಗ್ ಕೆಲಸದಲ್ಲಿ ದುಡಿಯುತ್ತಿರುವ ಕಾರ್ತಿಕ್ ಮತ್ತು ವಸಂತಿ ದಂಪತಿಗಳ ಮಗ ವೇದಿ ಈರೋಡ್‌ನಲ್ಲಿ ಇಂಜಿನಿಯರಿಂಗ್ ಓದುತ್ತಿದ್ದಾನೆ.

''ನಾನು ಮಹಿಳೆ ಎನ್ನುವ ಕಾರಣಕ್ಕೆ ಕೆಲಸ ಕೊಡಲು ಯೋಚಿಸುತ್ತಾರೆ. ಗಾರೆ ಕೆಲಸದಲ್ಲಿ ಮಹಿಳೆಯರು ದುಡಿಯುತ್ತಾರೆ. ಮಹಿಳೆಯರು ಪೈಟಿಂಗ್ ಕೆಲಸ ಯಾಕೆ ಮಾಡಬಾರದು?' ಎಂದು ಪ್ರಶ್ನಿಸಿದರು. ಒಪ್ಪಿಕೊಳ್ಳುವ ಎಲ್ಲಾ ಕೆಲಸಗಳನ್ನೂ ದಂಪತಿಗಳು ಇಬ್ಬರು ಸೇರಿ ಮಾಡುತ್ತಾರೆ. ಕೆಲಸ ಒಪ್ಪಿಸಿದ ಮಧ್ಯವರ್ತಿಗಳು ಇವರಿಗೆ ಹಣ ಸರಿಯಾಗಿ ನೀಡುವುದಿಲ್ಲ. ಇತ್ತೀಚೆಗೆ ಒಂದು ಕಡೆ ಮೂರು ವಾರ ಕೆಲಸ ಮಾಡಿದ ವೇತನವೇ ಬಂದಿಲ್ಲ. ಹೀಗೆ ಒಂದು ಲಕ್ಷಕ್ಕೂ ಹೆಚ್ಚಿನ ಹಣವನ್ನು ಕಳೆದುಕೊಂಡಿದ್ದಾರೆ. ಹಣಕ್ಕೆ ಹೆಚ್ಚು ಒತ್ತಾಯಿಸಿ ಕೇಳಿದರೆ ಕೆಲಸವೇ ಕೊಡುವುದಿಲ್ಲ. ಬೆಂಗಳೂರಿನಲ್ಲಿ ಇಂದು ಜೀವನ ನಡೆಸಲು ನಮ್ಮ ಆದಾಯ ಯಾವುದಕ್ಕೂ ಸಾಲುತ್ತಿಲ್ಲ ಎನ್ನುತ್ತಾರೆ.

ಯಾದಗಿರಿಯ ಮಹಿಳೆಯರು. ಕಾರ್ಮಿಕ ಕಾನೂನು ಸಂಘಟನೆ ಬಗ್ಗೆ ಏನನ್ನೂ ತಿಳಿದಿಲ್ಲ ಎಂದರು. ವೇಲುಪುರಿಯ ಕುಟುಂಬ ನಮ್ಮ ಮೇಸ್ತ್ರಿ ಸಂಘ ಸೇರಲು ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಗೆ ನೋಂದಾಯಿಸಲು ಹೇಳಿದರೆ ಮುಂದೆ ಸಂಘ ಸೇರುತ್ತೇವೆ ಎಂದರು. ವಸಂತಿಯವರು ಸಿಡಬ್ಲ್ಯುಎಫ್‌ಐನ ರಾಜಾಜಿನಗರ ವಲಯದ ಉಪಾಧ್ಯಕ್ಷರಾಗಿದ್ದರೆ ಅಭದ್ರತೆಯ ದುಡಿಮೆಯ ಪರಿಸ್ಥಿತಿಯಲ್ಲಿ ದುಡಿಯುತ್ತಿರುವ ಮಹಿಳಾ ನಿರ್ಮಾಣ ಕಾರ್ಮಿಕರನ್ನು ಹೆಚ್ಚು ಗಮನ ಹರಿಸಿ ಸಂಘಟಿಸಿ ಕೆಲಸವನ್ನು ಸಿಐಟಿಯು ವಿನಲ್ಲಿರುವ 'ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೇ ನಿರ್ಮಾಣ ಕಾರ್ಮಿಕರ ಫೆಡರೇಷನ್' (ಸಿಐಟಿಯು - ಸಿಡಬ್ಲ್ಯೂ ಎಫ್‌ಐ) ಗಮನ ಹರಿಸಿ ಕೆಲಸ ಮಾಡುತ್ತಿದ್ದು, 22 ಜಿಲ್ಲೆಗಳಲ್ಲಿ ಸಂಘಟನೆ ಇದೆ. ಸಂಘಟನೆ ದೊಡ್ಡದಾಗಿ ಬೆಳೆಯುತ್ತಿದೆ.

ಕಟ್ಟಡ ಕಾರ್ಮಿಕರಿಗೆ ಅಂತ್ಯೋದಯ ರೇಷನ್ ಕಾರ್ಡು ಪಡೆಯುವುದು, ನಗರ ಪ್ರದೇಶದಲ್ಲೂ ಉದ್ಯೋಗ ಖಾತ್ರಿ ಯೋಜನೆ ಜಾರಿಗೆ ಬರುವಂತಾಗುವುದು ಕಟ್ಟಡ ಕಾರ್ಮಿಕರ ಕೆಲವು ತುರ್ತು ಬೇಡಿಕೆಗಳಾಗಿವೆ.

ಕಣ್ಣಲ್ಲಿ ಕನಸು ಕೈಯಲ್ಲಿ ದುಡಿಮೆ

ಪುಟ 32 ರಿಂದ

ಹೋರಾಟದಿಂದ ಇಂದು ಬೀಡಿ ಕಟ್ಟುವ ಮಹಿಳೆಯವರಿಗೆ ಒಂದಿಷ್ಟಾದರೂ ವೇತನ, ಆದರ ಜೊತೆಗೆ ಸೌಲಭ್ಯಗಳು ದೊರೆಯುತ್ತಿವೆ. ಭವಿಷ್ಯ ನಿಧಿ, ಪಿಂಚಣಿ ಮುಂತಾದವು ಕಾರ್ಮಿಕರ ಸಮರಧೀರ ಹೋರಾಟಕ್ಕೆ ಸಿಕ್ಕ ಜಯಗಳು.

ಭಾರೀ ಲಾಭದ ಧಣಿಗಳು

ಇಷ್ಟಾದರೂ, ಪೈಸೆ ಪೈಸೆ ಲೆಕ್ಕ ಹಾಕುತ್ತಾ ಕನಿಷ್ಠ ಸೌಲಭ್ಯವನ್ನೂ ನೀಡಲು ಹಿಂದೇಟು ಹಾಕಿದವರು ಕರಾವಳಿಯ ಬೀಡಿ ಧಣಿಗಳು. ಪಿವಿಎಸ್ ಬೀಡಿ, ಭಾರತ್ ಬೀಡಿ, ಗಣೇಶ್ ಬೀಡಿ, ಪ್ರಕಾಶ್ ಬೀಡಿ, ಸಾಧು ಬೀಡಿ, ದೇಸಾಯಿ ಬೀಡಿ ಮುಂತಾದವು ಪ್ರಮುಖ ಸಂಸ್ಥೆಗಳಾದರೆ, ಇನ್ನು ಗ್ರಾಮೀಣ ಪ್ರದೇಶದಲ್ಲಿ ಅದೆಷ್ಟೋ ಸಂಸ್ಥೆಗಳು ಹುಟ್ಟಿಕೊಂಡು ಕಾನೂನು ಪ್ರಕಾರ ಸಿಗಬೇಕಾದ ಸೌಲಭ್ಯವನ್ನು ಇಂದಿಗೂ ವಂಚಿಸುತ್ತಿವೆ.

ಬೀಡಿ ಕಟ್ಟುವ ಮಹಿಳೆಗೆ ಉದ್ಯಮಿಗಳು ವಂಚಿಸುವ ಒಂದೊಂದು ಪೈಸೆಯಲ್ಲೂ ಕೋಟ್ಯಂತರ ರೂಪಾಯಿ ಆದಾಯ ಮಾಡುತ್ತಾರೆ.

ಸಂಕಷ್ಟದಲ್ಲಿ ಉದ್ಯಮ

ಆದರೆ, ಬೀಡಿ ಉದ್ಯಮ ಕಳೆದ ಒಂದು ದಶಕದಿಂದ ಹಿನ್ನಡೆ ಕಾಣುತ್ತಿದೆ. 2003ರಲ್ಲಿ ಜಾರಿಯಾದ ತಂಬಾಕು ನಿಷೇಧ ಕಾಯಿದೆ ಶಿಕ್ಷಣ ಸಂಸ್ಥೆಗಳ ನೂರು ಮೀಟರ್ ವ್ಯಾಪ್ತಿಯಲ್ಲಿ ಬೀಡಿ ಮಾರಾಟವನ್ನು ನಿಷೇಧಿಸುತ್ತದೆ. ಸಾರ್ವಜನಿಕ ಧೂಮಪಾನ ನಿಷೇಧ, ಪ್ಯಾಕೇಟ್‌ಗಳಲ್ಲಿ ಅಪಾಯದ ಚಿಹ್ನೆ ಮತ್ತು ಪ್ರತಿ ವರ್ಷ ಬೀಡಿ ಮೇಲೆ ಹಾಕುತ್ತಿರುವ ಸುಂಕದಿಂದಾಗಿ ಬೀಡಿ ವ್ಯಾಪಾರಕ್ಕೆ ಅಲ್ಪ ಹಿನ್ನಡೆ ಉಂಟುಮಾಡಿದೆ.

20 ಲಕ್ಷಕ್ಕಿಂತ ಕಡಿಮೆ ಬೀಡಿ ಉತ್ಪನ್ನ ಇರುವ ಸಣ್ಣ ಬೀಡಿ ಉದ್ಯಮಿಗಳಿಗೆ ರಿಯಾಯಿತಿ ನೀಡಿರುವುದು ವಂಚನೆಗೆ ಮತ್ತಷ್ಟು ದಾರಿ ಮಾಡಿಕೊಟ್ಟಿದೆ. ಕರಾವಳಿಯಲ್ಲಿರುವ ಅಸಂಖ್ಯಾತ ಉದ್ಯಮಿಗಳು ಇದನ್ನೇ ಬಳಸಿದ್ದಾರೆ. ಕಾರ್ಮಿಕರಿಗೆ ಲಾಗ್ ಬುಕ್ ನೀಡದೆ ಅವರಿಗೆ ಸಿಗಬೇಕಾದ ಎಲ್ಲ ಸೌಖ್ಯಗಳನ್ನೂ ವಂಚಿಸಿ ಲಾಭವನ್ನು ಹೆಚ್ಚಿಸಿಕೊಂಡಿದ್ದಾರೆ.

ದುಡಿಯುವ ಮಹಿಳೆಯರ ಸ್ಥಿತಿಗತಿ

ಈಗಲೂ ದುಡಿಯುವ ಮಹಿಳೆಯರ ಸ್ಥಿತಿಗತಿ ಏನೇನೂ ಬದಲಾಗಿಲ್ಲ. ನಗರಗಳಲ್ಲಿ ಬೀಡಿ ಕಟ್ಟುವ ಮಹಿಳೆಯರ ಸಂಖ್ಯೆ ಕಡಿಮೆಯಾಗಿರಬಹುದು. ಇತ್ತೀಚಿನ ದಿನಗಳಲ್ಲಿ ಮಹಿಳೆಯರು, ಯುವತಿಯರು ಅಂಗಡಿ, ಷೋರೂಂಗಳಲ್ಲಿ ಕೆಲಸ, ನರ್ಸಿಂಗ್, ಹೋಟೇಲ್ ಉದ್ಯಮದಲ್ಲಿ ಸಣ್ಣ ಪುಟ್ಟ ಕೆಲಸಕ್ಕೆ ಹೋಗುತ್ತಾರೆ. ಆದರೆ, ಗ್ರಾಮೀಣ ಪ್ರದೇಶದಲ್ಲಿ ಈಗಲೂ ಬೀಡಿ ಪ್ರಮುಖ ಗೃಹ ಕೈಗಾರಿಕೆಯಾಗಿದೆ. ಅಧಿಕೃತ ಲೆಕ್ಕದ ಪ್ರಕಾರ, ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲೇ ಕನಿಷ್ಠ ನಾಲ್ಕು ಲಕ್ಷ ಬೀಡಿ ಕಾರ್ಮಿಕರಿದ್ದಾರೆ. ಇನ್ನು ಅನಧಿಕೃತ ಲೆಕ್ಕ ಸೇರಿಸಿದರೆ, ಈ ಸಂಖ್ಯೆ ದುಪ್ಪಟ್ಟು ಆಗುತ್ತದೆ.

ನಿಜ, ಬೀಡಿ ಕಟ್ಟುವುದು ಕಾರ್ಮಿಕರಿಗೆ ಆರೋಗ್ಯಕರವಲ್ಲ. ಬೀಡಿ ಕಟ್ಟುವ ಜೊತೆಗೆ ಅವರು ಸಾಕಷ್ಟು ರೋಗ ರುಜಿನಗಳಿಗೆ ತುತ್ತಾಗುತ್ತಾರೆ. ಮನೆಗೆಲಸದ ಜೊತೆಗೆ ಈ ಕೆಲಸವನ್ನೂ ಮಾಡಬೇಕಾದ ಅನಿವಾರ್ಯತೆ ಬೀಡಿ ಕಾರ್ಮಿಕರಿಗೆ ಇದೆ.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)

6ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 4ನೇ ಬ್ಲಾಕ್, ಜಯನಗರ, ಬೆಂಗಳೂರು-560 011.
ದೂರವಾಣಿ ಸಂಖ್ಯೆ: 26632792; 26542307 ಫ್ಯಾಕ್ಸ್: 26542308

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು 1987ರಲ್ಲಿ ಕಂಪನಿಯ ಅಧಿನಿಯಮ 1956ರ ಅಡಿಯಲ್ಲಿ ಸ್ಥಾಪಿಸಲ್ಪಟ್ಟಿದೆ. ನಿಗಮವು ಸಮಾಜದ ದುರ್ಬಲ ಹಾಗೂ ಅಸಹಾಯಕ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಸಾಧಿಸಲು ನೆರವಾಗುವ ಈ ಕೆಳಕಾಣಿಸಿದ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

1. ದೇವದಾಸಿ ಪುನರ್ವಸತಿ ಯೋಜನೆ :

'ದೇವದಾಸಿ ಪದ್ಧತಿಯು ಒಂದು ಸಮಾಜಿಕ ಅನಿಷ್ಟ ಪದ್ಧತಿಯಾಗಿದ್ದು, ಈ ಅನಿಷ್ಟ ಪದ್ಧತಿಯನ್ನು ನಿರ್ಮೂಲನೆಗೊಳಿಸಲು ಕ್ರಮ ವಹಿಸಲಾಗುತ್ತಿದೆ. ಮಾಜಿ ದೇವದಾಸಿ ಮಹಿಳೆಯರನ್ನು ಗುರುತಿಸಿ ಅವರ ಸಮಗ್ರ ಅಭಿವೃದ್ದಿಗಾಗಿ (1) ಆದಾಯ ಉತ್ಪನ್ನಕರ ಚಟುವಟಿಕೆಯಲ್ಲಿ ತೊಡಗಲು ನಿಗಮದಿಂದ ಶೇಕಡ 50ರಷ್ಟು ಸಹಾಯಧನ ಹಾಗೂ ಬ್ಯಾಂಕುಗಳಿಂದ ಶೇಕಡ 50ರಷ್ಟು ಸಾಲ ಒದಗಿಸಲಾಗುವುದು. (2) ಅರಿವು ಮೂಡಿಸುವ ಕಾರ್ಯಕ್ರಮ (3) ಆರೋಗ್ಯ ಶಿಬಿರ ಇತ್ಯಾದಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.

2. ಉದ್ಯೋಗಿನಿ ಯೋಜನೆ: ಉದ್ಯೋಗಿನಿ ಯೋಜನೆಯಲ್ಲಿ ಮಹಿಳೆಯರು ಸ್ವಯಂ ಉದ್ಯೋಗ ಹೊಂದಲು, ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಉದ್ದೇಶದಿಂದ ಗರಿಷ್ಠ ರೂ.1.00



ಲಕ್ಷ ಆರ್ಥಿಕ ನೆರವನ್ನು ಬ್ಯಾಂಕುಗಳ ವತಿಯಿಂದ ಸಾಲ ಹಾಗೂ ನಿಗಮದಿಂದ ಸಹಾಯ ಧನವನ್ನು ನೀಡಲಾಗುತ್ತಿದೆ.

3. ಮಹಿಳಾ ತರಬೇತಿ ಯೋಜನೆ: ಆರ್ಥಿಕವಾಗಿ ಹಿಂದುಳಿದ ಮಹಿಳೆಯರು, ನಿರ್ಗತಿಕರು, ಅಂಗವಿಕಲರು, ಪರಿಶಿಷ್ಟ ಜಾತಿ ಮತ್ತು



ಪರಿಶಿಷ್ಟ ಪಂಗಡದ ವರ್ಗಕ್ಕೆ ಸೇರಿದ ಮಹಿಳೆಯರಿಗೆ ವಿವಿಧ ರೀತಿಯ ಕೌಶಲ್ಯ ತರಬೇತಿಗಳಾದ ಕಂಪ್ಯೂಟರ್ ತರಬೇತಿ, ಬ್ಯೂಟಿ ಪಾರ್ಲರ್, ಉಡುಪು ವಿನ್ಯಾಸ, ಆಹಾರ ಸಂಸ್ಕರಣೆ, ಕೈ ಕಸೂತಿ/ಯಂತ್ರ ಕಸೂತಿ ಮತ್ತು ಹೋಂ ನರ್ಸಿಂಗ್, ಹೌಸ್ ಕೀಪಿಂಗ್ ಇನ್ನೂ ಮುಂತಾದ ತರಬೇತಿಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

4. ರಾಜ್ಯ ಸಂಪನ್ಮೂಲ ಕೇಂದ್ರ ಯೋಜನೆ: ಸರ್ಕಾರದ ವಿವಿಧ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡುವ ಹಾದಿಯಲ್ಲಿ ರಾಜ್ಯ ಸಂಪನ್ಮೂಲ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಲಿಂಗತಾರತಮ್ಯದ ಕುರಿತು ಕಾರ್ಯಾಗಾರ ಏರ್ಪಡಿಸುವುದು ಮತ್ತು ಮಹಿಳೆಯರಿಗೆ ಸ್ವ-ಉದ್ಯೋಗ ಪ್ರಾರಂಭಿಸಲು ಸಲಹೆ ನೀಡುವುದು ಹಾಗೂ ಇತರೆ ಇಲಾಖೆಗಳಲ್ಲಿ ಮಹಿಳೆಯರಿಗೆ ಲಭ್ಯವಿರುವ ಸೌಲಭ್ಯಗಳ ಮಾಹಿತಿ ನೀಡುವುದು. ಈ ಯೋಜನೆಯ ಉದ್ದೇಶವಾಗಿದೆ.

5.ಮಾರುಕಟ್ಟೆ ನೆರವು ಯೋಜನೆ : ಈ ಯೋಜನೆಯಡಿ ಮಹಿಳಾ ಉದ್ದಿಮೆದಾರು ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡಲು ವಸ್ತುಪ್ರದರ್ಶನಗಳ ಮೂಲಕ ವೇದಿಕೆಯನ್ನು ಕಲ್ಪಿಸುತ್ತದೆ. ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ವರ್ಷಕ್ಕೊಮ್ಮೆ 6 ದಿನಗಳ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳಗಳನ್ನು ಏರ್ಪಡಿಸುವುದರ ಮೂಲಕ ಮಹಿಳಾ ಉದ್ಯಮಿಗಳು ಮತ್ತು ಸಮರ್ಥ ಗ್ರಾಹಕರನ್ನು ಒಂದುಗೂಡಿಸುತ್ತದೆ. ವರ್ಷಕ್ಕೆ ಒಂದು ಬಾರಿ ರಾಜ್ಯ ಮಟ್ಟದ ವಸ್ತುಪ್ರದರ್ಶನ ಹಾಗೂ ಮಾರಾಟ ಮೇಳವನ್ನು ಮಾರ್ಚ್ ತಿಂಗಳಲ್ಲಿ ಬರುವ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಮಯದಲ್ಲಿ ಏರ್ಪಡಿಸಲಾಗುತ್ತಿದೆ.

ಕೇಂದ್ರ ಸರ್ಕಾರದ ಯೋಜನೆಗಳು:

(1) ಸ್ಟೆಪ್ ಯೋಜನೆ: ಇದು ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಯೋಜನೆ. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಈ ಯೋಜನೆಯನ್ನು ಅನುಷ್ಠಾನ ಮಾಡಲು ರಾಜ್ಯದ ನೊಡಲ್ ಏಜೆನ್ಸಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಈ ಯೋಜನೆಯಡಿ ಸಾಂಪ್ರಾದಾಯಕ ಘಟಕಗಳಾದ ಕೃಷಿ, ಹೈನುಗಾರಿಕೆ, ಮೀನುಗಾರಿಕೆ, ಸಾಮಾಜಿಕ, ಅರಣ್ಯ, ಕೈಮಗ್ಗ, ಕರಕುಶಲ ಮುಂತಾದ ಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಬಡ ಮಹಿಳೆಯರ ಕುಶಲತೆಯನ್ನು ವೃದ್ಧಿಗೊಳಿಸಲು ತರಬೇತಿ ಮತ್ತು ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಲು ಅವಶ್ಯ ತರಬೇತಿಗಳನ್ನು ನೀಡುವ ಬಗ್ಗೆ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು.

(2) ಹಿರಿಯ ನಾಗರೀಕರ ಹಗಲು ಯೋಗಕ್ಷೇಮ ಕೇಂದ್ರ: ಈ ಯೋಜನೆಯು ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದಿಂದ ನಿಗಮದ ಮುಖಾಂತರ ನಡೆಸುತ್ತಿದ್ದು ಈ ಯೋಜನೆಯ ಪ್ರಕಾರ ಅಂಗನವಾಡಿ ಕಾರ್ಯಕರ್ತೆಯರು ಮಧ್ಯಾಹ್ನದ ನಂತರ ಗ್ರಾಮಗಳಲ್ಲಿನ ಹಿರಿಯ ನಾಗರಿಕರನ್ನು ಕೇಂದ್ರದಲ್ಲಿರಿಸಿಕೊಂಡು ಅವರಿಗೆ ಅಗತ್ಯ ಮನೋರಂಜನೆ, ವೈದ್ಯಕೀಯ ಚಿಕಿತ್ಸೆ, ಯೋಗಕ್ಷೇಮ ಹಾಗೂ ಇತರೆ ಚಟುವಟಿಕೆಗಳಲ್ಲಿ ತೊಡಗಿಸುವುದಾಗಿರುತ್ತದೆ. ಈಗಾಗಲೇ 5 ಜಿಲ್ಲೆಗಳಲ್ಲಿ 100 ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು   ಅಧ್ಯಕ್ಷರು

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

ಕರ್ನಾಟಕ ರಾಜ್ಯ ಮಹಿಳಾ ಆಯೋಗ

ಆಯೋಗದಿಂದ ಮಹಿಳೆಯರಿಗೆ ದೊರೆಯುವ ಸೌಲಭ್ಯಗಳು

1. ಮಹಿಳಾ ಕಾನೂನುಗಳ ಬಗ್ಗೆ ಜಾಗೃತಿ ಶಿಬಿರ : ಮಹಿಳಾ ಕಾನೂನುಗಳು ಹಾಗೂ ಕೌಟುಂಬಿಕ ಕಾನೂನುಗಳ ಬಗ್ಗೆ ಮಹಿಳೆಯರಲ್ಲಿ ಅರಿವು ಮೂಡಿಸುವ ಶಿಬಿರಗಳನ್ನು ರಾಜ್ಯ ಮಟ್ಟದಲ್ಲಿ, ಜಿಲ್ಲಾ, ತಾಲ್ಲೂಕು ಮಟ್ಟದಲ್ಲಿ ನಡೆಸಲಾಗುತ್ತಿದೆ.

2. ಕೌಟುಂಬಿಕ ಸಲಹಾ ಕೇಂದ್ರ : ಆಯೋಗದಲ್ಲಿ ಕೌಟುಂಬಿಕ ಸಲಹಾ ಕೇಂದ್ರದಲ್ಲಿ ನೊಂದ ಮಹಿಳೆಯರು ದೂರರ್ಜಿಗಳನ್ನು ಸಲ್ಲಿಸಿ ಸಮಾಲೋಚನೆ ಮೂಲಕ ಆದಷ್ಟು ಮಟ್ಟಿಗೆ ಕೌಟುಂಬಿಕ ಸಮಸ್ಯೆ ಹಾಗೂ ಮಹಿಳೆಯರ ಇತರ ತೊಂದರೆಗಳಿಗೆ ಪರಿಹಾರ ಪಡೆಯುತ್ತಾರೆ.

3. ಪಾರಿವಾರಿಕ್ ಲೋಕ್ ಅದಾಲತ್ : ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದೊಂದಿಗೆ ತಿಂಗಳಿಗೊಮ್ಮೆ ಕೌಟುಂಬಿಕ ನ್ಯಾಯಲಯದಲ್ಲಿ ಪಾರಿವಾರಿಕ್ ಮಹಿಳಾ ಅದಾಲತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಕೌಟುಂಬಿಕ ನ್ಯಾಯಲಯದಲ್ಲಿ ಬಹಳ ಕಾಲದಿಂದ ಇತ್ಯರ್ಥವಾಗದೆ ಉಳಿದಿದ್ದ ಕೌಟುಂಬಿಕ ಪ್ರಕರಣಗಳ ವ್ಯಾಜ್ಯಗಳನ್ನು ಪಾರಿವಾರಿಕ್ ಮಹಿಳಾ ಅದಾಲತ್‌ನಲ್ಲಿ ಸಮಾಲೋಚನೆ ನಡೆಸಿ ವ್ಯಾಜ್ಯಗಳನ್ನು ಬಗೆಹರಿಸಲಾಗುತ್ತಿದೆ.

4. ಲೈಂಗಿಕ ಕಿರುಕುಳ ತಡೆಗಟ್ಟಲು ಇರುವ ದೂರು ನಿವಾರಣ ಸಮಿತಿ ರಚನೆ ಬಗ್ಗೆ ಮೇಲ್ವಿಚಾರಣೆ : ಕರ್ನಾಟಕ ರಾಜ್ಯ ಮಹಿಳಾ ಆಯೋಗವು ಮಹಿಳೆಯರು ಕೆಲಸ ನಿರ್ವಹಿಸುತ್ತಿರುವ ಸ್ಥಳಗಳಲ್ಲಿ ಆಗುತ್ತಿರುವ ಲೈಂಗಿಕ ಕಿರುಕುಳ, ದೂರು ನಿವಾರಣಾ ಸಮಿತಿಗಳ ರಚನೆ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿಯಲ್ಲಿ ಎರಡು ದೂರು ನಿವಾರಣ ಸಮಿತಿಗಳನ್ನು ರಚಿಸಲಾಗಿದ್ದು,ಈ ಸಮಿತಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಅಧೀನದಲ್ಲಿ ಬರುವ ಇಲಾಖೆಗಳಿಂದ ಸ್ವೀಕೃತವಾಗುವ ಲೈಂಗಿಕ ಕಿರುಕುಳಕ್ಕೆ ಸಂಬಂಧಪಟ್ಟ ದೂರುಗಳ ವಿಚಾರಣೆಯನ್ನು ನಡೆಸಲಾಗುವುದು ಹಾಗೂ ಎಲ್ಲಾ ನಿಗಮ:ಮಂಡಳಿ: ನಿರ್ದೇಶನಾಲಯಗಳಲ್ಲೂ ಸಹಾ ದೂರು ನಿವಾರಣಾ ಸಮಿತಿಗಳನ್ನು ರಚಿಸಲಾಗಿರುತ್ತದೆ.



5. ಕೌಟುಂಬಿಕ ನ್ಯಾಯಲಯಗಳಲ್ಲಿ ಮಹಿಳಾ ಸಹಾಯ ವೇದಿಕೆ : ರಾಜ್ಯದ ಏಳು ಜಿಲ್ಲೆಗಳಲ್ಲಿರುವ (ಬೆಂಗಳೂರು, ಮೈಸೂರು, ಗುಲ್ಬರ್ಗಾ, ರಾಯಚೂರು , ದಾವಣಗೆರೆ, ಬೆಳಗಾಂ, ಬಿಜಾಪುರ) ಕೌಟುಂಬಿಕ ನ್ಯಾಯಾಲಯಗಳಲ್ಲಿ ಮಹಿಳಾ ಸಹಾಯ ವೇದಿಕೆಗಳನ್ನು ಕರ್ನಾಟಕ. ರಾಜ್ಯ ಮಹಿಳಾ ಆಯೋಗದಿಂದ ತೆರೆಯಲು 2005-2006ರಿಂದ ಕ್ರಮ ಕೈಗೊಳ್ಳಲಾಗಿದ್ದು, ಈಗಾಗಲೇ ಮಾರ್ಚ್ 2006ರಿಂದ ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯಗಳಲ್ಲಿ ಹಾಗೂ ಅಕ್ಟೋಬರ್-2006ರಿಂದ ಇತರ 6 ಜಿಲ್ಲೆಗಳಲ್ಲಿ ಕೆಲಸ ಪ್ರಾರಂಭಿಸಲಾಗಿದೆ. ಕೌಟುಂಬಿಕ ನ್ಯಾಯಾಲಯಗಳಲ್ಲಿ ಮಹಿಳೆಯರಿಗೆ ದಾವೆ ಹೂಡಲು ಸಹಾಯ : ಸಲಹೆ ನೀಡುವುದನ್ನು ಸಲಹೆಗಾರರು ಮಾಡುತ್ತಿದ್ದಾರೆ.

6. ಗರ್ಭಧಾರಣಾ ಪೂರ್ವ ಮತ್ತು ಪ್ರಸವ ಪೂರ್ವ ಲಿಂಗಪತ್ತೆ ತಂತ್ರಜ್ಞಾನ (ನಿಯಂತ್ರಣ ಮತ್ತು ತಡೆಗಟ್ಟುವಿಕೆ) ಅನುಷ್ಠಾನದಲ್ಲಿ ಸಕ್ಷಮ ಪ್ರಾಧಿಕಾರದ ಪಾತ್ರ : ಗರ್ಭಧಾರಣಾ ಪೂರ್ವ ಮತ್ತು ಪ್ರಸವ ಪೂರ್ವ ಲಿಂಗಪತ್ತೆ ತಂತ್ರಜ್ಞಾನ (ನಿಯಂತ್ರಣ ಮತ್ತು ತಡೆಗಟ್ಟುವಿಕೆ) ಕಾಯ್ದೆಯ 1994ರ ನಿಯಮ 30 ರಡಿಯಲ್ಲಿ ದಿನಾಂಕ: 18-12-2001ರಂದು ಹೊರಡಿಸಿರುವ ಅಧಿಸೂಚನೆ ಸ: ಂಸಿ.ಎಸ್.ಎಸ್.ಎಂ/ 53/2001-02ರ ಪ್ರಕಾರ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಕಾರ್ಯದರ್ಶಿಯವರಿಗೆ ಆಸ್ಪತ್ರೆ ಮತ್ತು ಪ್ರಯೋಗ ಶಾಲೆಗಳಿಗೆ ಅನಿರೀಕ್ಷಿತ ಭೇಟಿ ನೀಡುವ ಬಗ್ಗೆ ಅಧಿಕಾರವನ್ನು ನೀಡಲಾಗಿದೆ.

7. ಆ್ಯಸಿಡ್ ದಾಳಿಗೆ ಒಳಗಾದ ಹಾಗೂ ದೌರ್ಜನ್ಯದಿಂದ ಸುಟ್ಟ ಗಾಯಗಳಾದ ಮಹಿಳೆಯರಿಗೆ ಧನ ಸಹಾಯ : ಆ್ಯಸಿಡ್ ದಾಳಿಗೆ ತುತ್ತಾದ ಮಹಿಳೆಯರಿಗೆ ತಕ್ಷಣ ಪರಿಹಾರವಾಗಿ ರೂ.20,000/-ಗಳನ್ನು ಸರ್ಕಾರಿ ಆದೇಶ ಸಂ:ಮಮಇ/268/ಮಮಅ/2007 ದಿ:6-11-2007 ರನ್ವಯ ಪರಿಹಾರವನ್ನು ನೀಡಲಾಗುತ್ತಿದ್ದು, ಇದನ್ನು ಮಾರ್ಪಡಿಸಿ ಸರ್ಕಾರಿ ಆದೇಶ ಸಂ:ಮಮಇ 268/ಮಮಅ/2007 ದಿ:27-11-2007ರನ್ವಯ ಇಂತಹ ಮಹಿಳೆಯರಿಗೆ ಚಿಕಿತ್ಸೆಗಾಗಿ ಹಾಗೂ ಪುನರ್ ವಸತಿಗಾಗಿ ಗಾಯದ ತೀವ್ರತೆಯ ಆಧಾರದ ಮೇಲೆ ಗರಿಷ್ಠ ರೂ.2,00,000/-ಗಳವರೆಗೆ ಪರಿಹಾರವನ್ನು ನೀಡಲು ಸರ್ಕಾರ ಆದೇಶ ಹೊರಡಿಸಿದೆ ಹಾಗೇಯೇ ದೌರ್ಜನ್ಯದಿಂದ ಸುಟ್ಟ ಗಾಯಕ್ಕೆ ಒಳಗಾದ ಬಡ ಮಹಿಳೆಯರಿಗೂ ಸಹ ಸರ್ಕಾರದ ಆದೇಶ ಸಂಖ್ಯೆ:ಮಮಇ/167 ಮಮಅ/2008 ದಿ:3-7-2008 ರಂತೆ ರೂ.2,00,000/-ಗಳ ಧನ ಸಹಾಯವನ್ನು ನೀಡಬಹುದಾಗಿದೆ.

ಸಹಿ
ಕಾರ್ಯದರ್ಶಿಗಳು
ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಬಹುಮಹಡಿ ಕಟ್ಟಡ, ಬೆಂಗಳೂರು 560 001


ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ 54,260 ಅಂಗನವಾಡಿ ಕೇಂದ್ರಗಳು ಹಾಗೂ ಮಿನಿ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಈಚೆಗೆ 3ನೇ ಹಂತದ ವಿಸ್ತರಣೆಯಲ್ಲಿ 5,786 ಅಂಗನವಾಡಿ ಕೇಂದ್ರಗಳು ಮತ್ತು 2,926 ಮಿನಿ ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು, ಒಟ್ಟು 63,377 ಅಂಗನವಾಡಿ ಕೇಂದ್ರಗಳಿರುತ್ತವೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 07-10-04 ರಲ್ಲಿ ನೀಡಿದ್ದ ನಿರ್ದೇಶನ 'ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಅಂಗನವಾಡಿ ಗಳಲ್ಲಿನ ಆಹಾರ ಸರಬಾರಾಜಿಗೆ ಗುತ್ತಿಗೆದಾರರನ್ನು ಬಳಸಬಾರದೆಂದು, ಪೂರಕ ಪೌಷ್ಟಿಕ ಆಹಾರವನ್ನು ತಯಾರಿಸಲು ಗ್ರಾಮ ಸಮುದಾಯ, ಸ್ವಸಹಾಯಗುಂಪುಗಳು ಮತ್ತು ಮಹಿಳಾ ಮಂಡಳಿಗಳನ್ನು ಬಳಸಿಕೊಂಡು ಐ ಸಿ ಎಸ್ ನಿಧಿಯನ್ನು ಉಪಯೋಗಿಸಿಕೊಳ್ಳಬೇಕೆಂದು' ಆದೇಶಿಸಿರುತ್ತದೆ.



ಆದರಂತೆ ಸಾಮರ್ಥ್ಯ ನಿರ್ಮಾಣಗಾರರಾದ ಮೆ: ಕ್ರಿಸ್ಪಿ ಫ್ರೈಡ್ ಗ್ರಾಂ ಇಂಡ್ರಸ್ಟ್ರಿ ಸಂಸ್ಥೆಯು ಈಗಾಗಲೇ ರಾಜ್ಯಾದ್ಯಂತ 175 ತಾಲ್ಲೂಕುಗಳನ್ನೊಳಗೊಂಡಂತೆ 137 ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಮತ್ತು ತರಬೇತಿ ಕೇಂದ್ರಗಳಲ್ಲಿ ಯಂತ್ರಗಳನ್ನು ಸ್ಥಾಪಿಸಿದ್ದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ನೀಡಿದ ಅನುಮೋದನೆಯನ್ವಯ ಪ್ರತಿ ಉತ್ಪಾದನಾ ಘಟಕದಲ್ಲಿ 22 ರಿಂದ 32 ಸದಸ್ಯರನ್ನು ಪೂರಕ ಪೌಷ್ಟಿಕ ಆಹಾರವನ್ನು ತಯಾರಿಸಲು ಆಯ್ಕೆ ಮಾಡಲಾಗಿದ್ದು, ಅಂಗನವಾಡಿ ಕೇಂದ್ರಗಳ ಬೇಡಿಕೆಗಳಿಗನುಸಾರವಾಗಿ ಪೂರಕ ಪೌಷ್ಟಿಕ ಆಹಾರವನ್ನು ತಯಾರಿಸುತ್ತಿವೆ.




ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಘಟಕಗಳಲ್ಲಿ 7 ವಿವಿಧ ಆಹಾರಗಳನ್ನು ತಯಾರಿಸಿ ಸರಬರಾಜು ಮಾಡಲಾಗುತ್ತಿದೆ. ಇದಕ್ಕೆ ಅಗತ್ಯವಿರುವ ಅಕ್ಕಿ ಮತ್ತು ಗೋಧಿಯನ್ನು ಕೇಂದ್ರ ಸರ್ಕಾರದ ಭಾರತೀಯ ಆಹಾರ ನಿಗಮದಿಂದ ಪಡೆಯಲಾಗುತ್ತಿದೆ. ಅಕ್ಕಿಯಿಂದ ಸಿಹಿ ಮತ್ತು ಖಾರದ FRM ಗಳನ್ನು ಗೋಧಿಯಿಂದ ಸಿಹಿ, ಖಾರ FRM ಗಳು ಮತ್ತು ಅಮಲೈಸ್ ಶಕ್ತಿಯುತ ಆಹಾರ ಹಾಗೂ ಶಕ್ತಿಯುತ ಆಹಾರವನ್ನು ತಯಾರಿಸಲಾಗುತ್ತಿದೆ. ಇದರಲ್ಲಿ ಕೇಂದ್ರ ಸರ್ಕಾರ ನಿಗದಿಪಡಿಸಿದ ಪ್ರೋಟೀನ್ ಕ್ಯಾಲೊರಿ ಮತ್ತು ಮೈಕ್ರೊ ನ್ಯೂಟ್ರಿಯೆಂಟ್ಸ್ ಗಳನ್ನು ಒಳಗೊಂಡಿರುತ್ತದೆ.



ರಾಜದಲ್ಲಿ 137 ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಕೇಂದ್ರಗಳು ಕಾರ್ಯನಿರತವಾಗಿದ್ದು ಇದರಲ್ಲಿ 22-32 ಮಹಿಳೆಯರು ಕೆಲಸ ನಿರ್ವಹಿಸುತ್ತಿದ್ದಾರೆ. ಇವರುಗಳು ಬಡತನದ ಹಿನ್ನೆಲೆಯಿಂದ ಬಂದವರಾಗಿದ್ದು ವಿಧವೆಯರು, ಅಂಗವಿಕಲರು, ಪರಿತ್ಯಕ್ತೆಯರು ಫಲಾನುಭವಿಗಳ ತಾಯಂದಿರು ಸ್ತ್ರೀಶಕ್ತಿ ಸ್ವಸಹಾಯ ಗುಂಪಿನ ಸದಸ್ಯರು ಆಗಿರುತ್ತಾರೆ. ಈ ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಹಾಗೂ ತರಬೇತಿ ಕೇಂದ್ರಗಳು ಆಹಾರ ದಾಸ್ತಾನು ಸುಲಭವಾಗಿ ಅಂಗನವಾಡಿ ಕೇಂದ್ರಗಳಿಗೆ ಸರಬರಾಜಾಗಲು ತಾಲ್ಲೂಕು ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿವೆ.

- ನಿರ್ದೇಶಕರು



ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

4ನೇ ಮಹಡಿ, ಕಾಫಿ ಬೋರ್ಡ್ ಬಿಲ್ಡಿಂಗ್, ನಂ.1 ಡಾ. ಅಂಬೇಡ್ಕರ್ ವೀದಿ, ಬೆಂಗಳೂರು 560 001

ದೂರವಾಣಿ : 080 22352997-98, ಫ್ಯಾಕ್ಸ್ 080-22352998

ಕಾವೇರಿ ಜಲಾನಯನ ಪ್ರದೇಶದ ರೈತರ ಸರ್ವತೋಮುಖ ಅಭಿವೃದ್ಧಿಗಾಗಿ ಉದಯವಾಗಿರುವುದು ಕಾವೇರಿ ನೀರಾವರಿ ನಿಗಮ ನಿಯಮಿತ

"ಹನಿ ಹನಿ ನೀರು ಉಳಿಸಿ,
ಜಲ ಕ್ಷಾಮ ಅಳಿಸಿ"


ಅಭಿನಂದನೆಗಳೊಂದಿಗೆ,

ಎಂ.ಎ.ಸಾದಿಕ್, ಐ.ಎ.ಎಸ್
ವ್ಯವಸ್ಥಾಪಕ ನಿರ್ದೇಶಕರು.


To Mangalore
Kasaragod
Kannur
Payyambalam Beach
St. Angelo's Fort
ARABIAN SEA
Muzhuppilangad
Drive-in Beach
Dharmadam Island
Thalassery Fort
Mahe
To Wayanad
Not to scale
Calicut
Experience Malabar
Tropical forests Tree houses Drive-in beach Historic forts
Spice trails Theme village Temple art forms Malabari cuisine and more
Wake up to Malabar
Suddenly, Kerala's hideaway beaches in Malabar are no longer a secret. Muzhuppilangad, the State's only drive-in beach where travellers can speed right through the beach sands for over four kilometres is blazing a new holiday trail. The wind-in-your-hair drive through an unpaved path fringed by coconut palms is just what a beach buff would die for. The excellent views, the sun-soaked, pristine ambience and the adjacent Dharmadam Island add more fun to the package. To check out Muzhuppilangad Beach and a whole range of experiences that make Malabar a unique, exotic part of God's Own Country, log on to www.keralatourism.org/malabar. You'll wake up to a new world.
kerala
God's Own Country
www.keralatourism.org
Call 1-800-425-4747 Kerala Tourism Park View Thiruvananthapuram 695 033 Kerala India
Fax: +91 471 2322279 Email: info@keralatourism.org
STARK. Tvm. 3708



ಬಿಡಿಎ-ಆಧುನಿಕ ಬೆಂಗಳೂರಿನ ಶಿಲ್ಪಿ



ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

ಬೆಂಗಳೂರು ಜಗತ್ತಿನಲ್ಲೆ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಕೆಲವೇ ಮಹಾ ನಗರಗಳಲ್ಲೊಂದು. 2021ರ ವೇಳೆಗೆ ಇಲ್ಲಿಯ ಜನಸಂಖ್ಯೆ 1 ಕೋಟಿ ತಲುಪಲಿದೆ. ಭಾರತದ ತಂತ್ರಜ್ಞಾನ ರಾಜಧಾನಿ, ಸಿಲಿಕಾನ್ ವ್ಯಾಲಿ ಬೆಂಗಳೂರು ರಾಷ್ಟ್ರದ ಆರ್ಥಿಕ ಬೆಳವಣಿಗೆಯಲ್ಲಿ ಅತಿ ಮುಖ್ಯ ಪಾತ್ರ ವಹಿಸುತ್ತಿದೆ. ಬೆಂಗಳೂರಿನ ಈ ಭಾರೀ ಮುನ್ನಡೆಗೆ ಇಲ್ಲಿನ ಔದ್ಯಮಿಕ-ಬೌದ್ಧಿಕ ಸಾಮರ್ಥ್ಯಗಳು, ನಿರಂತರ ಪ್ರಗತಿಪರ ಖಾಸಗೀ, ಸರ್ಕಾರೀ ಕಾರ್ಯ ಚಟುವಟಿಕೆಗಳೇ ಕಾರಣ.

ಇಂದು ಅಂತರರಾಷ್ಟ್ರೀಯ ಮಹಾನಗರವಾಗುತ್ತಿರುವ ಬೆಂಗಳೂರಿನ ರಭಸದ ಬೆಳವಣಿಗೆಗೆ ಅಗತ್ಯವಾದ ಭಾರಿ ಪ್ರಮಾಣದ ವಸತಿ ಸೌಲಭ್ಯ, ರಸ್ತೆ, ಉತ್ತಮ ಸಾರಿಗೆ ವ್ಯವಸ್ಥೆ ಮೌಲ್ಯಾಧಾರಿತ ಸೇವೆ ಸೌಕರ್ಯಗಳನ್ನು ಒದಗಿಸುವ ಕಾರ್ಯಗಳು ನಿರಂತರವಾಗಿ ಅಷ್ಟೇ ರಭಸದಿಂದ ಸಾಗುತ್ತಿವೆ.

ಬೆಂಗಳೂರಿನ ಸಮರ್ಪಕ ಬೆಳವಣಿಗೆ, ಅಭಿವೃದ್ಧಿ ಹಾಗೂ ನಿರ್ವಹಣೆಗಾಗಿಯೇ ಜನ್ಮ ತಳೆದ ಬಿಡಿಎ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ) ತನ್ನ 30 ವರ್ಷಗಳ ಸಾರ್ಥಕ ಜೀವನಾವಧಿಯಲ್ಲಿ ಮಹಾನಗರದ ಬೆಳವಣಿಗೆಗೆ ಹೊಸ ತಿರುವು ನೀಡಿ, ಬೆಂಗಳೂರಿನ ಸರ್ವಾಂಗೀಣ ಅಭಿವೃದ್ಧಿಯ ಆಧಾರ ಸ್ತಂಭವಾಗಿ ಬೆಳೆದು ನಿಂತಿದೆ.

ವಸತಿ ಸೌಲಭ್ಯ ಪೂರೈಕೆಯಲ್ಲಿ ಬಿಡಿಎ ಇಷ್ಟು ವರ್ಷಗಳಲ್ಲಿ ಸಾಧಿಸಿರುವ ಅಪೂರ್ವ ಸಾಧನೆಗಳು.

- ನಿರ್ಮಿಸಿರುವ ಬಡಾವಣೆಗಳು - ಮಲ್ಲೇಶ್ವರಂ, ಬಸವನಗುಡಿ, ಮೊದಲ್ಗೊಂಡು ಏಷ್ಯದ ಅತಿದೊಡ್ಡ ಮತ್ತು ಅತ್ಯುತ್ತಮ ಯೋಜಿತ ಬಡಾವಣೆಗಳಾದ ಜಯನಗರ, ಕೋರಮಂಗಲ, ಬಿಟಿಎಂ, ಎಚ್‌ಎಸ್‌ಆರ್, ಆರ್‌ಎಂವಿ, ಇಂದಿರಾನಗರ, ಎಚ್‌ಬಿಆರ್, ವಿಜಯನಗರ, ಎಚ್‌ಆರ್‌ಬಿಆರ್, ಬಿಎಸ್‌ಕೆ ಬಡಾವಣೆಗಳು ಇತ್ತೀಚಿನ ಅರ್ಕಾವತಿ ಬಡಾವಣೆಯವರೆಗೆ ಸುಮಾರು 62 ಬಡಾವಣೆಗಳನ್ನು ರೂಪಿಸಿದೆ. ಇದರ ಮೂಲಕ ಸುಮಾರು 2 ಲಕ್ಷ ವಸತಿ ನಿವೇಶನಗಳನ್ನು ಸೃಷ್ಟಿಸಿದೆ.
- ನಗರದ ಸಮತೋಲನವಾದ ಬೆಳವಣಿಗೆಗೆ ಮತ್ತು ಸಾಂಸ್ಥಿಕ ಚಟುವಟಿಕೆಗಳಿಗಾಗಿ ನಾಗರಿಕರ ಸೌಲಭ್ಯದ (ಸಿಎ) ನಿವೇಶನಗಳನ್ನು ರೂಪಿಸಿ ನಗರಕ್ಕೆ ಒಂದು ಹೊಸ ರೂಪ ಕೊಟ್ಟಿದೆ. ನ್ಯಾಷನಲ್ ಪಬ್ಲಿಕ್ ಸ್ಕೂಲ್, ಸೋಫಿಯಾ ಹೈಸ್ಕೂಲ್, ಪ್ರೆಸಿಡೆನ್ಸಿ ಸ್ಕೂಲ್, ಸ್ಟೆಲ್ಲಾ ಮೇರಿಸ್ ಸ್ಕೂಲ್, ಬೆಥಾನಿ ಸ್ಕೂಲ್ ಮುಂತಾದ ಹೆಸರಾಂತ ಶಾಲೆಗಳು ಹಾಗೂ ನ್ಯಾಷನಲ್ ಕಾಲೇಜ್, ಮೌಂಟ್ ಕಾರ್ಮೆಲ್ ಕಾಲೇಜ್, ವಿಜಯ ಕಾಲೇಜ್, ಜ್ಯೋತಿ ನಿವಾಸ್ ಕಾಲೇಜ್, ಎನ್‌ಐಎಫ್‌ಟಿ, ಐಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ರಮಣ ಮಹರ್ಷಿ ಅಕಾಡೆಮಿ ಫಾರ್ ಬ್ಲೈಂಡ್, ಎಸ್‌ಎಂಕೆಆರ್‌ವಿ ಮುಂತಾದ ಪ್ರತಿಷ್ಠಿತ ಕಾಲೇಜುಗಳಿಗೆ ನಿವೇಶನಗಳನ್ನು ಒದಗಿಸಿದೆ.
- ನಾಗರಿಕರ ಮನರಂಜನೆ, ಸೌಕರ್ಯ, ಆರೋಗ್ಯ, ಕಲೆ, ಸಾಹಿತ್ಯ, ಸಂಸ್ಕೃತಿಯ ಪ್ರವರ್ಧನೆಗೂ ಬಿಡಿಎ ಆದ್ಯತೆ ನೀಡಿದೆ. ಕ್ಲಬ್‌ಗಳು, ಅಂಚೆ ಕಚೇರಿಗಳು, ಕ್ರೀಡಾಂಗಣ, ರಂಗಮಂದಿರ ಆಸ್ಪತ್ರೆಗಳಿಗೆ ಸೂಕ್ತ ನಿವೇಶನ ನೀಡಿದೆ. ಮೋದಿ ಆಸ್ಪತ್ರೆ, ಬೆಂಗಳೂರು ಕಿಡ್ನಿ ಫೌಂಡೇಶನ್, ಬೆಂಗಳೂರು ವೈದ್ಯಕೀಯ ಮತ್ತು ಕ್ಯಾನ್ಸರ್ ಸಂಶೋಧನಾ ಕೇಂದ್ರ ಮುಂತಾದ ಆಸ್ಪತ್ರೆಗಳು, ಚೌಡಯ್ಯ ಸ್ಮಾರಕ ಭವನ, ರಂಗ ಶಂಕರ, ಲಲಿತಕಲಾ ಮಂದಿರದಂತಹ ಸಾಂಸ್ಕೃತಿಕ ಕೇಂದ್ರಗಳು ಮುಂತಾದವುಗಳು ಬಿಡಿಎ ರೂಪಿಸಿರುವ ಸಿಎ ನಿವೇಶನಗಳಲ್ಲಿ ತಲೆಯುತ್ತಿವೆ.

ಪರಿಸರ ಕಾಳಜಿ

- ಎಲ್ಲಾ ವಸತಿ ಪ್ರದೇಶಗಳಲ್ಲಿ ಉದ್ಯಾನಗಳ ನಿರ್ಮಾಣ ಮತ್ತು ಬಯಲು ಸ್ಥಳಗಳ ಅನುಕೂಲಕ್ಕೆ ವ್ಯವಸ್ಥೆ.
- ಕೆರೆಗಳ ಸಂರಕ್ಷಣೆ - ನಗರದ ಸೌಂದರ್ಯ ಮತ್ತು ವಾತಾವರಣ ಕಾಪಾಡಲು ಪ್ರಯತ್ನ, ಲಾಲ್‌ಬಾಗ್, ಬೆನ್ನಿಗಾನಹಳ್ಳಿ ಮತ್ತು ಅಗರ ಕೆರೆಗಳ ನವೀಕರಣ ಮತ್ತು ನಿರ್ವಹಣೆ.

ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯಗಮನ

- ಇಂದಿರಾನಗರ, ಬನಶಂಕರಿ, ಎಚ್‌ಎಸ್‌ಆರ್ ಬಡಾವಣೆ, ಎಚ್‌ಬಿಆರ್ ಬಡಾವಣೆ ಮುಂತಾದ ವಿವಿಧ ಬಡಾವಣೆಗಳಲ್ಲಿ 15 ವಾಣಿಜ್ಯ ಸಂಕೀರ್ಣಗಳ ನಿರ್ಮಾಣ.
- ನಗರದ ವಾಹನ ಸಂಚಾರ ದಟ್ಟಣೆಯನ್ನು ತಪ್ಪಿಸಲು ಮತ್ತು ವಾಹನಗಳ ಸುಲಲಿತ ಸಂಚಾರಕ್ಕಾಗಿ ಹೊರ ವರ್ತುಲ ರಸ್ತೆ ನಿರ್ಮಾಣದ ಜೊತೆಗೆ ಹಲವಾರು ಸಂಚಾರ ವ್ಯವಸ್ಥೆ. ಡೈರಿ ವೃತ್ತ, ವೈಟ್‌ಫೀಲ್ಡ್ ರಸ್ತೆ, ಕೇಂದ್ರ ರೇಷ್ಮೆ ಮಂಡಳಿ, ಹೆಬ್ಬಾಳ, ಆನಂದರಾವ್ ವೃತ್ತ, ವಿಮಾನ ನಿಲ್ದಾಣ ರಸ್ತೆ ಮತ್ತು ಜಯದೇವ ಆಸ್ಪತ್ರೆ ಜಂಕ್ಷನ್‌ನಲ್ಲಿ ಏಳು ಹೊಸ ಗ್ರೇಡ್ ಸೆಪರೇಟರ್‌ಗಳ ನಿರ್ಮಾಣ.

ವಿಶೇಷ ಚಟುವಟಿಕೆಗಳು

- ಬಿಡಿಎ ಆಧುನಿಕತೆಯ ವಾತಾವರಣಕ್ಕೆ ಸರಿಸಾಟಿಯಾಗಿ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಣೆ ಮಾಡುತ್ತಾ ಸಾಗಿದೆ. ಆರೋಗ್ಯ ಕ್ಷೇತ್ರಕ್ಕೂ ಅಡಿ ಇಟ್ಟಿದೆ. ಬೌರಿಂಗ್ ಆಸ್ಪತ್ರೆಯಲ್ಲಿ ಅಪಘಾತ ತುರ್ತು ಚಿಕಿತ್ಸಾ ವಿಭಾಗ ನಿರ್ಮಿಸಿದೆ.
- ಆಧುನಿಕ ಸ್ವರೂಪದ ತ್ಯಾಜ್ಯ ನೀರಿನ ಸಂಸ್ಕರಣಾ ಸ್ಥಾವರದ ಸ್ಥಾಪನೆ ಮೂಲಕ ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕ್‌ನಲ್ಲಿ ಮಾಲಿನ್ಯ ನೀರು ಶುದ್ಧೀಕರಣದಲ್ಲಿ ಹೊಸ ಅಧ್ಯಾಯ ಆರಂಭಿಸಿದೆ.
- ಲಾಲ್‌ಬಾಗ್ ಗಾಜಿನ ಮನೆ ಮತ್ತು ಗಾಂಧಿ ಭವನವನ್ನು ನವೀಕರಿಸಿ ಐತಿಹಾಸಿಕ ಸ್ಮಾರಕಗಳ ಸಂರಕ್ಷಣಾ ಕಾರ್ಯಕ್ಕೂ ತನ್ನನ್ನು ತೊಡಗಿಸಿಕೊಂಡಿದೆ.

ದೂರದೃಷ್ಟಿಯ ಯೋಜನೆಗಳು

- ಪೆರಿಫೆರಲ್ ವರ್ತುಲ ರಸ್ತೆ ನಿರ್ಮಾಣದ ಮೂಲಕ ಸಂಚಾರ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಪರಿವರ್ತನೆ ತರುವ ನಿಟ್ಟಿನಲ್ಲಿ ಬಿ.ಡಿ.ಎ. ಕಾರ್ಯೋನ್ಮುಖವಾಗಿದೆ.

ನಗರದ ಸುತ್ತ ಹೊಸ ಬಡಾವಣೆಗಳು

- ನಗರದ ಹೊರವಲಯದಲ್ಲಿ ಸುಮಾರು 56 ಗ್ರಾಮಗಳನ್ನು ಒಳಗೊಂಡಂತೆ ಐದು ಪರಿಸರ ಸ್ನೇಹಿ ಬಡಾವಣೆ ನಿರ್ಮಿಸಲು ನಿರ್ಧರಿಸಿದೆ. ಭೂ ಮಾಲೀಕರ ಸಕ್ರಿಯ ಪಾಲ್ಗೊಳ್ಳುವಿಕೆ ಮತ್ತು ಸಹಕಾರದೊಡನೆ ಈ ಕಾರ್ಯ ಸಾಧನೆ.
- ಸಾರ್ವಜನಿಕರಿಗೆ ವಿವಿಧ ಅಳತೆಗಳ 90,000 ನಿವೇಶನಗಳ ಹಂಚಿಕೆಗೆ ಯೋಜನೆ.
- ಈಗಾಗಲೇ ಕೆಂಪೇಗೌಡ ಬಡಾವಣೆ ನಿರ್ಮಾಣದ ಪ್ರಕ್ರಿಯೆ ಆರಂಭವಾಗಿದೆ.

ಕೆರೆಗಳ ಸಮಗ್ರ ಅಭಿವೃದ್ಧಿ

- ಕೆರೆಗಳ ಸಮಗ್ರ ಅಭಿವೃದ್ಧಿಗಾಗಿ ಸಣ್ಣ ನೀರಾವರಿ ಮತ್ತು ಜಿಲ್ಲಾ ಪಂಚಾಯತ್ ಒಟ್ಟು 12 ಕೆರೆಗಳನ್ನು ಬಿಡಿಎಗೆ ವಹಿಸಿದೆ. ಅಭಿವೃದ್ಧಿಪಡಿಸಲಾಗುವ ಕೆರೆಗಳು - ಉಲ್ಲಾಳ, ಮಲ್ಲತ್ತಹಳ್ಳಿ, ಕೊಮ್ಮಘಟ್ಟ, ರಾಮಸಂದ್ರ, ಜಕ್ಕೂರು, ಪಚೇನಹಳ್ಳಿ, ಸಂಪಿಗೆಹಳ್ಳಿ, ವೆಂಕಟೇಶ್‌ಪುರ, ಸೋಮಾಪುರ, ಕೋಣಸಂದ್ರ, ತಲಗಟ್ಟಪುರ ಮತ್ತು ಕೊತ್ತನೂರು ಕೆರೆಗಳು.

ಪರಿಷ್ಕೃತ ಮಾಸ್ಟರ್ ಯೋಜನೆ 2015

- ಮುಂಬರುವ ಹತ್ತು ವರ್ಷಗಳಿಗೆ ಈ ಯೋಜನೆ. 1,219.50 ಚ.ಕಿ.ಮೀ.ಗಳ ಸ್ಥಳೀಯ ಯೋಜನಾ ಪ್ರದೇಶ ಈ ಯೋಜನೆಗೆ ಸೇರ್ಪಡೆ. ಗ್ರೇಟರ್ ಬೆಂಗಳೂರು ಪ್ರದೇಶವೂ ಇದಕ್ಕೆ ಸೇರ್ಪಡೆ.

ಬಿಡಿಎ ಮುಂದಾಳತ್ವದಲ್ಲಿ ಬೆಂಗಳೂರು ಅಭಿವೃದ್ಧಿ ಪಥದಲ್ಲಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-20
www.bdabangalore.org